ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME - 13 ಸಂಪುಟ-13 | ISSUE - 46 ಸಂಚಿಕೆ- 46 | PAGE-8 ಪುಟ-8 | ಮಂಗಳವಾರ 25.03.2025 | RS.2/- ಬೆಲೆ 2/-

## ಮಳೆಗೆ ಮನೆ ಗೋಡೆ ಕುಸಿತ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 24 :ಪಟ್ಟಣ ಸೇರಿದಂತೆ ವಿವಿಧೆಡೆ ಶುಕ್ರವಾರ ರಾತ್ರಿ ಸುರಿದ ಮಳೆಗೆ ತಾಲ್ಲೂಕಿನ ಪೋಲಕಪಳ್ಳಿ ಗ್ರಾಮದಲ್ಲಿ ಮನೆಯೊಂದಕ್ಕೆ ಹಾನಿ ಆಗಿದೆ ಎಂದು ತಹಶೀಲ್ದಾರ್ ಮಂಜುನಾಥ್ ಪಂಚಾಳ್ ತಿಳಿಸಿದರು.

ಪೋಲಕಪಳ್ಳಿ ಗ್ರಾಮದ ಲಕ್ಷ್ಮಿ ಬಸಪ್ಪ ಅವರಿಗೆ ಸೇರಿದ ಮನೆ ಇದಾಗಿದೆ.

ತಾಲ್ಲೂಕಿನಾದ್ಯಂತ ಶುಕ್ರವಾರ ತಡರಾತ್ರಿಯವರೆಗೂ ಮಳೆ ಸುರಿದಿದೆ.

ಆಲಿಕಲ್ಲು ಮಳೆ: ಹುಮನಾಬಾದ್ ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಶನಿವಾರ ಮಧ್ಯಾಹ್ನ ಸುಮಾರು ಐದು ನಿಮಿಷ ಆಲಿಕಲ್ಲು ಸಮೇತ ಮಳೆ ಸುರಿಯಿತು.



ಕಲಬುರಗಿ: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ರವರಿಗೆ ಮಾಜಿ ಸಚಿವ ರಾಜಶೇಖರ ಪಾಟೀಲ. ಹಾಗೂ ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ ರವರು ಭೇಟಿ ಮಾಡಿ ಚರ್ಚಿಸಿದರು

## ಸಂಸದರ ವೇತನ ಶೇ.24 ರಷ್ಟು ಹೆಚ್ಚಳ

ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ:ಮಾ.24: ಇತ್ತ ರಾಜ್ಯದಲ್ಲಿ ಮುಖ್ಯಮಂತ್ರಿ, ಸಚಿವರು, ಶಾಸಕರ ವೇತನ ಹಾಗೂ ಭತ್ಯೆಯಲ್ಲಿ ಶೇ. 100 ಹೆಚ್ಚಳ ಮಾಡಿದ ಬೆನ್ನಲ್ಲೇ ಅತ್ತ ಸಂಸದರ ವೇತನವೂ ಭಾರಿ ಹೆಚ್ಚವಾಗಿದ್ದು, ಏಪ್ರಿಲ್ 1, 2023 ರಿಂದ ಪೂರ್ವಾನ್ವಯವಾಗುಂತೆ ಜಾರಿಗೆ ಬರುವಂತೆ ಕೇಂದ್ರ ಸರ್ಕಾರ ಸೋಮವಾರ ಆದೇಶ



ಹೊರಡಿಸಿದೆ.

ಸಂಸದೀಯ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಅಧಿಸೂಚನೆಯಲ್ಲಿ, ಹಾಲಿ ಸಂಸದರ ವೇತನವನ್ನು ಶೇ. 24ರಷ್ಟು (2ನೇ ಪುಟ ನೋಡಿ)

## ತೊಗರಿ ಹೊಟ್ಟಿನಲ್ಲಿ ಬಚ್ಚಿಟ್ಟಿದ್ದ ಗಾಂಜಾ ಪತ್ತೆ ಮಾಡಿದ ಶ್ವಾನ ದೀಪಾ..!



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 24 : ತೊಗರಿ ಹೊಟ್ಟಿನಲ್ಲಿ ಬಚ್ಚಿಟ್ಟಿದ್ದ 7 ಲಕ್ಷಕ್ಕೂ ಅಧಿಕ ಮೌಲ್ಯದ ಗಾಂಜಾವನ್ನು ಪೊಲೀಸ್ ಇಲಾಖೆಗೆ ಸೇರಿದ ಶ್ವಾನ ಪತ್ತೆ ಹಚ್ಚಿದ ಘಟನೆ ಬೀದರ್ ಜಿಲ್ಲೆಯ ಔರಾದ್ ತಾಲೂಕಿನ

(2ನೇ ಪುಟ ನೋಡಿ)

## ಬೀದರ್‌ನಲ್ಲಿ ಗುಡುಗು ಸಹಿತ ಮಳೆ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 24 : ಬೀದರ್ ಜಿಲ್ಲೆಯ ಬೀದರ್, ಚಿಟಗುಪ್ಪ ಹಾಗೂ ಹುಮನಾಬಾದ್ ತಾಲ್ಲೂಕು ವ್ಯಾಪ್ತಿಯಲ್ಲಿ ಗುಡುಗು ಸಹಿತ ಮಳೆ ಸುರಿದಿದೆ. ಬೀದರ್ ನಗರ, ಬೀದರ್ ತಾಲ್ಲೂಕಿನ ಅಮಲಾಪುರ, ಚಿಟ್ಟಾ, ಘೋಡಂಪಳ್ಳಿ, ಗುನ್ನಳ್ಳಿ, ಗೋರನಳ್ಳಿ, ಶಹಾಪುರ, ಜನವಾಡ, ಮರಕಲ್, ಚಿಕ್ಕಪೇಟೆ



ಸೇರಿದಂತೆ ಹಲವು ಕಡೆಗಳಲ್ಲಿ ಗುಡುಗಿನೊಂದಿಗೆ ಮಳೆ ಆಗಿದೆ. ಅರ್ಧಗಂಟೆಗೂ ಹೆಚ್ಚು ಕಾಲ ಜೋರು ಮಳೆ ಸುರಿದಿದ್ದರಿಂದ ನಗರದ ಮನ್ನಳ್ಳಿ ರಸ್ತೆಯ ಬೊಮ್ಮಗೊಂಡೇಶ್ವರ ವೃತ್ತ, ಹಾರೂರಗೇರಿ ಕಮಾನ್ ಬಳಿ ಅಪಾರ ಪ್ರಮಾಣದ ನೀರು ರಸ್ತೆಯ ಮೇಲೆ ಸಂಗ್ರಹಗೊಂಡು ವಾಹನ ಸಂಚಾರಕ್ಕೆ ತೊಡಕಾಯಿತು.

ಸತತ ಮೂರನೇ ದಿನವೂ ಜಿಲ್ಲೆಯಲ್ಲಿ ಮಳೆ ಸುರಿದಿದೆ. ತಾಪಮಾನದಲ್ಲಿ ಭಾರಿ ಇಳಿಕೆಯಾಗಿದ್ದು, ಬೇಸಿಗೆ ಮರೆಸುವಂತೆ ಮಾಡಿದೆ. ಜಿಲ್ಲೆಯಾದ್ಯಂತ ದಿನವಿಡೀ ಮೋಡ ಕವಿದ ವಾತಾವರಣ ಇತ್ತು.



## ಒಂದನೇ ಪುಟದಿಂದ

# ಗಾಂಜಾ ಪತ್ತೆ ಮಾಡಿದ ಶ್ವಾನ ದೀಪಾ..!

ವಿಜಯನಗರ ತಾಂಡಾದಲ್ಲಿ ನಡೆದಿದೆ. ಪೊಲೀಸ್ ಇಲಾಖೆಗೆ ಸೇರಿದ, ಮಾದಕ ದ್ರವ್ಯ ಪತ್ತೆ ಮಾಡುವ ಪರಿಣಿತಿ ಹೊಂದಿರುವ ಡಾಬರ್ ಮ್ಯಾನ್ ತಳಿಯ ದೀಪಾ ಎನ್ನುವ ಶ್ವಾನ ಗಾಂಜಾವನ್ನು ಪತ್ತೆ ಹಚ್ಚಿದೆ.

ಔರಾದ್ ತಾಲೂಕಿನಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ನಡೆಯುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಪೊಲೀಸರು ಹಾಗೂ ತಹಶೀಲ್ದಾರ್ ದಾಳಿ ನಡೆಸಿದ್ದು, ಆದರೆ ಗಾಂಜಾ ಪತ್ತೆಯಾಗಿರಲಿಲ್ಲ. ಹೀಗಾಗಿ ತೆಲಂಗಾಣದಿಂದ ಕರೆತಂದಿದ್ದ ಶ್ವಾನವು, ತೊಗರಿ ಹೊಟ್ಟಿನಲ್ಲಿ ಬಚ್ಚಿಟ್ಟಿದ್ದ ಗಾಂಜಾ ಪತ್ತೆ ಹಚ್ಚುವ ಮೂಲಕ ಅಚ್ಚರಿ ಮೂಡಿಸಿದೆ.

ಘಟನೆ ಸಂಬಂಧ ಓರ್ವನನ್ನು ಬಂಧಿಸಲಾಗಿದೆ. ಈ ಕುರಿತು ಸಂತಪೂರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಶೇ.24 ರಷ್ಟು ಹೆಚ್ಚಳ

ಹೆಚ್ಚಿಸಲಾಗಿದೆ. ಅಲ್ಲದೆ ದಿನಭತ್ಯೆ ಮತ್ತು ಐದು ವರ್ಷಗಳಿಗಿಂತ ಹೆಚ್ಚಿನ ಸೇವೆ ಸಲ್ಲಿಸಿದ ಸಂಸದರಿಗೆ ಪ್ರತಿ ವರ್ಷದ ಪಿಂಚಣಿ ಮತ್ತು ಹೆಚ್ಚುವರಿ ಪಿಂಚಣಿಯನ್ನು ಹೆಚ್ಚಿಸಲಾಗಿದೆ.

ಸಂಸತ್ತಿನ ಸದಸ್ಯರು ಈಗ ತಿಂಗಳಿಗೆ 1 ಲಕ್ಷ ರೂ. ಪಡೆ–ಯುತ್ತಿದ್ದು, ಇನ್ನು ಮುಂದೆ ತಿಂಗಳಿಗೆ 1.24 ಲಕ್ಷ ರೂ. ವೇತನ ಪಡೆಯಲಿದ್ದಾರೆ. ಅವರು ಹಿಂದೆ ಪಡೆಯುತ್ತಿದ್ದ ದಿನಭತ್ಯೆಯನ್ನು ಸಹ 2,000 ರೂ.ಗಳಿಂದ 2,500 ರೂ.ಗಳಿಗೆ ಹೆಚ್ಚಿಸಲಾಗಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಮಾಜಿ ಸಂಸತ್ ಸದಸ್ಯರಿಗೆ ಪಿಂಚಣಿಯನ್ನು ತಿಂಗಳಿಗೆ 25,000 ರೂ.ಗಳಿಂದ 31,000 ರೂ.ಗಳಿಗೆ ಹೆಚ್ಚಿಸಲಾಗಿದೆ. ಐದು ವರ್ಷಗಳಿಗಿಂತ ಹೆಚ್ಚಿನ ಸೇವೆ ಸಲ್ಲಿಸಿದ ಪ್ರತಿ ವರ್ಷಕ್ಕೆ ಹೆಚ್ಚುವರಿ ಪಿಂಚಣಿಯನ್ನು ತಿಂಗಳಿಗೆ 2,000 ರೂ.ಗಳಿಂದ 2,500 ರೂ.ಗಳಿಗೆ ಹೆಚ್ಚಿಸಲಾಗಿದೆ.1961 ರ ಆದಾಯ ತೆ–ರಿಗೆ ಕಾಯ್ದೆಯಲ್ಲಿ ನಿರ್ದಿಷ್ಟಪಡಿಸಿದ ವೆಚ್ಚ ಹಣದುಬ್ಬರ ಸೂಚ್ಯಂಕದ ಆಧಾರದ ಮೇಲೆ ಸಂಸತ್ತಿನ ಸದಸ್ಯರ ವೇತನ, ಭತ್ಯೆ ಮತ್ತು ಪಿಂಚಣಿ ಕಾಯ್ದೆಯಡಿ ನೀಡಲಾದ ಅಧಿಕಾರವನ್ನು ಬಳಸಿಕೊಂಡು ವೇತನ ಹೆಚ್ಚಳವನ್ನು ಪ್ರಕಟಿಸಲಾಗಿದೆ.

# ಬೀದರ ಜಿಲ್ಲಾ ಪೊಲೀಸ್ ರಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 24 : ಹೆಣ್ಣಿಲ್ಲದೆ ಜೀವವಿಲ್ಲ, ಹೆಣ್ಣಿಲ್ಲದೆ ಜೀವನವಿಲ್ಲ. ಹೆಣ್ಣಿನಿಂದಲೇ ಬಾಳು ಬಂಗಾರ,ಹೆಣ್ಣಿಲ್ಲದ ಬದುಕು ನಿಸ್ಸರ, ಹೆಣ್ಣನ್ನು ಗೌರವಿಸಿ ಹೆಣ್ಣು ಮಕ್ಕಳನ್ನು ರಕ್ಷಿಸಿ. ಪ್ರತಿ ವರ್ಷ ಮಾರ್ಚ್ 8 ರಂದು ಬರುವ ಅಂತರರಾಷ್ಟ್ರೀಯ ಮಹಿಳಾ ದಿನ (ಖಘಿಆ), ಮಹಿಳೆಯರ ಯಶಸ್ಸನ್ನು ಸ್ಮರಿಸುವ ಮತ್ತು ಲಿಂಗ ಸಮಾನತೆಗೆ ಕರೆ ನೀಡುವ ಹಾಗೂ ಎಲ್ಲಾ ಮಹಿಳೆಯರು ಮತ್ತು ಹುಡುಗಿಯರಿಗಾಗಿ ಹಕ್ಕುಗಳು, ಸಮಾನತೆ, ಸಬಲೀಕರಣ ಎಂಬ ಥೀಮ್ ಅಡಿಯಲ್ಲಿ ಮಾನ್ಯ ಶ್ರೀ ಪ್ರದೀಪ್ ಗುಂಟಿ, ಐ.ಪಿ.ಎಸ್, ಪೊಲೀಸ್ ವರಿಷ್ಠಾಧಿಕಾರಿಗಳು, ಬೀದರ್ ಜಿಲ್ಲೆ ಬೀದರ್ ರವರು ಹೆಗಲಿಗೆ ಹೆಗಲು ಕೊಟ್ಟು ಹಗಲು ರಾತ್ರಿ ಎನ್ನದೇ ಸದಾ ನಮ್ಮೊಂದಿಗೆ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಸಹದ್ಯೋಗಿ, ಪೊಲೀಸ್ ಅಧಿಕಾರಿ/ಸಿಬ್ಬಂದಿ, ಲಿಪಿಕ ಅಧಿಕಾರಿ/ಸಿಬ್ಬಂದಿ ರವರಿಗೆ ಬೀದರದ ಝೀರಾ ಫಂಕ್ಷನ್ ಹಾಲದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಿ ಜಿಲ್ಲೆಯ ಎಲ್ಲಾ ಸಹೋದರಿಯರಿಗೆ ಮಹಿಳಾ ದಿನಾಚರಣೆಯ ಶುಭ ಕೋರಿದರು.

# ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 24 : ನೆಹರು ಯುವ ಕೇಂದ್ರ ಬೀದರ್ ಹಾಗೂ ಮಾಣಿಕ ಯುವ ಸಂಸ್ಕೃತಿಕ ಕಲಾ (ರಿ) ಬೀದರ ಇವರ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ಇತ್ತಿಚೇಗೆ ನಗರದ ಅಮೂಲ್ಯಾ ಶಾಲೆಯಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಜರುಗಿತು.

ಕಾರ್ಯಕ್ರಮದಲ್ಲಿ ಮಹಿಳೆಯರಿಗಾಗಿ ಕುರ್ಚಿ ಆಟ ಆಡಿಸಿ ಪ್ರಥಮ, ದ್ವಿತಿಯ, ಮತ್ತು ತೃತಿಯ ಸ್ಥಾನದಲ್ಲಿ ಬಂದ ಮಹಿಳೆಯರಿಗೆ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ನಾಟ್ಯಶ್ರೀ ನೃತ್ಯಾಲಯದ ಮುಖ್ಯಸ್ಥೆ ರಾಣಿ ಸತ್ಯಮೂರ್ತಿ ಮಾತನಾಡಿ, ನಾವು ಹೆಣ್ಣು ಮಕ್ಕಳು ಯಾವುದರಲ್ಲೂ ಕಡಿಮೆ ಇಲ್ಲ ಎಲ್ಲದರಲ್ಲೂ ಮುಂದೇ ಇದ್ದಿವೆ. ಗಂಡು ಮಕ್ಕಳೇ ಇರಲಿ ಹೆಣ್ಣು ಮಕ್ಕಳೆ ಇರಲಿ ಅವರಲ್ಲಿ ನಾವು ಏನಾದರೂ ಸಾಧಿಸುತ್ತೇವೆಂಬ ಛಲವಿರಬೇಕು. ಯಾವುದಾದರೂ ಒಂದು ಗುರಿ ಇಟ್ಟುಕೊಳ್ಳಬೇಕು. ನಾವು ಎಲ್ಲ ರೀತಿಯಲ್ಲಿ ಚೆನ್ನಾಗಿದ್ದರೂ ಏನು ಮಾಡುತ್ತಿಲ್ಲ. ಮಂಗಲಾ ಮರಕಲೆ ಅವರು ಅಂಗವಿಕಲರಾಗಿದ್ದರು ಕೂಡ ತಾವು ಅಂಗವಿಕಲರಿಲ್ಲ ಎಂದು ತಿಳಿದುಕೊಂಡು ಎಲ್ಲಾ ರೀತಿಯಲ್ಲೂ ಕೆಲಸ ಮಾಡುತ್ತಾರೆ ಅವರು ನಮ್ಮೆಲ್ಲರಿಗೂ ಸ್ಪೂರ್ತಿ, ಅವರ ರೀತಿ ನಾವು ಕೂಡ ಕೆಲಸ ಮಾಡಬೇಕು ಎಂದು ಹೇಳಿದರು. ಮುಖ್ಯಅತಿಥಿಗಳಾಗಿ ಸಾಹಿತಿ ವಿಜಯಲಕ್ಷ್ಮಿ ಕೌಟಿಗೆ ಮಾತನಾಡಿ, ಹೆಣ್ಣಿನ ಬಗ್ಗೆ ತಾರತಮ್ಯ ಮಾಡುವುದು ನಮ್ಮ ತಾಯಿಯಿಂದ ಶುರುವಾಗುತ್ತದೆ. ಗಂಡು ಮಗು ಹುಟ್ಟಿದರೆ ಬಹಳ ಖುಷಿ ಪಡುತ್ತಾರೆ. ಹೆಣ್ಣು ಮಗು ಹುಟ್ಟಿದರೆ ಅಯ್ಯೋ ಹೆಣ್ಣು ಮಗು ಹುಟ್ಟುತ್ತೆಂದು ಬೇಸರ ಪಡುತ್ತಾರೆ.ಹೆಣ್ಣು ಮಕ್ಕಳ ದೌರ್ಜನ್ಯ ದಿನವನ್ನು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂತ ಆಚರಿಸುತ್ತಿರುವುದು ಒಂದು ಬೇಸರ ವಿಷಯ. ಎಂದರು. ವಕೀಲೆ ರಾಜೇಶ್ವರಿ ಖ್ಯಾಮಾ ಮಾತನಾಡಿ,.ಮಹಿಳಾ ದಿನಾಚರಣೆ ಎಂದರೆ ಮಹಿಳೆಯರಿಗೆ ವಿಶೇಷ ಸ್ಥಾನಮಾನ ಕೊಟ್ಟು ಎಲ್ಲರಿಗೂ ಸಮಾನರಾಗಿ ನೋಡುವ ದಿನ, ಒಂದೇ ದಿವಸ ಮಹಿಳಾ ದಿನಾಚರಣೆ ಅಂತ ಆಚರಿಸುವುದಲ್ಲ ಹೆಣ್ಣು ಮಕ್ಕಳಿಗೆ ಪ್ರತಿದಿನ ಮಹಿಳಾ ದಿನಾಚರಣೆನೇ ಆಗಿರುತ್ತದೆ ಎಂದವರು ಹೇಳಿದರು.

ಕಾರ್ಯಕ್ರಮದಲ್ಲಿ ಮಾಣಿಕ್ ಯುವ ಸಂಸ್ಕೃತಿಕ ಕಲಾ ಸಂಸ್ಥೆಯ ಅಧ್ಯಕ್ಷೆ ಕು. ಭಾಗ್ಯಶ್ರೀ ಮರಕಲೆ ವಂದಿಸಿದರು. ರಾಜ್ಯ ಪ್ರಶಸ್ತಿ ಪುರಸ್ಕತರಾದ ಕು. ಮಂಗಲಾ ಮರಕಲೆ, ಅಮೂಲ್ಯ ಶಾಲೆಯ ಅಧ್ಯಕ್ಷೆ ನಾಗಮ್ಮ ಎರನಳ್ಳಿ, ಶಾಲೆಯ ಮುಖ್ಯ ಗುರು ಭಾಗ್ಯವಂತಿ ಸೇರಿದಂತೆ ಶಾಲೆಯ ಸಿಬ್ಬಂದಿ ವರ್ಗ,. ಮಕ್ಕಳು, ಮಹಿಳೆಯರು ಭಾಗವಹಿಸಿದರು.

## ಮಂಗಲಾ ಮರಕಲೆ ಎಲ್ಲ ವಿಕಲಚೇತನರಿಗೆ ಮಾದರಿ: ಬೆಳಕೋಟೆ

ಬೀದರ. ಮಾ. 24 :ನೆಹರು ಯುವ ಕೇಂದ್ರ ಬೀದರ್ ಹಾಗೂ ಮಾಣಿಕ ಯುವ ಸಂಸ್ಕೃತಿಕ ಕಲಾ ಸಂಸ್ಥೆ (ರಿ) ಬೀದರ ಇವರ ಸಂಯುಕ್ತ ಆಶ್ರಯದಲ್ಲಿ ಇತ್ತಿಚೇಗೆ ನೌಬಾದನ ಆಖಇಖಿ ಶಿಕ್ಷಣ ತರಬೇತಿ ಕೇಂದ್ರದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ ಜರುಗಿತು. ರೈಜಿಂಗ ಹ್ಯಾಂಡ್ ಯುತ ನಗರ ಹಾಗೂ ಗ್ರಾಮಿಣ ಅಭಿವೃದ್ಧಿ ಸಂಸ್ಥೆಯ ಅಧ್ಯಕ್ಷ ಸತೀಷ ಬಿಳಕೊಟೆ ಕಾರ್ಯಕ್ರಮ ಉದ್ಘಾಟಿಸಿ ಮಾತಾನಾಡಿ,,ಕು. ಮಂಗಲಾ ಮರಕಲೆ ಅವರೆ ಅಂಗವಿಕಲರಿಗೆ ಸ್ಪೂರ್ತಿ, ಅವರ ಸಾಧನೆಯೆ ನಮಗೆ ದಾರಿ ಎಂದು ಹೇಳಿದರು. ಪ್ರತಿಯೊಬ್ಬ ಅಂಗವಿಕಲರಲ್ಲೂ ಒಂದು ಕಲೆ, ಇದೆ. ಅವರಿಗೆ ದೇವರು ತಮ್ಮ ದೆಹದಲ್ಲಿ ಒಂದು ಭಾಗ ಕಡಿಮೆ. ಕೊಟ್ಟರು ಅವರ ಒಳಗೆ ಯಾವುದೋ ಒಂದು ಶಕ್ತಿ ಕೊಟ್ಟಿರುತ್ತಾನೆ.

# ದೈಹಿಕ ಶಿಕ್ಷಕರಿಗೆ ಬಡ್ತಿ: ಸಿಎಂ ಜತೆ ಚರ್ಚೆ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 24 : ದೈಹಿಕ ಶಿಕ್ಷಣ ಶಿಕ್ಷಕರ ಬಡ್ತಿ ಬೇಡಿಕೆ ಕುರಿತು ಮುಖ್ಯಮಂತ್ರಿ ಹಾಗೂ ಶಿಕ್ಷಣ ಸಚಿವರೊಂದಿಗೆ ಚರ್ಚೆ ನಡೆಸಲಾಗುವುದು ಎಂದು ಪೌರಾಡಳಿತ ಹಾಗೂ ಹಜ್ ಸಚಿವ ರಹೀಂಖಾನ್ ಹೇಳಿದರು.

ನಗರದ ಶಾಲಾ ಶಿಕ್ಷಣ ಇಲಾಖೆಯ ಎಸ್.ಎಸ್.ಎ. ಸಭಾಂಗಣದಲ್ಲಿ ಭಾನುವಾರ ನಡೆದ ಕರ್ನಾಟಕ ರಾಜ್ಯ ಸರ್ಕಾರಿ ಗ್ರೇಡ್ 1 ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಜಿಲ್ಲಾ ಹಾಗೂ ತಾಲ್ಲೂಕು ಘಟಕದ ಪದಾಧಿಕಾರಿಗಳ ಪದಗ್ರಹಣ ಮತ್ತು ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಬಡ್ತಿ ವಿಚಾರ ಸಚಿವ ಸಂಪುಟದಲ್ಲೂ ಪ್ರಸ್ತಾಪಿಸಲಾಗುವುದು. ದೈಹಿಕ ಶಿಕ್ಷಕರಿಗೆ ನ್ಯಾಯ ದ ೊರ ಕಿಸಿಕ ೊಡ ಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ರಾಜ್ಯ ಸರ್ಕಾರಿ ಸರ್ಕಾರಿ ಗ್ರೇಡ್ 1 ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಸಂಜೀವ್ ಬಿ. ಸೂರ್ಯವಂಶಿ ಮಾತನಾಡಿ, ಸೇವಕ ಆಗಿ ಸರ್ಕಾರಿ ಹುದ್ದೆಗೆ ಸೇರಿದವರು ಅಧಿಕಾರಿ ಆಗಿ ನಿವೃತ್ತಿ ಹೊಂದುತ್ತಿದ್ದಾರೆ. ಆದರೆ, ದೈಹಿಕ ಶಿಕ್ಷಣ ಶಿಕ್ಷಕರು ಯಾವುದೇ ಬಡ್ತಿ ಇಲ್ಲದೆ ನಿವೃತ್ತಿ ಹೊಂದುವಂತಾಗಿದೆ ಎಂದು ಸಚಿವರ ಗಮನ ಸೆಳೆದರು.

2006–07 ರಲ್ಲಿ ರಚಿಸಿದ್ದ ಪ್ರೊ. ಎಲ್.ಆರ್. ವೈದ್ಯನಾಥನ್ ಸಮಿತಿಯು ಸಹ ಶಿಕ್ಷಕರಿಗೆ ಸಿಗುವ ಎಲ್ಲ ಸೌಲಭ್ಯಗಳನ್ನು ದೈಹಿಕ ಶಿಕ್ಷಣ ಶಿಕ್ಷಕರಿಗೂ ನೀಡಬೇಕು ಎಂದು ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಬಳಿಕ ಸರ್ಕಾರ ಅದನ್ನು ಒಪ್ಪಿಕೊಂಡಿತ್ತು. ಗೆಜೆಟ್‌ನಲ್ಲೂ ಪ್ರಕಟಿಸಲಾಗಿತ್ತು. ಆದರೂ, ಈವರೆಗೆ ಸೌಲಭ್ಯ ಕಲ್ಪಿಸಿಲ್ಲ ಎಂದು ಅಳಲು ತೋಡಿಕೊಂಡರು. ವೃಂದ ಮತ್ತು ನೇಮಕಾತಿ ತಿದ್ದುಪಡಿ ಮಾಡಬೇಕು ಎಂದು ಬೇಡಿಕೆ ಮಂಡಿಸಿದರು.

ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಮಹೆಬೂಬ್ ಪಟೇಲ್, ಬೀದರ್ ತಾಲ್ಲೂಕು ಪಂಚಾಯಿತಿಯ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಝಾಕೀರ್ ಹುಸೇನ್, ಸರ್ಕಾರಿ, ಅರೆಸರ್ಕಾರಿ ನೌಕರರ ಸಹಕಾರ ಸಂಘದ ಅಧ್ಯಕ್ಷ ರಾಜೇಂದ್ರಕುಮಾರ ಗಂದಗೆ ಮಾತನಾಡಿದರು.

ಡಯಟ್ ಪಾಚಾರ್ಯ ಎಸ್.ಎಲ್. ಪ್ರಸನ್ನಕುಮಾರ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸಲೀಂ ಪಾಶಾ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಎಸ್.ಎ. ಮುನಾಫ್, ಸಂಘದ ಉಪಾಧ್ಯಕ್ಷ ಶಾಂತಕುಮಾರ ಜೈದೊಡ್ಡಿ, ರಾಘವೇಂದ್ರ ಕುಲಕರ್ಣಿ, ಪ್ರಶಾಂತ ರಾಗಾ, ವಿಜಯಕುಮಾರ ಪಾಟೀಲ, ದಯಾನಂದ ಮಮದೆ, ಶಂಕರ ಬಾಪೂರೆ, ರಾಜು ಸಾಗರ್, ಶ್ರೀಪತಿ ಮೇತ್ರೆ, ಎ.ಕೆ. ಜೋಶಿ, ಜೋಯಲ್ ಜೈರಾಜ್, ರೋಹಿದಾಸ್ ರಾಠೋಡ್, ಕಾಶಿನಾಥ ಬೋರಾಳೆ, ಸಂ–ಜಯ್ ಬಿರಾದಾರ, ಸುಧಾಕರ್, ಮಾಜಿದ್ ಅಲಿ, ಕ್ಲೆಮೆಂಟ್‌ರಾಜ್, ಗೋಪಾಲ್ ಜಮಾದಾರ್, ಶಬ್ಬೀರ್ ಅಲಿ, ಶಿವಶಂಕರ ಪತಂಗೆ, ಯಶವಂತರಾವ್ ಡೊಂಬಾಳೆ ಮತ್ತಿತರರು ಇದ್ದರು. ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ವೆಂಕಟರಾವ್ ಡೊಂಬಾಳೆ ನಿರೂಪಿಸಿದರು.

### ನ್ಯಾಯಾಧೀಶರ ಮನೆಯಲ್ಲಿ ಅಪಾರ ಹಣ ಪತ್ತೆ ಪ್ರಕರಣ

## ಉನ್ನತ ಮಟ್ಟದ ತನಿಖೆಗೆ ಪಾಟೀಲ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 24 : ದೆಹಲಿ ಹೈಕೋರ್ಟ್ ನ್ಯಾಯಾಧೀಶ ಯಶವಂತ್ ವರ್ಮಾ ಅವರ ಮನೆಯಲ್ಲಿ ಅಪಾರ ಪ್ರಮಾಣದ ಹಣ ಪತ್ತೆಯಾಗಿರುವ ಪ್ರಕರಣ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಶಿವಶರಣಪ್ಪ (ಪುಟ್ಟು) ಪಾಟೀಲ ಆಗ್ರಹಿಸಿದ್ದಾರೆ.

ಜನರು ನ್ಯಾಯಾಂಗ ವ್ಯವಸ್ಥೆ ಮೇಲೆ ಇಟ್ಟಿರುವ ವಿಶ್ವಾಸ ಉಳಿಸಿಕೊಳ್ಳುವ ದಿಸೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದು ಹೇಳಿದ್ದಾರೆ.

ನ್ಯಾಯಾಧೀಶರ ಮನೆಯಲ್ಲಿ ಕಂತೆ ಕಂತೆ ನೋಟುಗಳು ಸಿಕ್ಕಿರುವುದು ಆಘಾತಕಾರಿ ಸಂಗತಿಯಾಗಿದೆ. ಪ್ರಕರಣ ನ್ಯಾಯಾಂಗ ವ್ಯವಸ್ಥೆಯಲ್ಲೂ ಭ್ರಷ್ಟಾಚಾರ ನುಸುಳಿರುವುದಕ್ಕೆ ಪುಷ್ಟಿ ನೀಡಿದೆ. ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಜನಸಾಮಾನ್ಯರಲ್ಲಿ ಅನುಮಾನ ಮೂಡುವಂತೆ ಮಾಡಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಸುಪ್ರೀಂಕೋರ್ಟ್, ದೆಹಲಿ ಹೈಕೋರ್ಟ್ ಮುಖ್ಯನ್ಯಾಯಾಧೀಶ ಡಿ.ಕೆ. ಉಪಾಧ್ಯಾಯ ಅವರು ಸಲ್ಲಿಸಿರುವ ಆಂತರಿಕ ವರದಿಯನ್ನು ಬಹಿರಂಗಪಡಿಸಿ ನ್ಯಾಯಾಂಗ ವ್ಯವಸ್ಥೆಯಲ್ಲಿ ಭ್ರಷ್ಟಾಚಾರಕ್ಕೆ ಜಾಗ ಇಲ್ಲ ಎನ್ನುವ ಸಂದೇಶ ರವಾನಿಸಿರುವುದು ಸಮಾಧಾನ ಉಂಟು ಮಾಡಿದೆ ಎಂದು ಹೇಳಿದ್ದಾರೆ.

# 7 ಸಾಧಕರಿಗೆ ಕಲ್ಯಾಣ ಕರ್ನಾಟಕ ನಾರಿ ಶಕ್ತಿ ಪ್ರಶಸ್ತಿ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 24 : ಗುರು ನಾನಕ ಶಿಕ್ಷಣ ಸಂಸ್ಥೆಯಿಂದ ಶನಿವಾರ ಹಮ್ಮಿಕೊಂಡಿದ್ದ ಗುರು ನಾನಕ ಪಬ್ಲಿಕ್ ಶಾಲೆ 50 ವರ್ಷ ಪೂರೈಸಿದ ಪ್ರಯುಕ್ತ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಕಲ್ಯಾಣ ಕರ್ನಾಟಕ ನಾರಿ ಶಕ್ತಿ ಪುರಸ್ಕಾರ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಗುರು ನಾನಕದೇವ್ ಇಂಜಿನಿಯರಿಂಗ್ ಕಾಲೇಜ್ ಆವರಣದಲ್ಲಿ ಇಂದು ಆಯೋಜಿಸಿದ್ದ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ ಮಹಿಳೆಯರಿಗೆ ಅಭಿವೃದ್ಧಿಯಂತಹ ಕ್ಷೇತ್ರಗಳಲ್ಲಿ ಭಾರತದ ಹೆಮ್ಮೆಯ ಪತಾಕೆಯನ್ನು ಹಾರಿಸಿದ ಏಳು ಮಹಿಳೆಯರಿಗೆ ನಾರಿ ಶಕ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಪಡೆದವರು : ಕರ್ನಾಟಕ ಉನ್ನತ ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿ ಶ್ರೀಮತಿ ಶೇಶಿಕಲಾ ಸಿ.ಕೆ–ಕೆಆರ್‌ಡಿಬಿ ಕಲಬುರ್ಗಿಯ ಉಪ ನಿರ್ದೇಶಕಿ ಶ್ರೀಮತಿ ಸುಜಾತಾ ಕಾಳ್ಗಿ. ಗುರು ನಾನಕ ಶಾಲೆಯ ಮುಖ್ಯೋಪಾಧ್ಯಯರಾದ ಶ್ರೀಮತಿ ಆರೀಫ್ ಹಾದಿ. ಡಿಸಿಸಿ ಬ್ಯಾಂಕ್ ಹುಮನಾಬಾದ ಶಾಖೆ ಮ್ಯಾನೇಜರ್ ಶ್ರೀಮತಿ ರೇಣುಕಾ ಎನ್. ಕಟ್ಟಿಮನಿ. ಭಾರತೀಯ ವಾಯು ಪಡೆ, ಸ್ತ್ರೀರೋಗ ತಜ್ಞ, ವೈದ್ಯಾಧಿಕಾರಿ ವಿಂಗ್ ಕಮಾಂಡರ್ ಹೈದ್ರಾಬಾದನ ಡಾ॥ ಜ್ಯೋತಿ ಯೇರೋಳಕರ್. ಸಹಾಯಕ ಶಿಕ್ಷಕಿ ಔರಾದ (ಬಾ) ಶ್ರೀಮತಿ ಮಹಾನಂದಾ ಬಲರಾಜ ಎಂಡೆ.

ಹೈದ್ರಾಬಾದನ ಪ್ರೇಸಿಡೆನ್ಸಿ ಬಾಲಕೀಯರ ಪ್ರೌಢ ಶಾಲೆಯ ಪ್ರಾಂಶುಪಾಲರು ಶ್ರೀಮತಿ ಅರಣಧತ್ತಿ ಕುಲಕರ್ಣಿ.

ಮುಖ್ಯ ಅಥಿಯಾಗಿ ಕರ್ನಾಟಕ ವೈದ್ಯಕೀಯ ಕಾಲೇಜ್ ಮತ್ತು ಸಂಶೋಧನಾ ಕೇಂದ್ರ ಹುಬಳ್ಳಿಯ ಡಾ॥ ಜಾನಾಕಿ ಆರ್. ತೋರವಿ ಭಾಗವಹಿಸಿ ಕಲ್ಯಾಣ ಕರ್ನಾಟಕ ನಾರಿ ಶಕ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡ ಎಲ್ಲರಿಗೂ ಹಾರ್ದಿಕ ಸ್ವಾಗತ ಕೋರಿ ಮಾತನಾಡುತ್ತ ಪ್ರಸ್ತುತ ಸಮಯದಲ್ಲಿ ಸಮಾಜದ ಅಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ ಪ್ರಮುಖವಾದುದು. ತಾಯಿಯು ಮನೆಯಲ್ಲಿ ಮಕ್ಕಳಿಗೆ ಉತ್ತಮ ಸಂಸ್ಕೃತಿ, ಸಂಸ್ಕಾರ, ಪ್ರೀತಿ–ವಾತ್ಸಲ್ಯ ಮಮತೆಯಿಂದ ಬೆಳೆಸಿದರೆ ಮುಂದೆ ಮಕ್ಕಳು ದೇಶದ ಉತ್ತಮ ಪ್ರಜೆಯಾಗುತ್ತಾರೆ ಎಂದು ನುಡಿದರು.

ಅತಿಥಿಯಾಗಿ ಶ್ರೀಮತಿ ಶೈನಿ ಪ್ರದೀಪ ಗುಂಟಿ ಮತ್ತು ಗುಲಬರ್ಗಾ ವಿಶ್ವವಿದ್ಯಾಲಯದ ಕುಲಸಚಿವರು ಡಾ॥ ಎನ್.ಜಿ. ಕನ್ನೂರ್ ಪಾಲ್ಗೊಂಡಿದರು.

ಗುರು ನಾನಕ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷೆ ಡಾ॥ ರೇಷ್ಮಾ ಕೌರ ಅವರು ಮಾತನಾಡುತ್ತ ಕಲ್ಯಾಣ ಕರ್ನಾಟಕ ಭಾಗದಲ್ಲಿ ಅವಿರತವಾಗಿ ಶಿಕ್ಷಣ ಸೇವೆಯಲ್ಲಿ ನಿರತವಾಗಿದೆ. ದಿ॥ ಸರದಾರ ಜೋಗಾ ಸಿಂಗ್ ಅವರು 1980 ರಲ್ಲಿ ಬೀದರದಂತಹ ಹಿಂದುಳಿದ ಜಿಲ್ಲೆಯಲ್ಲಿ ಗುರು ನಾನಕ ಶಿಕ್ಷಣ ಸಂಸ್ಥೆ ಸ್ಥಾಪಿಸುವ ಮೂಲಕ ಈ ಭಾಗದ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುಲು ಆರಂಭಿಸಿದರು. ಅವರು ಹಾಕಿದ ದಾರಿ ನಡೆಸಿಕೊಂಡು ಒಳ್ಳೆಯ ಶಿಕ್ಷಣ ಕೊಡುತ್ತಿದ್ದೇವೆ ಎಂದು ನುಡಿದರು. ಈ ಸಂದರ್ಭದಲ್ಲಿ ಶ್ರೀ ನಾನಕ ಝಿರಾ ಸಾಹೇಬ್ ಫೌಂಡೆಷನ್‌ನ ಅಧ್ಯಕ್ಷ ಡಾ.ಎಸ್.ಬಲಬೀರ ಸಿಂಗ್, ಉಪಾಧ್ಯಕ್ಷೆ ಡಾ. ರೇಷ್ಮಾ ಕೌರ್, ಡಾ.ನಿಶಾ ಕೌರ್, ಶ್ರೀಮತಿ ಜಸ್ಮಿನೀತ್ ಕೌರ್, ಪ್ರಾಂಶುಪಾಲೆ ನಾಳಿನಿ ಡಿ.ಜಿ. ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಕ್ಷಯ ರೋಗ ಮುಕ್ತ ಭಾರತಕ್ಕೆ ಕೈಜೋಡಿಸಿ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 24 : ಭಾರತವನ್ನು ಕ್ಷಯ ರೋಗ ಮುಕ್ತಗೊಳಿಸಲು ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಗಿರೀಶ್ ಬದೋಲೆ ಹೇಳಿದರು.

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ನಗರದ ಬ್ರಿಮ್ಸ್‌ನಲ್ಲಿ ಸೋಮವಾರ ಆಯೋಜಿಸಿದ್ದ ವಿಶ್ವ ಕ್ಷಯ ರೋಗ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರ 2025 ರಲ್ಲಿ ದೇಶವನ್ನು ಸಂಪೂರ್ಣ ಕ್ಷಯ ರೋಗ ಮುಕ್ತವಾಗಿಸುವ ಘೋಷಣೆ ಮಾಡಿದೆ. ಈ ದಿಸೆಯಲ್ಲಿ ಕಾರ್ಯ ಚಟುವಟಿಕೆಗಳೂ ನಡೆದಿವೆ ಎಂದು ತಿಳಿಸಿದರು.

ಕ್ಷಯರೋಗ ನಿರ್ಮೂಲನೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜತೆಗೆ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಹಾಗೂ ಸಿಬ್ಬಂದಿಯ ಪಾತ್ರವೂ ಬಹಳ ಮುಖ್ಯವಾಗಿದೆ ಎಂದು ಹೇಳಿದರು.

ಪ್ರಸಕ್ತ ವರ್ಷ ಕ್ಷಯ ರೋಗ ನಿಯಂತ್ರಣದಲ್ಲಿ ಜಿಲ್ಲೆ ಗಣನೀಯ ಪ್ರಗತಿ ಸಾಧಿಸಿದೆ ಎಂದು ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಧ್ಯಾನೇಶ್ವರ ನೀರಗುಡೆ ತಿಳಿಸಿದರು.

ಈಗ ಹ್ಯಾಂಡ್ ಹೆಲ್ಡ್ ಕ್ಷ ಕಿರಣ ಯಂತ್ರದೊಂದಿಗೆ ರೋಗಿಗಳು ಇರುವ ಗ್ರಾಮ, ಸಂತೆ, ಜಾತ್ರೆ, ಉತ್ಸವ ಮೊದಲಾದ ಕಡೆಗೆ ಹೋಗಿ ಕ್ಷಯ ರೋಗ ತಪಾಸಣೆ ಮಾಡಲಾಗುತ್ತಿದೆ. ರೋಗ ಕಂಡು ಬಂದಲ್ಲಿ ತಕ್ಷಣ ಚಿಕಿತ್ಸೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಪೌಷ್ಟಿಕ ಆಹಾರಕ್ಕಾಗಿ ಕಡು ಬಡ ರೋಗಿಗಳ ಖಾತೆಗೆ ಹಣ ಸಹ ಜಮೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಈ ವರ್ಷ 47,979 ಸಂಭಾವ್ಯ ಕ್ಷಯ ರೋಗಿಗಳ ಪರೀಕ್ಷೆ ಮಾಡಲಾಗಿದೆ. ಅದರಲ್ಲಿ 2,563 ಮಂದಿಗೆ ಕ್ಷಯ ರೋಗ ಇರುವುದು ದೃಢಪಟ್ಟಿದೆ. 71 ಜನರಲ್ಲಿ ಎ???ಐವಿ ಜತೆಗೆ ಕ್ಷಯ ರೋಗ ಪತ್ತೆಯಾಗಿದೆ ಎಂದು ಜಿಲ್ಲಾ ಕ್ಷಯ ರೋಗ ಅಧಿಕಾರಿ ಡಾ. ಅನಿಲಕುಮಾರ ಚಿಂತಾಮಣಿ ಹೇಳಿದರು.

2022 ರಲ್ಲಿ ಜಿಲ್ಲೆಯಲ್ಲಿ 2,824 ಹಾಗೂ 2023 ರಲ್ಲಿ 2,826 ಕ್ಷಯ ರೋಗಿಗಳು ಪತ್ತೆಯಾಗಿದ್ದರು. ಈ ವರ್ಷ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ ಎಂದು ತಿಳಿಸಿದರು.

ಕ್ಷಯ ರೋಗ ಮುಕ್ತ ಗ್ರಾಮ ಪಂಚಾಯಿತಿ ಯೋಜನೆಯಡಿ ಹೆಡಗಾಪುರ, ಹಾರಕೂಡ, ಬ್ಯಾಲಹಳ್ಳಿ, ನಿಟ್ಟೂರ (ಬಿ), ಬೇನಚಿಂಚೋಳಿ, ಏಕಲೂರು, ಕೋಹಿನೂರು, ಲಾಡವಂತಿ, ಮುಡಬಿ, ಉಜಳಂಬ, ಡಾಕುಳಗಿ, ಮದರಗಾಂವ್, ಚಟ್ನಳ್ಳಿ, ಮಾಳೆಗಾಂವ್, ಖೇಣಿ ರಂಜೋಳ್, ರೇಕುಳಗಿ, ಬೆಳಕೇರಾ, ಮೀನಕೇರಾ ಗ್ರಾಮ ಪಂಚಾಯಿತಿಗಳನ್ನು ಕ್ಷಯ ರೋಗ ಮುಕ್ತ ಗ್ರಾಮ ಪ ಂಚಾಯಿ ತಿಗ ಳೆ ಂದು ಘೋಷಿಸಲಾಗಿದೆ ಎಂದು ಹೇಳಿದರು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಅಹೆಮದ್, ಜಿಲ್ಲಾ ಆರೋಗ್ಯ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳಾದ ಡಾ. ಕಿರಣ ಪಾಟೀಲ, ಡಾ. ರಾಜಶೇಖರ ಪಾಟೀಲ, ಡಾ. ಶಂಕರೆಪ್ಪ ಬೊಮ್ಮಾ, ಡಾ. ದಿಲೀಪ್ ಡೊಂಗರೆ ಇದ್ದರು.

ಟಿ.ಎಂ. ಮಚ್ಚೆ ನಿರೂಪಿಸಿದರು. ಸಂಜುಕುಮಾರ ನಾಗೂರೆ ವಂದಿಸಿದರು.

ಕಾರ್ಯಕ್ರಮಕ್ಕೆ ಮುನ್ನ ನಗರದಲ್ಲಿ ಕ್ಷಯ ರೋಗ ಜಾಗೃತಿ ಜಾಥಾ ನಡೆಯಿತು.

## ತಾಲ್ಲೂಕ ಪಂಚಾಯತ ಬಸವಕಲ್ಯಾಣ
### ಗ್ರಾಮ ಪಂಚಾಯತ ಕಾರ್ಯಾಲಯ, ಚಂಡಕಾಪೂರ ತಾ.ಬಸವಕಲ್ಯಾಣ

ದಿನಾಂಕ:25.03.2025

ಸಂಖ್ಯೆ:ಗ್ರಾಪಂ.ಚಂಡ:ಉಖಾಯೋ:ದಪಪ್ರ:2024–25

**ದರಪಟ್ಟಿಗಳ ಆಹ್ವಾನ**

ವಿಷಯ: ಮಹಾತ್ಮಾ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಗ್ರಾಮ ಪಂಚಾಯಿತಿಯಿಂದ ಅನುಷ್ಠಾನ ಮಾಡಲಾದ ವಿವಿಧ ಕಾಮಗಾರಿಗಳಿಗೆ ಅಗತ್ಯವಾದ ಸಾಮಗ್ರಿಗಳನ್ನು ಪೂರೈಸಿ ಮಾಡುವುದಕ್ಕಾಗಿ ದರಪಟ್ಟಿ ಪ್ರಕಟಣೆ ಮಾಡುವ ಕುರಿತು.

ಉಲ್ಲೇಖ:–1) ಮಾನ್ಯ ಆಯುಕ್ತರು, ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಬೆಂಗಳೂರು ಇವರ ಆದೇಶ ಸಂಖ್ಯೆ:RDC-EGS/988/2022(E-970872) ದಿನಾಂಕ: 17.05.2023.
2) ಸರ್ಕಾರದ ಆದೇಶ ಸಂಖ್ಯೆ:ಆರ್.ಡಿಸಿ–ಇ.ಜಿ.ಎಸ್/988/2022 ಬೆಂಗಳೂರು ದಿನಾಂಕ:16.05.2023.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತ್ರಿ ಯೋಜನೆಯಡಿ ಗ್ರಾಮ ಪಂಚಾಯಿತಿಯಿಂದ ಅನುಷ್ಠಾನ ಮಾಡಲಾಗುವ ವಿವಿಧ ಕಾಮಗಾರಿಗಳಿಗೆ ಅಗತ್ಯವಾದ ಸಾಮಗ್ರಿಗಳನ್ನು ಪೂರೈಕೆ ಮಾಡುವುದಕ್ಕಾಗಿ ದರ ಪಟ್ಟಿ ಪ್ರಕಟಣೆ.

1) **ದರಪಟ್ಟಿಗಳ ಆಹ್ವಾನ:** ಗ್ರಾಮ ಪಂಚಾಯಿತಿ ಚಂಡಕಾಪೂರ ವತಿಯಿಂದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಖಾತ್ರಿ ಯೋಜನೆಯ ಕ್ರೀಯಾ ಯೋಜನೆಗಳಡಿ ಅನುಮೋದನೆಯಾದ ಗ್ರಾಮ ಪಂಚಾಯಿತಿಯಿಂದ ಅನುಷ್ಠಾನ ಮಾಡಲಾಗುವ ವಿವಿಧ ಕಾಮಗಾರಿಗಳಿಗೆ ಅಗತ್ಯವಾದ ಸಾಮಗ್ರಿಗಳನ್ನು ಪೂರೈಕೆ ಮಾಡುವುದಕ್ಕಾಗಿ ದರಪಟ್ಟಿ ಪ್ರಕಟಣೆ ಮಾಡಿ ಅರ್ಹ ದರಪಟ್ಟಿದಾರರಿಂದ (ಸರಬರಾಜುದಾರರು / ಏಜೆನ್ಸಿಯವರು / ಮಾರಾಟಗಾರರು / ಅರ್ಹ ಸಂಸ್ಥೆಯವರು ಇತ್ಯಾದಿ) ದರಪಟ್ಟಿಗಳನ್ನು ಪ್ರಕಲಟಣೆಯ ಅನುಬಂಧ–1 ರಲ್ಲಿ ದಾಖಲಿಸಲಾದ ಕಾಮಗಾರಿವಾರು ಸಾಮಗ್ರಿಗಳಿಗಾಗಿ ಮೊಹರು ಮಾಡಿದ ಲಕೋಟೆಗಳಲ್ಲಿ ಸ್ಪರ್ಧಾತ್ಮಕ ದರಪಟ್ಟಿಗಳನ್ನು ಆಹ್ವಾನಿಸಲಾಗಿರುತ್ತದೆ.

2) **ದರಪಟ್ಟಿ ಪ್ರಕ್ರೀಯೆಯ ವೇಳಾಪಟ್ಟಿ:**

| ಕ್ರ.ಸಂ | ವಿವರ | ನಿಗಧಿಪಡಿಸಿದ ದಿನಾಂಕ | ಷರಾ |
|---|---|---|---|
| 01 | ದರಪಟ್ಟಿ ಫಾರ್ಮ ಮತ್ತು ಡಾಕ್ಯೂಮೆಂಟ್ ವಿತರಿಸುವ ದಿನಾಂಕ ಮತ್ತು ಸಮಯ | 25.03.2025 ದಿನಾಂಕದಿಂದ 27.03.2025ರ ವರೆಗೆ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಮತ್ತು ಕಛೇರಿ ವೇಳೆಯಲ್ಲಿ | |
| 02 | ದರಪಟ್ಟಿದಾರರ ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ | ದಿನಾಂಕ:25.03.205 ರಂದು ಸಮಯ:ಬೆಳಿಗ್ಗ 11.00 ಗಂಟೆಗೆ, ಗ್ರಾಮ ಪಂಚಾಯಿತಿ ಕಛೇರಿಯಲ್ಲಿ. | |
| 03 | ಮೊಹರು ಮಾಡಿದ ದರಪಟ್ಟಿ ಫಾರ್ಮ ಮತ್ತು ಇತರೆ ದಾಖಲೆಗಳನ್ನು ಸ್ವೀಕರಿಸುವ ದಿನಾಂಕ ಮತ್ತು ಸಮಯ | ದಿನಾಮಕ: 27.03.2025 ರಂದು ಸಮಯ: ಬೆಳಿಗ್ಗ 11.00 ಗಂಟಯಿಂದ ಅಪರಾಹ್ನ 2.00 ಗಂಟೆಯವರೆಗೆ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ | |
| 04 | ಮೊಹರು ಮಾಡಿದ ದರಪಟ್ಟಿ ಲಕೋಟೆ ತೆರೆಯುವ ಸ್ಥಳ, ದಿನಾಂಕ ಮತ್ತು ಸಮಯ | ಹಾಜರಿರುವ ದರಪಟ್ಟಿದಾರರ ಸಮ್ಮುಖದಲ್ಲಿ ದಿನಾಂಕ:27.03.2025 ರಂದು ಸಮಯ:ಅಪರಾಹ್ನ 3.00 ಗಂಟೆಗೆ, ಗ್ರಾಮ ಪಂಚಾಯಿತಿ ಕಛೇರಿಯಲ್ಲಿ. | |

| ಕ್ರ.ಸಂ. | ಕಾಮಗಾರಿಗಳ ವಿವರ | ಪ್ರಮಾಣ | ಸಾಮಗ್ರಿ ಮೊತ್ತ |
|---|---|---|---|
| 01 | Construction of SHG Shed Near Ganesh Temple at Umapur Village | ಅಂದಾಜು ಪತ್ರಿಕೆಯಲ್ಲಿ ಇದ್ದಂತೆ | 1000000 |

ದರಪಟ್ಟಿಗೆ ಸಂಬಂಧಿಸಿದಂತೆ, ಯಾವುದೇ ಮಾಹಿತಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಗ್ರಾಮ ಪಂಚಾಯಿತಿಯನ್ನು ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ. ದರಪಟ್ಟಿಯನ್ನು ಸ್ವೀಕರಿಸುವ ಮತ್ತು ತಿರಸ್ಕರಿಸುವ ಅಧಿಕಾರಿ ಗ್ರಾಮ ಪಂಚಾಯಿತಿಯದ್ದಾಗಿರುತ್ತದೆ ಹಾಗೂ ಈ ದರಪಟ್ಟಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.

**ಸಹಿ/–** ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಗ್ರಾಮ ಪಂಚಾಯಿತಿ, ಚಂಡಕಾಪೂರ



ಕರ್ನಾಟಕ ಸೇನೆ ವತಿಯಿಂದ ಮಲ್ಲಮ್ಮ ನುಡಿ ವರದಿಗಾರರಾದ ವೀರೇಶ್ ಟಕ್ಕಳಕಿ ಅವರಿಗೆ ಸನ್ಮಾನಿಸಿದ ಕ್ಷಣ ಕಾಣಬಹುದು.

### ರಾಷ್ಟ್ರೀಯ ರಕ್ಷಾ ವಿಶ್ವವಿದ್ಯಾನಿಲಯದಿಂದ ಹಣಕಾಸು ಮತ್ತು
## ಆರ್ಥಿಕ ಅಪರಾಧಗಳು ವಿಷಯದಲ್ಲಿ ಸ್ನಾತಕೋತ್ತರ ತರಗತಿ ಪ್ರಾರಂಭ

ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ:ಗೃಹವ್ಯವಹಾರಗಳ ಸಚಿವಾಲಯದಡಿಯಲ್ಲಿನ ರಾಷ್ಟ್ರೀಯ ಪ್ರಾಮುಖ್ಯತಾ ಸಂಸ್ಥೆಯಾದ ರಾಷ್ಟ್ರೀಯ ರಕ್ಷಾ ವಿಶ್ವವಿದ್ಯಾಲಯವು ಹಣಕಾಸು ಮತ್ತು ಆರ್ಥಿಕ ಅಪರಾಧಗಳು ವಿಷಯದಲ್ಲಿ ಹೈಬ್ರಿಡ್ ಮಾದರಿಯ ಒಂದು ವರ್ಷದ ಸ್ನಾತಕೋತ್ತರ ತರಗತಿಗಳನ್ನುಪ್ರಾರಂಭಿಸಿದೆ. ಭಾರತೀಯ ಕಾರ್ಪೊರೇಟ್ ವ್ಯವಹಾರಗಳ ಸಂಸ್ಥೆಯ ಸಹಯೋಗದೊಂದಿಗೆ ವೃತ್ತಿಪರರಿಗಾಗಿ ಈ ಕೋರ್ಸ್ ಅನ್ನುವಿನ್ಯಾಸ ಮಾಡಲಾಗಿದೆ.

ಬೆಂಗಳೂರಿನಲ್ಲಿಸುದ್ದಿಗೋಷ್ಠಿಯಲ್ಲಿ ಈ ವಿಷಯವನ್ನುಉಪಕುಲಪತಿ ಪ್ರೊ.ಬಿಮಲ್ ಎನ್. ಪಟೇಲ್ ಅವರು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಪ್ರಕಟಿಸಿದರು. ಈ ಕೋರ್ಸ್ಗೆ ಆರ್‌ಬಿಐ, ಸೆಬಿಯಂತಹ ಹಣಕಾಸು ನಿಯಂತ್ರಕಗಳು ಮತ್ತು ಸಿಬಿಐ, ಎನ್‌ಐಎ, ಪಿಎಫ್‌ಆರ್‌ಡಿಎ, ಮತ್ತು ಐಆರ್ಡಿಎಐ ನಂತಹ ಕಾನೂನು ಜಾರಿ ಸಂಸ್ಥೆಗಳ ಸಹಮತವಿದೆ ಎಂದು ಅವರು ಹೇಳಿದರು. ಹಣಕಾಸು ಮತ್ತು ಆರ್ಥಿಕ ಅಪರಾಧಗಳನ್ನು ತಡೆಗಟ್ಟಲು, ತಗ್ಗಿಸಲು ಮತ್ತು ನಿಯಂತ್ರಿಸಲು ಈ ಕಾರ್ಯಕ್ರಮವು ಕಾರ್ಯತಂತ್ರದ ಉಪಕ್ರಮವಾಗಿದೆ ಎಂದು ಅವರು ಒತ್ತಿ ಹೇಳಿದರು.

ರಾಷ್ಟ್ರೀಯರಕ್ಷಾವಿಶ್ವವಿದ್ಯಾನಿಲಯದ ವಿವಿಧ ಕ್ಯಾಂಪಸ್ಗಳಲ್ಲಿ ಶೇಕಡ 93% ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಆಯ್ಕೆ ಮೂಲಕ ಉದ್ಯೋಗ ದೊರೆತಿದೆ ಎಂದು ವಿವರಿಸಿದರು. ಭಾರತೀಯ ಕಾರ್ಪೊರೇಟ್ ವ್ಯವಹಾರಗಳ ಸಂಸ್ಥೆಯ ಎಚ್‌ಒಡಿ ಪ್ರೊ. ಡಾ.ನೀರಜ್ ಗುಪ್ತಾ ಅವರು ಸಹ ಮಾಧ್ಯಮವನ್ನುದ್ದೇಶಿಸಿ ಮಾತನಾಡಿದರು.

ವಿಶ್ವವಿದ್ಯಾಲಯದ ಕೇಂದ್ರ ಕಚೇರಿಯು ಗುಜರಾತ್ನ ಗಾಂಧಿನಗರದಲ್ಲಿದ್ದು ಕರ್ನಾಟಕದ ಶಿವಮೊಗ್ಗ, ಅರುಣಾಚಲ ಪ್ರದೇಶ, ಲಕ್ನೋ ಮತ್ತು ಪುದುಚೇರಿಗಳಲ್ಲಿ ಕ್ಯಾಂಪಸ್ಗಳನ್ನು ಹೊಂದಿದೆ. ಶಿವಮೊಗ್ಗ ಕ್ಯಾಂಪಸ್ನ ನಿರ್ದೇಶಕರಾದ ಡಾ.ಕಾವೇರಿ ಟಂಡನ್ ಅವರು, ಕರ್ನಾಟಕದಲ್ಲಿ ರಾಷ್ಟ್ರೀಯ ರಕ್ಷಾ ವಿಶ್ವವಿದ್ಯಾಲಯದ ಶೈಕ್ಷಣಿಕ ಉಪಕ್ರಮಗಳಿಗೆ ರಾಜ್ಯ ಸರ್ಕಾರದ ದೃಢ ಬೆಂಬಲಕ್ಕೆ ಮೆಚ್ಚುಗೆ

## ಸುಸಂಸ್ಕೃತ ಸಮಾಜ ನಿರ್ಮಾಣ ಇಂದಿನ ಅಗತ್ಯ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಸುಸಂಸ್ಕೃತ ಸಮಾಜ ನಿರ್ಮಾಣ ಇಂದಿನ ಅಗತ್ಯವಾಗಿದ್ದು, ಇದರ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು ಎಂದು ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಅಂಕುಶ ಢೋಲೆ ಹೇಳಿದರು.

ಪಟ್ಟಣದ ಶಾಂತಿವರ್ಧಕ ಬಿ.ಇಡಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳ ಸ್ವಾಗತ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ಸಮಯದಲ್ಲಿ ಅತ್ಯುತ್ತಮ ಶಿಕ್ಷಕರ ಕೊರತೆ ಇದ್ದು, ಪ್ರಶಿಕ್ಷಣಾರ್ಥಿಗಳು ಅತ್ಯುತ್ತಮ ಶಿಕ್ಷಕರಾಗುವತ್ತ ಪರಿಶ್ರಮ ವಹಿಸಬೇಕು.

ಪ್ರಶಿಕ್ಷಣಾರ್ಥಿಗಳ ಶೈಕ್ಷಣಿಕ ಏಳಿಗೆಗೆ ಸಂಸ್ಥೆ ಸದಾ ಬೆನ್ನೆಲುಬಾಗಿ ಕಾರ್ಯ ನಿರ್ವಹಿಸುತ್ತದೆ ಎಂದು ತಿಳಿಸಿದರು.

ಸಿ. ಬಿ. ಪದವಿ ಕಾಲೇಜಿನ ಪ್ರಾಚಾರ್ಯ ರಮೇಶ ಪಾಟೀಲ ಮಾತನಾಡಿ, ಶಿಕ್ಷಣ ಯಾರಿಗೂ ತಾರತಮ್ಯ ಮಾಡುವುದಿಲ್ಲ, ಹಾಗಾಗಿ, ಶಿಕ್ಷಣದ ಜ್ಞಾನ ಗ್ರಹಿಸಿದಾಗ ಮಾತ್ರ ಉತ್ತಮ ಶಿಕ್ಷಕರಾಗಿ, ಅತ್ಯುತ್ತಮ ಸಮಾಜ ಕಟ್ಟಲು ಸಾಧ್ಯ. ಕಲಿಯುವ ವಿದ್ಯಾರ್ಥಿಗಿಂತ ಕಲಿಸುವ ಶಿಕ್ಷಕರಿಗೆ ಹೆಚ್ಚು ಆಸಕ್ತಿ ಇದ್ದಾಗ ಮಾತ್ರ ಶಿಕ್ಷಕರ ಕೀರ್ತಿ ಹೆಚ್ಚುತ್ತದೆ ಎಂದರು. ಪಿ.ಜಿ. ಕಾಲೇಜಿನ ಪ್ರಾಚಾರ್ಯೆ ಮೀನಾಕುಮಾರಿ ಪಾಟೀಲ, ಪ್ರಾಚಾರ್ಯರಾದ ಪರಮೇಶ್ವರ್ ಎನ್. ಮಾಲಿ ಪಾಟೀಲ, ಲಕ್ಷ್ಮೀಕಾಂತ್ ನಾಟೆಕರ್, ಸುವರ್ಣಾ, ಬಸಲಿಂಗಪ್ಪಾ, ಆನಂದ ಜೇವೂರ್ ಸೇರಿದಂತೆ ಇತರರು ಇದ್ದರು.



ಹುಮನಾಬಾದ:– ತಾಲೂಕಿನ ಸಿಂಧನಕೇರಾ ಗ್ರಾಮದ ರಾಚೋಟೇಶ್ವರ ಮಠದ ಪೂಜ್ಯ ಶ್ರೀ ಹೊನ್ನಾಲಿಂಗ ಮಹಾಸ್ವಾಮಿಗಳಿಗೆ ಚಿಟಗುಪ್ಪ ಪಟ್ಟಣದ ಸಮಾಜ ಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯಾ ಅವರು ಸಿಹಿ ನೀಡಿ, ಶಾಲು ಹೊದಿಸಿ ಸನ್ಮಾನಿಸಿ ರಂಜಾನ್ ಹಬ್ಬದ ಶುಭಾಶಯಗಳು ಕೋರಿದರು. ಇದೆ ವೇಳೆ ಪೂಜ್ಯರು ಸನ್ಮಾನಿಸಿ ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಚಿಟಗುಪ್ಪ ತಾಲೂಕಿನ ಯೋಜನಾಧಿಕಾರಿ ಬಸವರಾಜ ಕೆ. ಪತ್ರಕರ್ತ ರಾಜಕುಮಾರ ಆರ್. ಹಡಪದ, ರೇವಣ್ಣಪ್ಪ ಸಿಂಧನಕೇರಾ, ಛತ್ರಪ್ಪ ಹಡಪದ, ಮನೋಹರ್ ಸಿಂಧನಕೇರಾ, ಶರಣು ಸೇರಿದಂತೆ ಇತರರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

## ಹರಿಯ ಮಂತ್ರದಿಂದ ಮನದ ಮೈಲಿಗೆ ವಾಸಿ – ಹಾರಕೂಡ ಶ್ರೀ.



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :– ಮಾ 24 ಸಂಸಾರದ ಜಂಜಾಟದಿಂದ ಮಲೀನವಾದ ಮನಸ್ಸನ್ನು ಶ್ರೀಹರಿಯ ಮಂತ್ರದಿಂದ ಪರಿಶುದ್ಧಗೊಳಿಸಬಹುದಾಗಿದೆ ಎಂದು ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ಉತ್ತರ ಪ್ರದೇಶದ ಅಯೋಧ್ಯಾ ನಗರದಲ್ಲಿ ಔಸಾದ ಸದ್ಗುರು ಗುರುಬಾಬಾ ಮಹಾರಾಜರ ಶ್ರೀ ನಾಥಷಷ್ಠಿ ಮಹೋತ್ಸವ ನಿಮಿತ್ಯ ಜರುಗಿದ ಧರ್ಮಸಭೆಯನ್ನು ಉದ್ಘಾಟಿಸಿ ಮಾತನಾಡಿದ ಶ್ರೀಗಳು ರಾಷ್ಟ್ರ ಹಾಗೂ ವಿಶ್ವ ಹಿಂದೂ ಸಮುದಾಯದ ಶ್ರದ್ಧಾ ಕೇಂದ್ರವಾಗಿರುವ ಪವಿತ್ರ ರಾಮ ಜನ್ಮಭೂಮಿ ಅಯೋಧ್ಯೆಯಲ್ಲಿ ಆಯೋಜಿಸಿರುವ ಶ್ರೀನಾಥ ಷಷ್ಠಿ ಮಹೋತ್ಸವದಿಂದ ಭಕ್ತಿಯ ಬೆಸುಗೆ ಏರ್ಪಟ್ಟಿದೆ.

ದೈವ ಭಕ್ತಿಯ ಬೆಸುಗೆ ದೇಶವನ್ನು ಸೌಹಾರ್ದ ಹಾಗೂ ಸಾಮರಸ್ಯದ ಪಥದಲ್ಲಿ ಸಾಗುವಂತೆ ಸ್ಫೂರ್ತಿ ನೀಡುತ್ತದೆ. ಸಂತರು ಶರಣರು ಮಹಾಂತರನ್ನು ಕೂಡಿರುವ ಭಾರತ ಸ್ವತ: ಬೆಳಕಾಗಿದ್ದು ವಿಶ್ವ ಚೈತನ್ಯಕ್ಕೆ ಬೆಳಕು ನೀಡುವಂತಹ ಶ್ರೇಷ್ಠ ಭೂಮಿಯಾಗಿದೆ.

ದೇಶದ ವಿವಿಧ ಸ್ಥಳಗಳಲ್ಲಿ ಪ್ರತಿವರ್ಷ ನಾಥ ಷಷ್ಠಿ ಆಯೋಜಿಸುವುದರ ಮೂಲಕ ಗುರು ಬಾಬಾ ಮಹಾರಾಜರು ಕೈಗೊಳ್ಳುವ ಭವರೋಗ ನಿವಾರಣೆಯ ಶ್ರೇಷ್ಠ ಕಾರ್ಯದಿಂದ ಹರಿ ಕೃಪೆ ಹರಿದು ಬರುವಂತಾಗಿದೆ.

ಕಾಶಿ ಜಗದ್ಗುರುಗಳ ಸಾನಿಧ್ಯ ಸಮಾರಂಭದ ಘನತೆ ನೂರ್ಮಡಿ ವೃದ್ಧಿಸಿದೆ.

ದೇಶಬಾಂಧವರಿಗೆ ಶ್ರೀರಾಮಚಂದ್ರ ಮಂಗಳವನ್ನುಂಟು ಮಾಡಲಿ ಎಂದು ಶುಭ ಹಾರೈಸಿದರು.

ಶ್ರೀಮದ್ ಕಾಶಿ ಜಗದ್ಗುರುಗಳು ಪಾವನ ಸಾನಿಧ್ಯ ವಹಿಸಿದ್ದರು.

ಸದ್ಗುರುಗುರುಬಾಬಾಮಹಾರಾಜರು ಔಸಾ ಸ್ವಾಗತಿಸಿದರು.

ಗಹಿನಿನಾಥ ಮಹಾರಾಜ ಔಸಾ, ಬಿ. ಕೆ. ಹಿರೇಮಠ, ಮಲ್ಲಿನಾಥ ಹಿರೇಮಠ ಹಾರಕೂಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಾರ್ತಿಕ ಸ್ವಾಮಿ ಯಲದಗುಂಡಿ ಪ್ರಾರ್ಥನಾ ಗೀತೆ ಹಾಡಿದರು.

ಹಾರಕೂಡ ಶ್ರೀಮಠ ಹಾಗೂ ಔಸಾ ಸಂಸ್ಥಾನದ ಅಪಾರ ಭಕ್ತರು ಭಾಗವಹಿಸಿದ್ದರು.

## ಕೆ.ಎಸ್.ಆರ್.ಟಿ.ಸಿಗೆ ಅಂತರರಾಷ್ಟ್ರೀಯ ಮನ್ನಣೆ: 3 ಪ್ರತಿಷ್ಠಿತ ಬ್ರಾಂಡ್ ಪ್ರಶಸ್ತಿಗಳು

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಮಾರ್ಚ್ 22, 2025: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆ.ಎಸ್.ಆರ್.ಟಿ.ಸಿ) ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡು 3 ಪ್ರತಿಷ್ಠಿತ ಬ್ರಾಂಡ್ ಕೌನ್ಸಿಲ್ ರೇಟಿಂಗ್ಸ್ ಪ್ರಶಸ್ತಿಗಳನ್ನು ಪಡೆದು ಕರ್ನಾಟಕದ ಹೆಮ್ಮೆಯಾಗಿದೆ.

ಥಾಯ್ಲ್ಯಾಂಡ್ನ ಬ್ಯಾಂಕಾಕ್ನಲ್ಲಿ ನಡೆದ ಇಂಡಿಯಾ–ಥಾಯ್ ಚೇಂಬರ್ ಆಫ್ ಕಾಮರ್ಸ್ ಪ್ರಶಸ್ತಿ ಸಮಾರಂಭದಲ್ಲಿ ಕೆ.ಎಸ್.





ಆರ್.ಟಿ.ಸಿಯ "ಅಶ್ವಮೇಧ" ಬ್ರಾಂಡ್ಗೆ "ವರ್ಷದ ಐಕಾನಿಕ್ ಬ್ರಾಂಡ್" ಪ್ರಶಸ್ತಿ, ಕೆ.ಎಸ್. ಆರ್.ಟಿ.ಸಿ ಆರೋಗ್ಯ ಯೋಜನೆಗೆ "ವರ್ಷದ ಅತ್ಯುತ್ತಮ ಉಪಕ್ರಮ" ಹಾಗೂ ಕಾರ್ಮಿಕ ಕಲ್ಯಾಣ ಯೋಜನೆಗಳಿಗೆ "ಉತ್ತಮ ಸಂಸ್ಥೆ" ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

## ಸಡಗರದಿಂದ ಜರುಗಿತ್ತು ಜಲ ಸಂರಕ್ಷಣೆ ಜನ ಜಾಗೃತಿ ಜಾಥಾ





ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:– ಬೀದರ್ ತಾಲೂಕಿನ ಮರಕುಂದ ಗ್ರಾಮದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ವಿಶ್ವ ಜಲ ದಿನಾಚರಣೆ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಇಲ್ಲಿಯ ಚಾಲುಕ್ಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಈ ಕಾರ್ಯಕ್ರಮ ಜರುಗಿತ್ತು. ಬೆಮಳಖೇಡಾ ಪೊಲೀಸ್ ಠಾಣೆ ಪಿಎಸ್ಐ ನಿಂಗಪ್ಪ ಮಣ್ಣೂರ್ ವಿಶ್ವ ಜಲ ದಿನಾಚರಣೆ ಹಾಗೂ ಜಲ ಸಂರಕ್ಷಣೆ ಜನಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಪ್ರಕೃತಿ ದತ್ತವಾದ ನೀರಿನ ಸಂಪತ್ತು ಸಂರಕ್ಷಿಸಿ ಉಳಿಸುವಂತಹ ಜವಾಬ್ದಾರಿ ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಿದೆ ಎಂದರು. ನೀರಿನ ಮೂಲಗಳನ್ನು ಮಾಲಿನ್ಯ ಮಾಡುವ ವಿರುದ್ಧ ಪರಿಸರ ಕಾಯ್ದೆಯಲ್ಲಿ ಪ್ರಕಣ ದಾಖಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಹಾಯಕ ಪರಿಸರ ಅಧಿಕಾರಿ ಜಗನ್ನಾಥ್ ಹುಣಸಗೇರಿ ಜಲ ಸಂರಕ್ಷಣೆ ಜನಜಾಗೃತಿ ಕಾರ್ಯಕ್ರಮಕ್ಕೆ ಸಸಿ ವಿತರಿಸಿ ಚಾಲನೆ ನೀಡಿ ಮಾತನಾಡಿದ ಅವರು, ನದಿ ಹಳ್ಳಕೊಳ್ಳನ್ನು ಮಾಲಿನ್ಯ ಮಾಡದೆ ಸ್ವಚ್ಛತೆ ಕಾಪಾಡಿಕೊಳ್ಳಲು ಸಲಹೆ ನೀಡಿದರು. ಪರಿಸರವಾದಿ ಶೈಲೇಂದ್ರ ಕಾವಡಿ ಮಾತನಾಡಿ, ಚಾಲುಕ್ಯ ಶಿಕ್ಷಣ ಸಂಸ್ಥೆ ಹಾಗೂ ಪರಿಸರ ವಾಹಿನಿ ಬೀದರ್ ವಿದ್ಯಾರ್ಥಿಗಳಲ್ಲಿ ಪರಿಸರ ಅರಿವು ಮೂಡಿಸಲು ಹೆಚ್ಚಿನ ಒತ್ತು ನೀಡುತ್ತಿದ್ದೇವೆ ಎಂದರು. ಶಿಕ್ಷಕಿ ಭವ್ಯ ಸಂಗಾರೆಡ್ಡಿ ವಿಶ್ವ ಜಲ ದಿನಾಚರಣೆ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಚಾಲುಕ್ಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದ ಕೃಷ್ಣ ಕುಲಕರ್ಣಿ, ಸೂರ್ಯಕಾಂತ್, ಅಶೋಕ್, ಬಕ್ಕಪ್ಪ, ವಿನಾಯಕ್, ಸುರೇಖಾ, ಕಾವೇರಿ, ಅಕ್ಷತಾ, ಜೈಪ್ರಕಾಶ ಪ್ರೌಢ ಶಾಲೆ ಮುಖ್ಯ ಗುರುಗಳಾದ ಸುಖಾನಂದ, ಕಾಶಿನಾಥ್ ನಿಡಗುಂದಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಂದ ನದಿ ಅಳಲು ಕಿರು ನಾಟಕ ಪ್ರದರ್ಶಿಸಿದರು, ಸಂಸ್ಥೆಯ ಅಧ್ಯಕ್ಷ ಶಾಮರಾವ ಹುಡೆದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿದ್ಯಾರ್ಥಿಗಳಿಂದ ಗ್ರಾಮದಲ್ಲಿ ಜಲ ಸಂರಕ್ಷಣೆ ಜನಜಾಗೃತಿ ಜಾತಾ ಜರುಗಿತ್ತು.

## ರಾಯಕೋಡ ಶಾಲೆಯಲ್ಲಿ 10ನೇತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ




ಮಲ್ಲಮ್ಮ ನುಡಿ ವಾರ್ತೆ

ಸೇಡಂ. ಮಾ. 24–. ವಿಧಾನಸಭಾ ಕ್ಷೇತ್ರದ ರಾಯ–ಕೋಡ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ 10ನೇ ತರಗತಿಯ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಕಾರ್ಯಕ್ರಮ ನೆರವೇರಿತು. ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರು ಪ್ರಕಾಶ್ ರಂಗನೂರ್ ಶಾಲಾ ಮುಖ್ಯ ಗುರುಗಳಾದ ಆನಂದಪ್ಪ ಊರಿನ ನಿವೃತ್ತ ಶಿಕ್ಷಕರಾದ ವೀರಾರೆಡ್ಡಿ ಎಸ್ ಡಿ ಎಮ್ ಸಿ ಅಧ್ಯಕ್ಷ ಸಿದ್ದಪ್ಪ ಪೂಜಾರಿ ಸದಸ್ಯರಾದ ಸಂತೋಷ, ತೋಟಪ್ಪ, ಗ್ರಾಮ ಪಂಚಾಯತ್ ಸದಸ್ಯರಾದ ಮೋಹನಬಾಬು ಶಿಕ್ಷಣ ಪ್ರೇಮಿಗಳಾದ ಶ್ರೀ ಬ್ರಹ್ಮಾನಂದರೆಡ್ಡಿ ಗೋಟೂರ ಅರ್ಜುನ್ ಕ್ರಾಂತಿ, ಶಾಲಾ ಶಿಕ್ಷಕರಾದ ಸುರೇಶ, ಮಲ್ಲಿಕಾರ್ಜುನ, ಅತಿಥಿ ಶಿಕ್ಷಕರ ಜಗನ್ನಾಥ, ಚಂದ್ರಕಾಂತ, ರಾಜೇಶ್ವರಿ ಸೀಮಾ ಶಾಲಾ ಮಕ್ಕಳು ಭಾಗವಹಿಸಿದ್ದರು. ಈ ಕಾರ್ಯಕ್ರಮದ ನಿರೂಪಣೆಯನ್ನು ಸುರೇಶ ಸರ ನಡೆಸಿ ಕೊಟ್ಟರು. ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣವನ್ನು ಮಲ್ಲಿಕಾರ್ಜುನ ಸರ್ ನಡೆಸಿಕೊಟ್ಟರು.

ಈ ಕಾರ್ಯಕ್ರಮ ವನ್ನು ಉದ್ದೇಶಿಸಿ ಅಧ್ಯಕ್ಷ ಪ್ರಕಾಶ್ ರಂಗನೂರ ಮಾತನಾಡುತ್ತ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಎದೆಗುಂದದೆ ಧೈರ್ಯದಿಂದ ಎದುರಿಸಿ ಯಂದು ಹೇಳಿದರು. ಮತ್ತು ಶಾಲಾ ಮುಖ್ಯ ಗುರುಗಳು ಮಾತನಾಡುತ್ತ ಪರೀಕ್ಷೆಯನ್ನು ಉತ್ತಮವಾಗಿ ಎದುರಿಸಿ ಹೆಚ್ಚು ಅಂಕಗಳು ಪಡೆದು ಶಾಲೆಗೇ ತಂದೆ ತಾಯಿ ಗಳಿಗೆ ಕೀರ್ತಿ ತನ್ನಿ ಎಂದು ಹೇಳಿದರು. ಅದೇ ರೀತಿ ನಿವೃತ್ತ ಶಿಕ್ಷಕರ ವೀರರೆಡ್ಡಿ ಮಾತನಾಡುತ್ತಾ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಎದೆಗುಂದದೆ ನಿಧಾನವಾಗಿ ಯಾವುದೇ ತಪ್ಪು ತಡೆಗಳನ್ನು ಮಾಡದೆ ಪರೀಕ್ಷೆ ಬರೆದು ಯಶಸ್ವಿಯಾಗಿ ಎಂದು ತಿಳಿಸಿದರು. ಶ್ರೀ ಬ್ರಹ್ಮಾನಂದರೆಡ್ಡಿ ಮಾತನಾಡಿ ಮಕ್ಕಳು ಪರೀಕ್ಷೆ ಮುಗಿಯುವವರೆಗೂ ಮೊಬೈಲ್ ನಿಂದ ದೂರವಿದ್ದು ಪರೀಕ್ಷೆ ಮೇಲೆ ಹೆಚ್ಚು ಗಮನಹರಿಸಿ ಒಳ್ಳೆಯ ಫಲಿತಾಂಶ ಪಡೆಯಲು ತಿಳಿಸಿದರು. ಅಲ್ಲದೆ ಶಾಲಾ ಮಕ್ಕಳು ಮತ್ತು ಎಲ್ಲಾ ಅತಿಥಿಗಳು ಕಾರ್ಯಕ್ರಮ ಕುರಿತು ಮಾತನಾಡಿದರು. ಹೀಗೆ ಈ ಕಾರ್ಯಕ್ರಮ ವು ಅತ್ಯಂತ ವಿಜೃಂಭಣೆಯಿಂದ ಅಚ್ಚುಕಟ್ಟಾಗಿ ನಡೆಯಿತು.

## ಗುರುಮಠಕಲ್ ಪುರಸಭೆಯಲ್ಲಿ 2025–26 ನೇ ಸಾಲಿನ ಬಜೆಟ್ ಮಂಡಣೆ



ಮಲ್ಲಮ್ಮ ನುಡಿ ವಾರ್ತೆ

ಗುರುಮಠಕಲ. ಮಾ. 24. ನಗರದ ಪುರಸಭೆ ಕಾರ್ಯಾಲಯದ ಸಾಮಾನ್ಯ ಸಭೆ ಮತ್ತು 2025–26 ನೇ ಸಾಲಿನ ಆಯ–ವ್ಯಯದ (ಬಜೆಟ್) ಮಂಜೂರಾತಿ ಸಭೆಯನ್ನು

ಮಾನ್ಯ ಅಧ್ಯಕ್ಷರಾದ ಶ್ರೀಮತಿ ಜಯಶ್ರೀ ಆರ್ ಪಾಟೀಲ್ ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು, ಬೆಳಿಗ್ಗೆ 10.30 ನಿ.ಕ್ಕೆ ಪ್ರಾರಂಭವಾದ ಸಾಮಾನ್ಯ ಸಭೆ ಮತ್ತು ಬಜೆಟ್ ಮಂಡನೆಯು ಗುರುಮಠಕಲ್ ಪುರಸಭೆ ಮುಖ್ಯಾಧಿಕಾರಿ ಶ್ರೀಮತಿ ಭಾರತಿ ದಂಡೆ ಸಮ್ಮುಖದಲ್ಲಿ ಕೆಳಕಂಡ

ಪ್ರಮುಖ ವಿಷಯಗಳು ಚರ್ಚಿಸಿ ನಿರ್ಣಯ ತೆಗೆದು ಕೊಳ್ಳಲಾಯಿತು. ಆಸ್ತಿ ತೆರಿಗೆ ದರ ಪರಿಷ್ಕರಣೆ ಶೇಕಡ 3 ಹೆಚ್ಚಳ. ಆದಾಯ ಮತ್ತು ಖರ್ಚಿನ ವಿವರ ನೀಡಿ ಅನಧಿಕೃತ ಪುರಸಭೆ ಪರವಾನಿಗೆ ಇಲ್ಲದ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು, ಪುರಸಭೆ ಜಾಹೀರಾತು ಫಲಕ 3 ರೂಪಾಯಿ/ಚದರ ಫೂಟ್ ಹಾಗೂ ಜಾಹೀರಾತಿಗಾಗಿ ಬಳಸುವ ನೆಲಬಾಡಿಗೆ ವಾರ್ಷಿಕವಾಗಿ 30000 ರೂಪಾಯಿ ನಿಗದಿ ಮಾಡಲಾಗಿದೆ, ವರ್ಗಾವಣೆ ಶುಲ್ಕ ಯಥಾಸ್ಥಿತಿ ಕಾಯ್ದುಕೊಳ್ಳಲು ತೀರ್ಮಾನಿಸಲಾಯಿತು. ಅಂಬೇಡ್ಕರ್ ಕಲ್ಯಾಣ ಮಂಟಪ ಮೂಲಭೂತ ಸೌಕರ್ಯ ಕಲ್ಪಿಸಿ ಬಾಡಿಗೆ 5000 ರೂಪಾಯಿ ನಿಗದಿ ಮಾಡಲಾಯಿತು. ಬಸ್ ನಿಲ್ದಾಣ ದಿಂದ ಕೆ. ಹೆಚ್. ಡಿ. ಸಿ. ಕಾಲೋನಿ ವರೆಗಿನ ಮಾಂಸ ಅಂಗಡಿಗಳ ತೆರವು ಗೊಳಿಸುವ ಕುರಿತು ಚರ್ಚೆ ಮಾಡಲಾಯಿತು. ನೀರು ಶುದ್ದೀಕರಣ ಘಟಕಗಳ ಕುರಿತು ಮತ್ತು ಪುರಸಭೆ ವ್ಯಾಪ್ತಿಯಲ್ಲಿ ಹೊಸದಾಗಿ ಸೃಜಿಸಿರುವ ವಸತಿ ವಿನ್ಯಾಸಗಳ ಅನುಮೋದನೆಯ ಕುರಿತು ಚರ್ಚೆ ಮಾಡಲಾಯಿತು ಯು. ಜಿ. ಡಿ. ಕುರಿತು ಸಾಕಷ್ಟು ಸಮಸ್ಸೆಗಳ ಬಗ್ಗೆ ಚರ್ಚಿಸಲಾಯಿತು. ರಾಜಕುಮಾರ್ ಹಬೀಬ್ ಇಂಜಿನಿಯರ್ ಶೀಘ್ರದಲ್ಲಿ ಅಮೃತ 2.0 ಹಾಗೂ ಯು. ಜಿ. ಡಿ ಕುರಿತು ಪುರಸಭೆ ಅಧಿಕಾರಿಗಳೊಂದಿಗೆ ವಿಶೇಷ ಸಭೆ ಕರೆಯಲು ಪುರಸಭೆ ಸದಸ್ಯರ ತೀರ್ಮಾನ. ಇದೇ ವಾರದಲ್ಲಿ ಗುರುಮಠಕಲ್ ನಗರದ ಬಸ್ ನಿಲ್ದಾಣದಿಂದ ನಾರಾಯಣಪೇಟ್ ಕ್ರಾಸ್ ವರೆಗಿನ ರಸ್ತೆ ನಿರ್ಮಾಣ ಕಾರ್ಯಕ್ರಮ ಪ್ರಾರಂಭ ಮಾಡುವದಾಗಿ ಲ್ಯಾಂಡ್ ಆರ್ಮಿ ಯಾದಗಿರಿ ಸಹಾಯಕ ಇಂಜಿನಿಯರ ತಿಳಿಸಿದರು. ಪುರಸಭೆ ಆಯಾ ವ್ಯಯ ವಿವರಿಸಲಾಯಿತು. ಈ ಸಭೆಯಲ್ಲಿ ಪುರಸಭೆ ಚುನಾಯಿತ ಸದಸ್ಯರು, ನಾಮ ನಿರ್ದೇಶನ ಸದಸ್ಯರು, ಪುರಸಭೆ ಸಿಬ್ಬಂದಿ, ವಿವಿಧ ಇಲಾಖೆ ಅಧಿಕಾರಿಗಳು, ಹಾಜರಿದ್ದರು.

# ಬೊಮ್ಮಗೊಂಡೇಶ್ವರ ತತ್ವಗಳ ಪ್ರಚಾರ ಆಗಲಿ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 24: ಮಹಾತ್ಮ ಬೊಮ್ಮಗೊಂಡೇಶ್ವರ ತತ್ವಗಳ ಹೆಚ್ಚು ಹೆಚ್ಚು ಪ್ರಚಾರ ಆಗಬೇಕು ಎಂದು ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಹೇಳಿದರು.

ಜಿಲ್ಲಾ ಗೊಂಡ ವಿದ್ಯಾರ್ಥಿ ಸಂಘದಿಂದ ನಗರದ ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ ಭಾನುವಾರ ಆಯೋಜಿಸಿದ್ದ ಮಹಾತ್ಮ ಬೊಮ್ಮಗೊಂಡೇಶ್ವರ ಉತ್ಸವದಲ್ಲಿ ಅವರು ಮಾತನಾಡಿದರು.

ಎಲ್ಲರೂ ಬೊಮ್ಮಗೊಂಡೇಶ್ವರ ಇತಿಹಾಸ ಅರಿಯಬೇಕು. ಅವರ ಆದರ್ಶ ತತ್ವಗಳನ್ನು ಪಾಲಿಸಬೇಕು ಎಂದು ತಿಳಿಸಿದರು.

ಮಾಜಿ ಸಚಿವ ಬಂಡೆಪ್ಪ ಕಾಶೆಂಪುರ ಮಾತನಾಡಿ, ಬೊಮ್ಮಗೊಂಡೇಶ್ವರ ಕುರಿತು ಹೆಚ್ಚಿನ ಕೃತಿಗಳು ಹೊರ ಬರಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಗೊಂಡ ವಿದ್ಯಾರ್ಥಿ ಸಂಘದ ಅಧ್ಯಕ್ಷ ಸಂತೋಷಕುಮಾರ ಜೋಳದಾಪಕೆ ಮಾತನಾಡಿ, ಬೊಮ್ಮಗೊಂಡೇಶ್ವರ ಜೀವನ ಮತ್ತು ಸಾಧನೆಗಳನ್ನು ಯುವ ಪೀಳಿಗೆಗೆ ತಿಳಿಸಲು ಉತ್ಸವ ಹಮ್ಮಿಕೊಳ್ಳಲಾಗಿದೆ. ಎಲ್ಲರ ಸಹಕಾರದಿಂದ ಉತ್ಸವ ಯಶಸ್ವಿಯಾಗಿದೆ ಎಂದು ತಿಳಿಸಿದರು.

ಮಹಾತ್ಮ ಬೊಮ್ಮಗೊಂಡೇಶ್ವರ ಪ್ರಶಸ್ತಿ ಸ್ವೀಕರಿಸಿದ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಕೆ.ಎಂ. ಮೇತ್ರಿ ಅವರು ಬೊಮ್ಮಗೊಂಡೇಶ್ವರ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಮೃತರಾವ್ ಚಿಮಕೋಡೆ, ಬಿಡಿಎ ಮಾಜಿ ಅಧ್ಯಕ್ಷ ಮುರಳಿಧರ ಎಕಲಾರಕರ್




ಮಾತನಾಡಿದರು.

ಸಾಹಿತಿ ಸುನಿತಾ ಕೂಡ್ಲಿಕರ್ ರಚಿತ ಸಾಂಸ್ಕೃತಿಕ ವೀರ ಬೊಮ್ಮಗೊಂಡೇಶ್ವರ ಕೃತಿ ಬಿಡುಗಡೆ ಮಾಡಲಾಯಿತು. ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು. ನಾಟ್ಯಶ್ರೀ ನೃತ್ಯಾಲಯ ಹಾಗೂ ವಿವಿಧ ಕಲಾ ತಂಡಗಳ ಕಲಾವಿದರು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮ ಸಭಿಕರ ಮನ ರಂಜಿಸಿತು.

ವಿಧಾನ ಪರಿಷತ್ ಮಾಜಿ ಸಭಾಪತಿ ರಘುನಾಥರಾವ್ ಮಲ್ಕಾಪುರೆ ಉತ್ಸವವನ್ನು ಉದ್ಘಾಟಿಸಿದರು. ಭಾಲ್ಕಿಯ ಗುರುಬಸವ ಪಟ್ಟದ್ದೇವರು, ಕನಕ ಗುರುಪೀಠ ತಿಂಥಣಿಬ್ರಿ?????ನ ಬೀರಲಿಂಗದೇವರು, ಸಿದ್ಧಯ್ಯ ಆಧುನಿಕ ಒಡೆಯರ್, ಭಂತೆ ಸಂಘರಕ್ಖಿತ, ಉಚ್ಚಾದ ಬಾಲ ತಪಸ್ವಿ ಗೋಪಾಲ್ ಮುತ್ಯಾ, ಸರ್ದಾರ್ ಮ???ಮೀತ್ ಸಿಂಗ್ ಗ್ರಂಥಿ ಮುಖಂಡರಾದ ಪಂಡಿತರಾವ್ ಚಿದ್ರಿ, ಗೀತಾ ಚಿದ್ರಿ, ಮಲ್ಲಿಕಾರ್ಜುನ ಬಿರಾದಾರ (ಪರಿಹಾರ), ಬಸವರಾಜ ಧನ್ನೂರ, ಸೋಮಶೇಖರ ಬಿರಾದಾರ, ಮಾಳಪ್ಪ ಅಡಸಾರೆ, ಸುರೇಶ್ ಚನಶೆಟ್ಟಿ, ಡಾ. ಸುಚಿತಾನಂದ್ ಮಲ್ಕಾಪುರೆ, ಡಾ. ಜಿ.ಬಿ. ಮಲ್ಲಿಕಾರ್ಜುನ, ಬಾಬುರಾವ್ ಬರಿದಾಬಾದ್, ಸಂಜೀವಕುಮಾರ ಅತಿವಾಳೆ, ದೇವಪ್ಪ ಜಾಂಬೋಳೆ, ವಿಜಯಕುಮಾರ ಸೋನಾರೆ, ಡಾ. ರಾಜಕುಮಾರ ಹೆಬ್ಬಾಳೆ, ಸುಭಾಷ್ ನಾಗೂರೆ, ಡಾ. ಶರಣಪ್ಪ ಮಲಗೊಂಡ, ಪ್ರಕಾಶ ದೇಶಮುಖ, ಹಣಮಂತ ಮಲ್ಕಾಪುರ, ವಿಜಯಕುಮಾರ ಡುಮ್ಮೆ, ವಿಜಯಕುಮಾರ ಮಲ್ಕಾಪುರೆ, ರವಿ ದುರ್ಗೆ, ಬಾಬುರಾವ್ ಕಾಶೆಂಪುರೆ, ಕೆ.ಡಿ. ಗಣೇಶ್, ಕಲ್ಲಪ್ಪರಾಯಗೊಂಡ, ತುಕಾರಾಮ ಚಿಮಕೋಡೆ, ಸಚಿನ್ ಮಲ್ಕಾಪುರ, ಮಲ್ಲಿಕಾರ್ಜುನ್ ಮುರ್ಕಿ, ಎಂ.ಪಿ. ವೈಜಿನಾಥ, ಸಿದ್ದು ಬಾವಗಿ ಮತ್ತಿತರರು ಇದ್ದರು.

ನಾಗಪ್ಪ ಜಾನಕನೋರ ನಿರೂಪಿಸಿದರು. ವಿಜಯಕುಮಾರ ಬ್ಯಾಲಹಳ್ಳಿ ಸ್ವಾಗತಿಸಿದರು. ಸುನಿಲ್ ಚಿಲ್ಲರ್ಗಿ ವಂದಿಸಿದರು.

# ಆನಂದ ಅನುಭೂತಿ ಶಿಬಿರ ನಾಳೆಯಿಂದ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 24 : ಆರ್ಟ್ ಆಫ್ ಲಿವಿಂಗ್ ವತಿಯಿಂದ ನಗರದ ಗುಂಪಾ ರಸ್ತೆಯಲ್ಲಿ ಇರುವ ರಾಮಚೌಕ್ ಸಮೀಪದ ಹನುಮಾನ ಮಂದಿರದ ಎದುರು ಮಾ. 26 ರಿಂದ 31 ರ ವರೆಗೆ ಆನಂದ ಅನುಭೂತಿ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಆರ್ಟ್ ಆಫ್ ಲಿವಿಂಗ್ ಬೀದರ್ ಜಿಲ್ಲಾ ಅಭಿವೃದ್ಧಿ ಸಮಿತಿ ಸದಸ್ಯ ಕಾಮಶೆಟ್ಟಿ ಚಿಕ್ಕಬಸೆ ತಿಳಿಸಿದ್ದಾರೆ.

ಬೆಳಿಗ್ಗೆ 6 ರಿಂದ 8 ಹಾಗೂ ಸಂಜೆ 6 ರಿಂದ 8 ರ ವರೆಗೆ ಶಿಬಿರ ನಡೆಯಲಿದೆ ಎಂದು ಹೇಳಿದ್ದಾರೆ.

ಆರ್ಟ್ ಆಫ್ ಲಿವಿಂಗ್ ಯೋಗ ಶಿಕ್ಷಕರಾದ ಅಶೋಕ ಎಸ್. ಮಂದಕನಳ್ಳಿ ಹಾಗೂ ಶಿವಾನಂದ ಮಡಿವಾಳ ಅವರು ಯೋಗ, ಧ್ಯಾನ, ಪ್ರಾಣಾಯಾಮ, ಉಸಿರಾಟ ಪ್ರಕ್ರಿಯೆ ಹಾಗೂ ಸುದರ್ಶನ ಕ್ರಿಯೆಗಳನ್ನು ಹೇಳಿಕೊಡಲಿದ್ದಾರೆ ಎಂದು ತಿಳಿಸಿದ್ದಾರೆ.

ಆಸಕ್ತರು ಹೆಸರು ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 7022513111 ಅಥವಾ 7259838372 ಸಂಪರ್ಕಿಸಬಹುದು ಎಂದು ಹೇಳಿದ್ದಾರೆ.

# ಬೀದರ್‌ನಲ್ಲಿ ಹುತಾತ್ಮರ ದಿನ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 24 : ದೇಶಕ್ಕಾಗಿ ಹುತಾತ್ಮರಾದ ಕ್ರಾಂತಿಕಾರಿಗಳಾಗಿದ್ದ ಭಗತ್ ಸಿಂಗ್, ರಾಜಗುರು ಹಾಗೂ ಸುಖದೇವ್ ಅವರ 94ನೇ ಹುತಾತ್ಮ ದಿನ ನಗರದಲ್ಲಿ ಭಾನುವಾರ ಆಚರಿಸಲಾಯಿತು.

ಕರ್ನಾಟಕ ರಕ್ಷಣಾ ವೇದಿಕೆ, ಯುವ ಜನಾಂದೋಲ ಸಂಘಟನೆಯಿಂದ ನಗರದ ಭಗತ್ ಸಿಂಗ್ ವೃತ್ತದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಯುವ ಮುಖಂಡ ಶ್ರೀಮಂತ ಸಪಾಟೆ ಮಾತನಾಡಿ, 'ಯುವಕರು ಭಗತ್ ಸಿಂಗ್ ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಪಾಲಿಸಬೇಕು' ಎಂದರು.

ಕರವೇ ಜಿಲ್ಲಾಧ್ಯಕ್ಷ ಅರುಣ ಕೋಡಗೆ, ಜಿಲ್ಲಾ ಉಪಾಧ್ಯಕ್ಷ ಅಮರ್ ಗಾದಗಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೋಮನಾಥ ಮಡಕೆ, ಜಿಲ್ಲಾ ಕಾರ್ಯಾಧ್ಯಕ್ಷ ಪ್ರಭು ಮದರಗಿಕರ್, ಸುನೀಲ, ರಾಜು ಗಂದಗೆ, ರಾಜು ಗುಬ್ಬೆ, ಓಂಪ್ರಕಾಶ ರೊಟ್ಟೆ, ಮುಹಮ್ಮದ್ ನಿಜಾಮುದ್ದೀನ್ ಮತ್ತಿತರರು ಹಾಜರಿದ್ದರು.

# ಕೋವಿಡ್ ನಿರ್ವಹಣೆಯಲ್ಲಿ ಪಾರಂಪರಿಕ ವೈದ್ಯರ ಪಾತ್ರ ಹಿರಿದು: ಈಶ್ವರ ಖಂಡ್ರೆ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 24: ಕೋವಿಡ್ ನಿರ್ವಹಣೆಯಲ್ಲಿ ಪಾರಂಪರಿಕ ವೈದ್ಯರ ಪಾತ್ರ ಬಹಳಷ್ಟಿದೆ ಎಂದು ರಾಜ್ಯದ ಅರಣ್ಯ, ಪರಿಸರ, ಜೀವಶಾಸ್ತ್ರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

ಜಿಲ್ಲಾಡಳಿತ, ಕರ್ನಾಟಕ ರಾಜ್ಯ ವೈದ್ಯ ಪರಿಷತ್ತು, ಕರ್ನಾಟಕ ಜೀವವೈವಿಧ್ಯ ಮಂಡಳಿ, ಕಲ್ಯಾಣ ಕರ್ನಾಟಕ ಪಾರಂಪರಿಕ ವೈದ್ಯ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಇತ್ತೀಚೆಗೆ ನಗರದಲ್ಲಿ ಜರುಗಿದ 15ನೇ ಪಾರಂಪರಿಕ ವೈದ್ಯ ಸಮ್ಮೇಳನದ ಯಶಸ್ವಿಗಾಗಿ ದುಡಿದವರಿಗೆ ಭಾನುವಾರ ಕರ್ನಾಟಕ ಸಾಹಿತ್ಯ ಸಂಘದಲ್ಲಿ ಆಯೋಜಿಸಿದ ಸ್ನೇಹಕೂಟ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.



ಆಯುರ್ವೇದದ ಕುರಿತು ಜ್ಞಾನವೃದ್ಧಿ, ಸಸ್ಯ ಹಾಗೂ ಗಿಡಮೂಲಿಕೆಗಳ ಬಗ್ಗೆ ಅರಿವು ಮೂಡಿಸಲು ಹಾಗೂ ಸಂರಕ್ಷಣೆ ಸಂವೃದ್ಧಿಗಾಗಿ ನಾಟಿ ವೈದ್ಯ ಸಮ್ಮೇಳನ ಪೂರಕವಾಗಿತ್ತು. ನಮ್ಮ ನಿರೀಕ್ಷೆಗೂ ಮೀರಿ ಎಲ್ಲರ ಪ್ರಯತ್ನದಿಂದ ಸಮ್ಮೇಳನ ಯಶಸ್ವಿ ಕಂಡಿದೆ. ಡಾ. ಜಗನ್ನಾಥ ಹೆಬ್ಬಾಳೆ ಹಾಗೂ ತಂಡದವರು ಸಾಕಷ್ಟು ದುಡಿದಿದ್ದಾರೆ. ವೈದ್ಯರಿಗೆ ದೇವರ ಸಮಾನ ಎಂದು ಹೇಳುತ್ತೇವೆ. ಸಮಾಜದಲ್ಲಿ ಅವರಿಗೆ ದೊಡ್ಡ ಸ್ಥಾನಮಾನವಿದೆ. ಕಾಯಿಲೆಗಳು ದಿನೇ ದಿನೇ ಜಾಸ್ತಿಯಾಗಿರುತ್ತಿರುವ ಇಂದಿನ ಕಾಲದಲ್ಲಿ ಪಾರಂಪರಿಕ ವೈದ್ಯರ ಪಾತ್ರ ಬಹುಮುಖ್ಯವಾಗಿದೆ. ಜೀವಸಂಕುಲ, ಸಸ್ಯಸಂಕುಲ, ಪ್ರಾಣಿಸಂಕುಲ ಭೂಮಿ ಮೇಲಿವೆ. ಇವುಗಳನ್ನು ಉಳಿಸುವುದರ ಜೊತೆಗೆ ಅರಣ್ಯ ಸಂಪತ್ತು ಉಳಿಸುವ ಜವಾಬ್ದಾರಿ ನಮ್ಮ ಮೇಲಿದೆ. ಯಾವ ಸಸ್ಯದಲ್ಲಿ ಯಾವ ಔಷಧೀಯ ಗುಣವಿದೆ ಎಂಬುದನ್ನು ಕಂಡು ಹಿಡಿದು ಜನರಿಗೆ ಉಚಿತವಾಗಿ ಹಾಗೂ ಕಡಿಮೆ ದರದಲ್ಲಿ ಚಿಕಿತ್ಸೆ ಕೊಡುವ ಕಲೆ ನಾಟಿ ವೈದ್ಯರಲ್ಲಿದೆ. ಈ ಜ್ಞಾನವನ್ನು ಸಮ್ಮೇಳನದ ವಿವಿಧ ಗೋಷ್ಠಿಗಳ ಮೂಲಕ ಜನಸಾಮಾನ್ಯರಿಗೆ ತಲುಪಿಸುವ ಉದ್ದೇಶ ನನ್ನದಾಗಿತ್ತು. ಅದು ಸಾಕಾರಗೊಂಡಿದೆ. ಸಮ್ಮೇಳನದ ಯಶಸ್ವಿಗೆ ಹಗಲು ರಾತ್ರಿ ದುಡಿದ ಎಲ್ಲಾ ಸಾಧಕರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದರು.

ಪಾರಂಪರಿಕ ವೈದ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಟಿ. ಮಹಾದೇವಯ್ಯ ಮಾತನಾಡಿ ರಾಜ್ಯದ ಮನೆಮನೆಗಳಲ್ಲಿ ಮನೆಮದ್ದು ಕಾರ್ಯಕ್ರಮ ನಿರಂತರವಾಗಿ ನಡೆಯಬೇಕು. ಇದರಿಂದ ಪಾರಂಪರಿಕ ವೈದ್ಯ ಪದ್ಧತಿ ಪ್ರಚುರಪಡಿಸಿದಂತಾಗುತ್ತದೆ. ಆಯುರ್ವೇದದ ಜ್ಞಾನ ಎಲ್ಲರಿಗೂ ನೀಡಿದಂತಾಗುತ್ತದೆ. ನಮ್ಮ ಪರಿಷತ್ತಿನ ವತಿಯಿಂದಲೂ ಪ್ರತಿ ಮನೆಗೂ ನಾಟಿ ಔಷಧಿ ಜ್ಞಾನ ನೀಡಲು ನಾವು ಪ್ರಯತ್ನಿಸುತ್ತೇವೆ. ಬೀದರ ಪಾರಂಪರಿಕ ವೈದ್ಯ ಸಮ್ಮೇಳನದಿಂದ ನಮಗೂ ತರಬೇತಿ ಸಿಕ್ಕಿದಂತಾಗಿದೆ. ಸದ್ಯ ಕರ್ನಾಟಕ ಸರ್ಕಾರದಲ್ಲಿ ಪಾರಂಪರಿಕ ವೈದ್ಯರಿಗೆ ಎರಡೇ ಹುದ್ದೆಗಳಿವೆ. ಆದರೆ ಅದನ್ನು 2% ಕ್ಕೆ ಏರಿಸಬೇಕೆಂದು ತಿಳಿಸಿದರು. ಪಾರಂಪರಿಕ ವೈದ್ಯ ಸಮ್ಮೇಳನದ ಸಂಯೋಜಕರಾದ ಡಾ. ಜಗನ್ನಾಥ ಹೆಬ್ಬಾಳೆ ಮಾತನಾಡಿ ಕರ್ನಾಟಕ ಜಾನಪದ ಸಮ್ಮೇಳನದ ಬಳಿಕ ಜಿಲ್ಲೆಯಲ್ಲಿ ಈ ಸಮ್ಮೇಳನ ಐತಿಹಾಸಿಕವಾಗಿ ಕಾರ್ಯಗತವಾಗಿದೆ. ಮುಂದಿನ ದಿನಗಳಲ್ಲಿ ಸಾರ್ಕ್ ಕಲಾವಿದರನ್ನು ಬೀದರಗೆ ಕರೆಸಿ ಅಂತರಾಷ್ಟ್ರೀಯ ಜಾನಪದ ಸಮ್ಮೇಳನ ಮಾಡಲು ತೀರ್ಮಾನಿಸಲಾಗಿದ್ದು, ಇದಕ್ಕೆ ಸಚಿವರಾದಿಯಾಗಿ ಎಲ್ಲರೂ ಸಹಕಾರ ನೀಡಬೇಕೆಂದು ತಿಳಿಸಿದರು.

ಸಾಮಾಜಿಕ ಅರಣ್ಯ ಇಲಾಖೆಯ ಉಪ ಸಂರಕ್ಷಣಾಧಿಕಾರಿ ಡಾ. ಎ.ಬಿ. ಪಾಟೀಲ ಸ್ವಾಗತಿಸಿದರು. ಡಾ. ರಾಜಕುಮಾರ ಹೆಬ್ಬಾಳೆ ನಿರೂಪಿಸಿದರು. ಡಾ. ವಿದ್ಯಾ ಪಾಟೀಲ ವಂದಿಸಿದರು. ವೇದಿಕೆ ಮೇಲೆ ಡಾ. ಗುರಮ್ಮಾ ಸಿದ್ದಾರೆಡ್ಡಿ, ಡಾ. ಅಬ್ದುಲ್ ಖದೀರ್, ಡಾ. ಯು.ಸಿ. ಪಾಟೀಲ, ಚಂದ್ರಶೇಖರ ಹೆಬ್ಬಾಳೆ, ವೀರಶೆಟ್ಟಿ ಮಣಗೆ, ಮಡಿವಾಳಪ್ಪ ಮಂಗಲಗಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಬೊಮ್ಮಗೊಂಡೇಶ್ವರ ಭಾವಚಿತ್ರದ ಭವ್ಯ ಮೆರವಣಿಗೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 24 : ಜಿಲ್ಲಾ ಗೊಂಡ ವಿದ್ಯಾರ್ಥಿ ಸಂಘದಿಂದ ಮಹಾತ್ಮ ಬೊಮ್ಮಗೊಂಡೇಶ್ವರ ಉತ್ಸವ ನಿಮಿತ್ತ ನಗರದಲ್ಲಿ ಭಾನುವಾರ ಅಲಂಕೃತ ರಥದಲ್ಲಿ ಬೊಮ್ಮಗೊಂಡೇಶ್ವರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು.

ಬೊಮ್ಮಗೊಂಡೇಶ್ವರ ವೃತ್ತದಿಂದ ಆರಂಭಗೊಂಡ ಮೆರವಣಿಗೆ ಬಸವೇಶ್ವರ ವೃತ್ತ, ಮಹಾವೀರ ವೃತ್ತ, ಭಗತಸಿಂಗ್ ವೃತ್ತ, ಡಾ. ಬಿ.ಆರ್. ಅಂಬೇಡ್ಕರ್ ವೃತ್ತ, ಶಿವಾಜಿ ವೃತ್ತ, ಹರಳಯ್ಯ ವೃತ್ತ, ಗುದಗೆ ಆಸ್ಪತ್ರೆ ಕ್ರಾಸ್, ರೋಟರಿ ಕನ್ನಡಾಂಬೆ ವೃತ್ತದ ಮೂಲಕ ಹಾಯ್ದು ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗ ಮಂದಿರಕ್ಕೆ ತಲುಪಿ ಸಮಾರೋಪಗೊಂಡಿತು.

ಪುಷ್ಪಗಳಿಂದ ಶೃಂಗರಿಸಿದ್ದ ರಥದಲ್ಲಿ ಬೊಮ್ಮಗೊಂಡೇಶ್ವರ ಬೃಹತ್ ಭಾವಚಿತ್ರ ಇಡಲಾಗಿತ್ತು. ಡೊಳ್ಳು ಕುಣಿತ, ಲಂಬಾಣಿ ನೃತ್ಯ, ಬ್ಯಾಂಡ್, ಕೋಲಾಟ ತಂಡಗಳು ಮೆರವಣಿಗೆಯ ವೈಭವ ಹೆಚ್ಚಿಸಿದವು. ಬೊಮ್ಮಗೊಂಡೇಶ್ವರ ವೇಷಧಾರಿಗಳು ನೋಡುಗರ ಗಮನ ಸೆಳೆದರು. ಮೆರವಣಿಗೆಯಲ್ಲಿ ಪಾಲ್ಗೊಂಡವರು ತಲೆ ಮೇಲೆ ಹಳದಿ ಟೊಪ್ಪಿಗೆ ಹಾಗೂ ಕೊರಳಲ್ಲಿ ಶಲ್ಯ ಧರಿಸಿದ್ದರು. ಗಣ್ಯರು, ಯುವಕರು ಹೆಜ್ಜೆ ಹಾಕಿ ಸಂಭ್ರಮಿಸಿದರು.

ಮೆರವಣಿಗೆ ಉದ್ದಕ್ಕೂ ಮಹಾತ್ಮ ಬೊಮ್ಮಗೊಂಡೇಶ್ವರರಿಗೆ ಜಯವಾಗಲಿ ಎಂಬ ಘೋಷಣೆ ಮೊಳಗಿದವು. ಭಂಡಾರ ಹಾರಿಸಲಾಯಿತು.

ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಮೃತರಾವ್ ಚಿಮಕೋಡೆ ಅವರು ಮೆರವಣಿಗೆಗೆ ಚಾಲನೆ ನೀಡಿದರು. ಜಿಲ್ಲಾ ಗೊಂಡ ವಿದ್ಯಾರ್ಥಿ ಸಂಘದ ಅಧ್ಯಕ್ಷ ಸಂತೋಷಕುಮಾರ ಜೋಳದಾಪಕೆ ನೇತೃತ್ವ ವಹಿಸಿದ್ದರು.

ರಾಜ್ಯ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಪಂಡಿತರಾವ್ ಚಿದ್ರಿ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಗೀತಾ ಚಿದ್ರಿ, ಬಿಡಿಎ ಮಾಜಿ ಅಧ್ಯಕ್ಷ ಮುರಳಿಧರ ಎಕಲಾಕರ್, ಮುಖಂಡರಾದ ಬಾಬುರಾವ್ ಮಲ್ಕಾಪುರ, ಮಲ್ಲಿಕಾರ್ಜುನ ಬಿರಾದಾರ (ಪರಿಹಾರ), ಮಾಳಪ್ಪ ಅಡಸಾರೆ, ಎಂ.ಎಸ್. ಕಟಗಿ, ದೇವಪ್ಪ ಚಾಂಬೋಳೆ, ಸುಭಾಷ್ ನಾಗೂರೆ, ಪಿ.ಎಸ್. ಇಟಕಂಪಳ್ಳಿ, ಕಲ್ಲಪ್ಪರಾಯಗೊಂಡ, ಮಲ್ಲಿಕಾರ್ಜುನ ಮುರ್ಕೆ, ಉದಯಕುಮಾರ ಬ್ಯಾಲಹಳ್ಳಿ, ಎಂ.ಪಿ. ವೈಜಿನಾಥ, ಸುನೀಲ್ ಚಿಲ್ಲರ್ಗಿ, ಗೋವಿಂದ ದುರ್ಗೆ, ಶಿವಕುಮಾರ ಹಾಲಹಿಪ್ಪರ್ಗಾ, ಲೋಕೇಶ ಮರ್ಜಾಪುರ, ಕಲ್ಲಪ್ಪ ಯರನಳ್ಳಿ, ಕಾಮಶೆಟ್ಟಿ ಘೋಡಂಪಳ್ಳಿ ಮತ್ತಿತರರು ಭಾಗವಹಿಸಿದ್ದರು. ಜಿಲ್ಲೆಯ ವಿವಿಧೆಡೆಯ ಗೊಂಡ ಸಮುದಾಯದ ಪ್ರತಿನಿಧಿಗಳು ಹಾಗೂ ಬೊಮ್ಮಗೊಂಡೇಶ್ವರ ಅನುಯಾಯಿಗಳು ಪಾಲ್ಗೊಂಡಿದ್ದರು.

# ಜಾಗತಿಕ ಸಮಸ್ಯೆಗಳಿಗೆ ಬಸವ ತತ್ವವೇ ಪರಿಹಾರ: ಸಚಿವ ರಹಿಂಖಾನ್

ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 24 : ಜಾಗತಿಕ ಸಮಸ್ಯೆಗಳಿಗೆ ಬಸವ ತತ್ವವೇ ಪರಿಹಾರವಾಗಿದೆ. ಬಸವಾದಿ ಶರಣರು ರಚಿಸಿದ ವಚನಗಳು ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸುತ್ತವೆ. ಎಲ್ಲಾ ಧರ್ಮಗಳಲ್ಲೂ ದೇವರು ಒಬ್ಬನೆ ಎಂಬ ನಂಬಿಕೆಯಿದೆ. ಪರಸ್ಪರ ಸಾಮರಸ್ಯದಿಂದ ಬದುಕುವುದು ಇಂದಿನ ಅವಶ್ಯಕತೆಯಿದೆ ಎಂದು ಪೌರಾಡಳಿತ ಮತ್ತು ಹಜ್ ಸಚಿವ ರಹಿಂಖಾನ್ ತಿಳಿಸಿದರು.

ನಗರದ ಪಾಪನಾಶ ಗೇಟ್ ಸಮೀಪದ ಸ್ವಾಮಿ ಸಮರ್ಥ ಕಲ್ಯಾಣಮಂಟಪದಲ್ಲಿ ರಾಷ್ಟ್ರೀಯ ಬಸವ ದಳ, ಲಿಂಗಾಯತ ಧರ್ಮ ಮಹಾಸಭಾ, ಅಕ್ಕನಾಗಲಾಂಬಿಕಾ ಮಹಿಳಾ ಗಣ ಹಾಗೂ ಲಿಂಗಾಯತ ಸಮಾಜದ ವತಿಯಿಂದ ಜರುಗಿದ ಲಿಂಗಾಯತ ಧರ್ಮದ ಮಹಾದಂಡನಾಯಕರ ಸ್ಮರಣೋತ್ಸವದ ಸಮಾರೋಪ ಸಮಾರಂಭವನ್ನುದ್ದೇಶಿಸಿ ಮಾತನಾಡಿದರು.

ಪೂಜ್ಯ ಮಾತೆ ಮಹಾದೇವಿಯವರು ಬದುಕಿದ್ದಾಗ ಅವರು ನೀಡಿದ ಸಲಹೆಗಳು ಇಂದಿಗೂ ನನಗೆ ನೆನಪಿದೆ. ಬಸವ ತತ್ವವನ್ನು ಅತ್ಯಂತ ಉತ್ತುಂಗ ಶಿಖರ–



ಕ್ಕೆ ಕೊಂಡೊಯ್ದ ಕೀರ್ತಿ ಅವರಿಗೆ ಸಲ್ಲುತ್ತದೆ. ಬೀದರ ನಗರದಲ್ಲಿ ರಾಷ್ಟ್ರೀಯ ಬಸವ ದಳವನ್ನು ಗಟ್ಟಿಯಾಗಿ ನೆಲೆಯೂರಲು ಮಾತಾಜಿ ಕಾರಣರಾಗಿದ್ದಾರೆ. ಇಂದು ಅವರ ಮಾರ್ಗದಲ್ಲಿ ಪೂಜ್ಯ ಚನ್ನಬಸವಾನಂದ ಸ್ವಾಮೀಜಿ ಹಾಗೂ ಶರಣರೆಲ್ಲರೂ ಸಾಗುತ್ತಿರುವುದು. ಗುರುವಿನ ಋಣ ತೀರಿಸಲು ಇಂತಹ ಅರ್ಥಪೂರ್ಣ ಕಾರ್ಯಕ್ರಮ ಆಯೋಜಿಸಿರುವುದು ಸಂತಸ ತಂದಿದೆ ಎಂದರು.

ಷಟಸ್ಥಲ ಧ್ವಜಾರೋಹಣ ನೆರವೇರಿಸಿದ ಭಾರತೀಯ ಬಸವ ಬಳಗದ ರಾಜ್ಯಾಧ್ಯಕ್ಷ ಬಾಬು ವಾಲಿ ಮಾತನಾಡಿ ಮಾತೆ ಮಹಾದೇವಿಯವರು ಬೀದರನಲ್ಲಿ ಪ್ರವಚನ ಮಾಡುವ ಸಂದರ್ಭದಲ್ಲಿ ನಾನೂ ಕೂಡಾ ಕೆಲಕಾಲ ಕಾರ್ಯಕರ್ತನಾಗಿ ದುಡಿದಿದ್ದೆ. ಅವರ ಅಭಿನಂದನಾ ಸಮಾರಂಭ ಬೀದರನಲ್ಲಿ ನೆರವೇರಿಸಿ ಋಣ ತೀರಿಸುವ ಅವಕಾಶ ನನಗೂ ಸಿಕ್ಕಿದ್ದು ಸೌಭಾಗ್ಯ. ಬಸವ ತತ್ವವನ್ನು ವಿಶ್ವದಾದ್ಯಂತ ಪಸರಿಸಲು ಎಲ್ಲರೂ ಒಗ್ಗೂಡಿ ಸಾಗುವ ಅವಶ್ಯಕತೆ ಇದೆ ಎಂದರು.

ದಿವ್ಯ ಸಾನಿಧ್ಯ ವಹಿಸಿದ್ದ ಪೂಜ್ಯಶ್ರೀ ಜಗದ್ಗುರು ಡಾ. ಚನ್ನಬಸವಾನಂದ ಸ್ವಾಮೀಜಿ ಮಾತನಾಡಿ ಬೀದರ ಜಿಲ್ಲೆ ಇದು ರಾಷ್ಟ್ರೀಯ ಬಸವ ದಳದ ತವರೂರು ಎಂದು ಮಾತೆ ಮಹಾದೇವಿಯವರು ಯಾವಾಗಲೂ ಹೇಳುತ್ತಿದ್ದರು. ಇಂತಹ ದಳವನ್ನು ಮತ್ತೆ ದೇಶದಾದ್ಯಂತ ಸಂಘಟಿಸುವುದು ನಮ್ಮ ಗುರಿಯಾಗಬೇಕು. ಪರಸ್ಪರ ವೈಮನಸ್ಸು, ಭಿನ್ನಾಭಿಪ್ರಾಯ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಮನಸ್ಸುಗಳು ಒಡೆಯುವ ಬರಹಗಳನ್ನು ಬರೆಯಲು ಯಾರೂ ಆಸ್ಪದ ಕೊಡಬಾರದು. ಸಂಘಟನೆಯ ಕಡೆಗೆ ಗಮನ ಹರಿಸಬೇಕೆಂದು ತಿಳಿಸಿದರು. ಏಳನೆಯ ಮಹಾದಂಡನಾಯಕರ ಸ್ಮರಣೋತ್ಸವ ಗಂಗಾವತಿಯಲ್ಲಿ ದಳದ ವತಿಯಿಂದ ಆಯೋಜಿಸಲು ಒಪ್ಪಿಕೊಂಡಿದ್ದಾರೆ. ಅವರಿಗೆ ಧ್ವಜ ಹಸ್ತಾಂತರ ಮಾಡಲಾಗಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಹಾಗೂ ಸ್ವಾಗತ ಸಮಿತಿಯ ಅಧ್ಯಕ್ಷರಾದ ಡಾ. ಶೈಲೇಂದ್ರ ಬೆಲ್ದಾಳೆ ವಹಿಸಿದ್ದರು. ಮೆರವಣಿಗೆಯಲ್ಲಿ ಸಂಸದ ಸಾಗರ ಖಂಡ್ರೆಯವರು ಪಾಲ್ಗೊಂಡಿದ್ದರು. ಯುವಕರ ಜೊತೆ ಭರ್ಜರಿ ಹೆಜ್ಜೆ ಹಾಕಿದರು.

ಧಾರವಾಡ ಸುಜಾತಾ ಯರಗಟ್ಟಿ ಅವರಿಗೆ ಬಸವಾತ್ಮಜೆ ಪ್ರಶಸ್ತಿ ಹಾಗೂ ಖವಟಕೊಪ್ಪದ ರಾಷ್ಟ್ರೀಯ ಬಸವ ದಳದ ಹಿರಿಯ ಶರಣ ಅಶೋಕ ನಾವಿ ಅವರನ್ನು ಲಿಂಗಾನಂದ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮಂಡ್ಯದ ಶಿವು ಜನ್ಯ ಹಾಗೂ ದೇವದುರ್ಗದ ಪುಟಾಣಿ ವಿನಾಯಕ ಗಾಯನ ಸಭೀಕರ ಮನಗೆಲ್ಲುವಂತೆ ಮಾಡಿತು. ಗಾಂಧಿನಗರದ ಪುಟಾಣಿ ಮಕ್ಕಳು ವಚನ ನೃತ್ಯ ನಡೆಸಿಕೊಟ್ಟರು.

ಸಮ್ಮುಖ ವಹಿಸಿದ್ದ ಪೂಜ್ಯ ಶ್ರೀ ಮಾತೆ ಸತ್ಯಾದೇವಿಯವರು ಆಶೀರ್ವಚನ ಮಾಡಿದರು. ಕೂಡಲ ಸಂಗಮದ ಹೂವನೂರಿನ ಪೂಜ್ಯ ಲಿಂಗಾರೂಢರು, ಲಿಂಗಪಟ್ಟಣದ ಓಂಕಾರೇಶ್ವರ ಸ್ವಾಮಿಗಳು, ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷೆ ರಾಜಶ್ರೀ ಶ್ರೀಕಾಂತ ಸ್ವಾಮಿ ಮಾತನಾಡಿದರು. ಇದೇ ವೇಳೆ ಕಾರ್ಯಕ್ರಮದ ಯಶಸ್ವಿಗೆ ದುಡಿದ ಶರಣ ಶರಣೆಯರಿಗೆ ಸನ್ಮಾನಿಸಲಾಯಿತು.

ನಿರ್ಣಯಗಳು: ರಾಷ್ಟ್ರೀಯ ಬಸವದಳವನ್ನು ರಾಷ್ಟ್ರದಾದ್ಯಂತ ಸಂಘಟಿಸುವುದು, ಮೇ ತಿಂಗಳಿನಲ್ಲಿ ಇಂಗ್ಲೆಂಡಿನಲ್ಲಿ ಬಸವ ಶಾಂತಿಯಾತ್ರೆ ಕೈಗೊಳ್ಳುವುದು, ಲಿಂಗಾಯತ ಧರ್ಮ ಸ್ವತಂತ್ರ ಧರ್ಮದ ಮಾನ್ಯತೆಯ ಹೋರಾಟ ತೀವ್ರಗೊಳಿಸುವುದು, ಪ್ರತೀ ವರ್ಷ ಒಂದೊಂದು ಜಿಲ್ಲೆ ಹಾಗೂ ರಾಜ್ಯಗಳಲ್ಲಿ ಮಹಾದಂಡನಾಯಕರ ಸ್ಮರಣೋತ್ಸವ ಹಮ್ಮಿಕೊಳ್ಳುವುದು, ಪ್ರತೀ ಎರಡು ವರ್ಷಗಳಿಗೊಮ್ಮೆ ವಿದೇಶಗಳಲ್ಲಿ ಅಂತರಾಷ್ಟ್ರೀಯ ಬಸವ ತತ್ವ ಸಮ್ಮೇಳನ ಆಯೋಜಿಸುವುದು ಈ ಐದು ನಿರ್ಣಯಗಳನ್ನು ಕೈಗೊಳ್ಳಲಾಯಿತು. ಪೂಜ್ಯ ಚನ್ನಬಸವಾನಂದ ಸ್ವಾಮೀಜಿ ನಿರ್ಣಯ ಮಂಡಿಸಿದರು. ಶ್ರೀಕಾಂತ ಸ್ವಾಮಿ ಅನುಮೋದಿಸಿದರು. ಶರಣರು ಕರತಾಡನ ಮೂಲಕ ಒಪ್ಪಿಗೆ ಸೂಚಿಸಿದರು.

ಮಹಾರುದ್ರ ಡಾಕುಳಗೆ ನಿರೂಪಿಸಿದರೆ, ಡಾ. ಪೂಜಾ ಸಿದ್ಧವೀರ ಸ್ವಾಗತಿಸಿದರು. ಶ್ರೀನಾಥ ಕೋರೆ ವಂದಿಸಿದರು. ವೇದಿಕೆ ಮೇಲೆ ಪ್ರಮುಖರಾದ ಬಸವರಾಜ ಪಾಟೀಲ ಶಿವಪುರ, ಶಿವರಾಜ ಶೆಟಕಾರ, ಕಲ್ಲಪ್ಪ ದೇಶಮುಖ, ಡಾ. ಮಹೇಶ ಬಿರಾದಾರ, ಶಿವರಾಜ ಪಾಟೀಲ, ಶಿವಶರಣಪ್ಪ ಪಾಟೀಲ, ಪ್ರಕಾಶ ದೇಶಮುಖ, ಬಸವರಾಜ ಪಾಟೀಲ ಚಿಕ್ಕಪೇಟ, ಧರ್ಮೇಂದ್ರ ಪೂಜಾರಿ, ಗಣಪತಿ ದೇಶಮುಖ, ಜಗನ್ನಾಥ ಮೂಲಗೆ, ಬಸವರಾಜ ಪಾಟೀಲ ಲಿಂಗದಳ್ಳಿ, ಬಸವರಾಜ ಸಂಗಮದ್, ಗಣಪತಿ ಬಿರಾದಾರ, ಸತೀಶ ಪಾಟೀಲ ಹಾರೂರಗೇರಿ ಸೇರಿದಂತೆ ಹಲವರಿದ್ದರು.

ಕೌಟಿಲ್ಯ ಅಕಾಡೆಮಿ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಸಾಹಿತಿ ಹಂಚಲಿ ಅಭಿಮತ

# ಮಕ್ಕಳ ಪ್ರತಿಭೆ ಬೆಳಸುವಲ್ಲಿ ತಾಯಿಯ ಪಾತ್ರ ಪ್ರಮುಖ




ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ಹುಟ್ಟುವ ಪ್ರತಿಯೊಂದುಮಗುವಿನಲ್ಲೂ ಪ್ರಕೃತಿದತ್ತವಾಗಿ ಒಂದಲ್ಲ ಒಂದು ಪ್ರತಿಭೆ ಇರುತ್ತದೆ ಅದನ್ನುಗುರುತಿಸಿಬೆಳೆಸುವಲ್ಲಿ ತಾಯಂದಿರ ಪಾತ್ರ ಪ್ರಮುಖವಾಗಿದೆ,ಪ್ರತಿಯೊಬ್ಬ ಸಾಧಕನ ಸಾಧನೆಯ ಹಿಂದೆ ಅವಳ ತಾಯಿಯ ಪಾತ್ರ ಇದೆ ಎಂದುಖ್ಯಾತ ವಾಗ್ಮಿ ಸಾಹಿತಿ ಅಶೋಕ ಹಂಚಲಿ ಹೇಳಿದರು. ಭಾನುವಾರ ಪಟ್ಟಣದ ಮಿಣಜಗಿ ಕ್ರಾಸ್ ನಲ್ಲಿ ನೂತನವಾಗಿ ನಿರ್ಮಾಣಗೊಂಡಿರುವಕೌಟಿಲ್ಯ ಅಕಾಡೆಮಿಕಟ್ಟಡಉದ್ಘಾಟನೆ ಹಾಗೂಜೀನಿಯಸ್ಸ್ಟೂಡೆ-ಂಟ್ ಅವಾರ್ಡ್ ಪರೀಕ್ಷೆ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣಾ ಸಮಾರಂಭದಲ್ಲಿ ವಿಶೇಷ ಉಪಾನ್ಯಾಸಕರಾಗಿ ಆಗಮಿಸಿ ಮಾತನಾಡಿ ತಾಳಿಕೋಟಿ ಪಟ್ಟಣ ಇವತ್ತು ಶಿಕ್ಷಣ ಕಾಶಿ ಎಂದಿನಿಸಿಕೊಳ್ಳುತ್ತಿದೆ, ಇಲ್ಲಿಯ ಶಿಕ್ಷಣ ಪ್ರೇಮಿಗಳು ಸಾಕಷ್ಟು ಸಂಸ್ಥೆಗಳನ್ನು ಕಟ್ಟಿ ಅತ್ಯುತ್ತಮವಾಗಿನಡೆಸುತ್ತಿದ್ದಾರೆ. ಇದೀಗ ನಮ್ಮ ಮಕ್ಕಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಸೂಕ್ತ ತರಬೇತಿ ಕೇಂದ್ರದ ಅಗತ್ಯವಿತ್ತು ಅದನ್ನು ಸಹ ನಮ್ಮ ಸಜ್ಜನ ಬಳಗದ ಮಿತ್ರರು ಮಾಡಿರುವುದು ಶ್ಲಾಘನೀಯವಾದ ಕಾರ್ಯ ಇದಕ್ಕೆ ನಿಮ್ಮೆಲ್ಲರ ಸಹಕಾರ ಇರಲಿ ಎಂದರು. ಮುಸ್ಲಿಮ್ ಧಾರ್ಮಿಕಮುಖಂಡಸೈಯದ್ ಶಕೀಲ ಅಹ್ಮದ್ ಖಾಜಿ, ಪುರಾಣಿಕ ಮಹಾದೇವಯ್ಯ ಶಾಸ್ತ್ರಿಹಾಗೂ ಸಹಕಾರಿ ಬ್ಯಾಂಕ್ ಅಧ್ಯಕ್ಷ ಕಾಶಿನಾಥ್ ಸಜ್ಜನ ಮಾತನಾಡಿ ಶಿಕ್ಷಣ ಸಂಸ್ಥೆಗಳು ವ್ಯಾಪಾರಿ ಕೇಂದ್ರಗಳಾಗದೆ ಜ್ಞಾನ ದಾಸೋಹದ ಕೇಂದ್ರಗಳಾಗಲಿ ಈ ನೂತನ ಸಂಸ್ಥೆ ಉತ್ತರೋತ್ತರವಾಗಿ ಬೆಳೆಯಲಿ ಎಂದರು. ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಪೂಜ್ಯ ಶ್ರೀ ಶಿವಯೋಗಿ ಶಿವಾಚಾರ್ಯರುನಮ್ಮಬದುಕು ಸಾಧನೆ ಬದುಕಾಗಬೇಕು, ಭೂಮಿಯ ಮೇಲೆ ಬಹಳಷ್ಟು ಜನ ಬಂದು ಹೋಗುತ್ತಾರೆ ಆದರೆ ಸಾಧನೆ ಕೆಲವರು ಮಾತ್ರ ಮಾಡುತ್ತಾರೆ ಅಂಥವರ ಸಾಲಿನಲ್ಲಿ ನಾವು ನಿಲ್ಲುವಂತವರಾಗಬೇಕು. ಸಜ್ಜನ ಬಂಧುಗಳ ಕಾರ್ಯ ಶ್ಲಾಘನೀಯವಾಗಿದೆ ಇದಕ್ಕೆ ನಿಮ್ಮೆಲ್ಲರ ಸಹಕಾರ ಇರಲಿ ಎಂದರು. ಕಾರ್ಯಕ್ರಮಕ್ಕೂ ಮುನ್ನನಾಲ್ಕನೇಹಾಗೂಐದನೇ ತರಗತಿ ವಿದ್ಯಾರ್ಥಿಗಳಿಗಾಗಿ ನಡೆಸಿದ ಜೀನಿಯಸ್ ಅವಾರ್ಡ್ ಪರೀಕ್ಷೆಯಲ್ಲಿ 300 ವಿದ್ಯಾರ್ಥಿಗಳು ಭಾಗವಹಿಸಿ ಇದರಲ್ಲಿ 28 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿತ್ತು, ಪ್ರಥಮ ಸ್ಥಾನದಿಂದ 5 ನೇ ಸ್ಥಾನ ಪಡೆದುಕೊಂಡ ವಿದ್ಯಾರ್ಥಿಗಳಿಗೆರೂ.50ಸಾವಿರ ಸ್ಕಾಲರ್ಶಿಪ್, 6 ರಿಂದ 10 ನೇ ಸ್ಥಾನ ಪಡೆದುಕೊಂಡ ವಿದ್ಯಾರ್ಥಿಗಳಿಗೆ ರೂ.30 ಸಾವಿರ ಹಾಗೂ 11 ರಿಂದ 20 ನೇ ಸ್ಥಾನದವರೆಗೆ ರೂ.20 ಸಾವಿರ ಸ್ಕಾಲರ್ಶಿಪ್ ನೀಡಿ ಗೌರವಿಸಲಾಯಿತು. ಕೌಟಿಲ್ಯ ಅಕಾಡೆಮಿ ನೂತನ ಕಟ್ಟಡವನ್ನು ಗುಂಡಕನಾಳ ಬ್ರಹನ್ಮಠದ ಪರಮ ಪೂಜ್ಯಶ್ರೀ ಗುರುಲಿಂಗ ಶಿವಾಚಾರ್ಯರು ಉದ್ಘಾಟಿಸಿದರು. ವೇದಿಕೆ ಸಮಾರಂಭವನ್ನು ಮಿಣಜಗಿ ಗ್ರಾಪಂ ಅಧ್ಯಕ್ಷೆ ಭಾಗ್ಯಶ್ರೀ ಮಹಾಂತೇಶ ಬಿರಾದಾರ ಉದ್ಘಾಟಿಸಿದರು. ಕೌಟಿಲ್ಯ ಅಕಾಡೆಮಿ ಗೌರವ ಅಧ್ಯಕ್ಷ ರಾಮನಗೌಡ ಬಾಗೇವಾಡಿ ಅಧ್ಯಕ್ಷತೆವಹಿಸಿದ್ದರು.ಪ್ರಾಚಾರ್ಯ ಧರ್ಮಣ್ಣ ಪ್ರಸ್ತಾವಿಕವಾಗಿ ಮಾತನಾಡಿದರು.ಕಾರ್ಯದರ್ಶಿ ಮಹಾಂತೇಶ ಮುರಾಳ ನಿರೂಪಿಸಿದರು.ಈ ವೇಳೆ ಅಕಾಡೆಮಿಅಧ್ಯಕ್ಷರಾಜು ಸಜ್ಜನ, ಆಡಳಿತಾಧಿಕಾರಿ ನಾನಾಗೌಡ ಕುಳಗೇರಿ,ಸಂಯೋಜಕ ವೀರೇಶಬಳಿಗಾರ,ಪ್ರಭುಗೌಡ ಮದರಕಲ್ಲ,ದತ್ತುಹೆಬಸೂರ, ಮುರಿಗೆಪ್ಪಸರಸಟ್ಟಿ,ಕಾಶಿನಾಥ ಮುರಾಳ,ಇಬ್ರಾಹಿಂಮನ್ಸೂರ, ಪ್ರಕಾಶ ಹಜೇರಿ,ಮುತ್ತಪ್ಪ ಚಮಲಾಪೂರ, ಮಲ್ಲಪ್ಪ ಕಟ್ಟಿಮನಿ, ಗುರುಲಿಂಗಪ್ಪ ಸಜ್ಜನ, ತಿಪ್ಪಣ್ಣ ಸಜ್ಜನ, ಆರ್.ಎಲ್.ಕೊಪ್ಪದ,ಪರಶುರಾಮ ತಂಗಡಗಿ,ಎಸ್.ಎಸ್. ಕಂತಲಗಾಂವಿ, ಆನಂದ ಮದರಕಲ್, ಘನಶ್ಯಾಮ ಚೌವಾಣ, ವೆಂಕನಗೌಡ ಅರಿಕೇರಿ, ಶಿವನಗೌಡ ಪಾಟೀಲ ಇದ್ದರು.

ಗಡಿ ತಾಲೂಕು ಆಳಂದನಲ್ಲಿ ಡಿ.ಸಿ. ಸಂಚಾರ:

# ಕುಡಿಯುವ ನೀರಿನ ಸಮಸ್ಯೆ ಕುರಿತು ಸಾರ್ವಜನಿಕರ ಸಮಸ್ಯೆ ಆಲಿಕೆ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮಾ.24-ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ಶನಿವಾರ ಜಿಲ್ಲೆ ಗಡಿ ತಾಲೂಕು ಆಳಂದ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಸಂಚರಿಸಿ ಬೇಸಿಗೆ ಕುಡಿಯುವ ನೀರು ಕುರಿತು ಖುದ್ದಾಗಿ ಗ್ರಾಮಸ್ಥರ ಸಮಸ್ಯೆ ಆಲಿಸಿದರು.

ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಎಸ್.ಪಿ. ಅಡ್ಡೂರು ಶ್ರೀನಿವಾಸಲು ಜೊತೆ ತಾಲೂಕಾ ಸಂಚಾರ ಮಾಡಿದ ಅವರು, ಸಾರ್ವಜನಿಕರಕುಡಿಯುವನೀರಿನ ಸಮಸ್ಯೆಗಳಿಗೆ ಅಧಿಕಾರಿಗಳು ಪ್ರಥಮಾದ್ಯತೆ ಮೇಲೆ ಕೂಡಲೆ ಸ್ಪಂದಿಸಬೇಕು.ಕುಡಿಯುವನೀರಿಗೆ ಹಾಹಾಕರ ಉಂಟಾಗದಂತೆ ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಸ್ಥಳೀಯ ಆಡಳಿತ ಮಾಡಬೇಕು ಎಂದರು.

ಮೊದಲು ತಾಲೂಕಿನ ಸರಸಂಬಾ ಗ್ರಾಮಕ್ಕೆ ಭೇಟಿ ನೀಡಿದ ಅವರು, ಅಲ್ಲಿನ ಬಾಡಿಗೆ ಬಾವಿ ವೀಕ್ಷಿಸಿದರು. ನಂತರ ಸಾವಳೇಶ್ವರ,ಮಾದನಹಿಪ್ಪರಗಾ, ಅಂಬೇವಾಡ ಮತ್ತು ಝಳಕಿ ಗ್ರಾಮಕ್ಕೂ ಭೇಟಿ ನೀಡಿದ ಜಿಲ್ಲಾಧಿಕಾರಿಗಳು, ಖಾಸಗಿ ಬೋರವೆಲ್, ಬಾವಿ ಬಾಡಿಗೆ ಮೇಲೆ ಪಡೆದು ಸಾರ್ವಜನಿಕರಿಗೆ ಬೇಸಿಗೆಯಲ್ಲಿ ನೀರು ಪೂರೈಸಬೇಕೆಂದರು.


ಜಲ ದಿನಾಚರಣೆಯಲ್ಲಿ ಭಾಗಿ,ನೀರು ಮಿತ ಬಳಕೆಗೆ ಸಲಹೆ: ಸಾವಳೇಶ್ವರ ಗ್ರಾಮದಲ್ಲಿ ಗ್ರಾಮ ಪಂಚಾಯತಿಯು ಆಯೋಜಿಸಿದ ವಿಶ್ವ ಜಲ ದಿನಾಚರಣೆಯಲ್ಲಿ ಡಿ.ಸಿ ಮತ್ತು ಸಿ.ಇ.ಓ ಅವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಗ್ರಾಮಸ್ಥರನ್ನು ಉದ್ದೇಶಿಸಿ ಮಾತನಾಡಿದ ಡಿ.ಸಿ. ಮತ್ತು ಜಿಲ್ಲಾ ಪಂಚಾಯತ್ ಸಿ.ಇ.ಓ ಅವರು, ನೀರಿನ ಮಹತ್ವ ಸಾರಿದಲ್ಲದೆ, ಜಲ ಮೂಲಗಳ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಶಾಲೆ, ಅಸ್ಪತ್ರೆ, ಕಚೇರಿ, ಮನೆಗಳ ಆವರಣದಲ್ಲಿ ಮಳೆನೀರು ಕೊಯ್ಲು ಪದ್ಧತಿ ಅಳವಡಿಸಿಕೊಳ್ಳಬೇಕೆಂದು ಗ್ರಾಮಸ್ಥರಿಗೆ ಕರೆ ನೀಡಿದಲ್ಲದೆ ವಿನಾಕಾರಣ ನೀರು ಪೋಲು ಮಾಡದಂತೆ ಮನವಿ ಮಾಡಿಕೊಂಡರು.

ಇದೇ ಸಂದರ್ಭದಲ್ಲಿ ಗ್ರಾಮದಲ್ಲಿ ಖಾಸಗಿ ಕೊಳವೆ ಬಾವಿ ನೀರು ಫ್ಲೋರೈಡ್ ಮುಕ್ತ ಮತ್ತು ಕುಡಿಯಲು ನೀರು ಯೋಗ್ಯವೆ ಎಂದು ತಾಂತ್ರಿಕ ತಂಡ ನೀರಿನ ಪರೀಕ್ಷೆ ಮಾಡಲಾಯಿತು.

ಚೆಕ್ ಡ್ಯಾಂ ವೀಕ್ಷಣೆ: ಸಾವಳೇಶ್ವರ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಿಣ್ಣಿ ಅಬ್ಬಾಸ್ ಗ್ರಾಮದಲ್ಲಿ ಮಹಾರಾಷ್ಟ್ರದ ಶಿವಪುರ ಮಾದರಿಯಲ್ಲಿ ನೀರು ಸಂಗ್ರಹಣಕ್ಕೆ ಮಿನಿ ಜಲಾಶಯದಂತೆ ಸಣ್ಣ ನೀರಾವರಿ ಇಲಾಖೆಯಿಂದ ನಿರ್ಮಿಸಲಾಗುತ್ತಿರುವ ಚೆಕ್ ಡ್ಯಾಂ ಕಾಮಗಾರಿ ಡಿ.ಸಿ. ಅವರು ಪರಿಶೀಲಿಸಿದರು. ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರು ಮತ್ತು ಸ್ಥಳೀಯ ಶಾಸಕ ಬಿ.ಆರ್.ಪಾಟೀಲ ಅವರ ಕನಸಿನ ಯೋಜನೆ ಇದಾಗಿದೆ. ತಾಲೂಕಿನ 9 ಕಡೆ ಈ ರೀತಿಯ ಚೆಕ್ ಡ್ಯಾಂ ನಿರ್ಮಿಸಲಾಗುತ್ತಿದೆ ಎಂದರು ನೀರಾವರಿ ಇಲಾಖೆ ಅಧಿಕಾರಿಗಳು ಡಿ.ಸಿ ಅವರಿಗೆ ಮಾಹಿತಿ ನೀಡಿದರು.

ತಾಲೂಕು ಪಂಚಾಯತ್ ಇ.ಓ ಮಾನಪ್ಪ ಕಟ್ಟಿಮನಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಇ.ಇ. ಧನರಾಜ, ಎ.ಇ.ಇ ವಿಜಯಕುಮಾರ, ಜೆಸ್ಕಾಂ ಎ.ಇ.ಇ.ಪ್ರಭುಲಿಂಗ ಸೇರಿದಂತೆ ಇತರೆ ತಾಲೂಕು ಮಟ್ಟದ ಅಧಿಕಾರಿಗಳಿದ್ದರು.

# ಡಯಾಲಿಸಿಸ್ ರೋಗಿಗಳ ಕೊಣೆಗೆ ಟಿವಿ ನೀಡಿದ ಸಚಿವ ದರ್ಶನಾಪುರ,



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ,ತೀರಾನೊಂದುಕೊಂಡು ಬದುಕಿನಲ್ಲಿ ನೋವುಗಳ ನಡುವೆ ತಾಲುಕಾ ಸರ್ಕಾರಿ ಸಾರ್ವಜನಿಕ ಅಸ್ಪತ್ರೆಯಲ್ಲಿನ ಡಯಾಲಿಸಿಸ್ ರೋಗಿಗಳಿಗೆ ಆತ್ಮಸ್ಥೈರ್ಯ ತುಂಬಲು, ಸಣ್ಣ ಕೈಗಾರಿಕಾ ಸಾರ್ವಜನಿಕ ಉಧ್ಯಮಗಳ ಮಂತ್ರಿಗಳಾದ ಶರಣಬಸ್ಸಪ್ಪಗೌಡ ದರ್ಶನಾಪುರವರು ಟ.ವಿ ನೀಡಿ ಮಾನವಿತೆಗೆ ಮೆರಗು ನೀಡಿದ್ದಾರೆ, ದೊಡ್ಡ ಮೌಲ್ಯದ ಟಿವಿ ನೀಡಿ ಇಲ್ಲಿನ ರೋಗಿಗಳಿಗೆ ಮಾನಸಿಕವಾಗಿ ಸದೃಡರಾಗಲು ಮನೋರಂಜನೆಯ ಬದು- ಕಿಗೆ ಚೈತನ್ಯ ನೀಡಿದ್ದಾರೆ.

ಪ್ರತಿ ದಿನದಲ್ಲಿ ಬರುವ ರೋಗಿಗಳು ನಾಲ್ಕು ಗಂಟೆಗಳ ಅವಧಿಯಲ್ಲಿ ಡಯಾಲಿಸಿಸ್ ಮಾಡಿಕೊಳ್ಳುತ್ತಿದ್ದಾಗ ಯಾವುದೆ ಆತಂಕಗಳು ಚಿಂತೆಗಳು, ಮರುಕಳಿಸದಿರಲಿ ಎಂದು ಸಚಿವ ದರ್ಶನಾಪುರವರು ಈ ಟಿವಿ ನೀಡಿ ಡಯಾಲಿಸಿಸ್ ರೋಗಿಗಳಿಗೆ ಅನೂಕೂಲವಾಗಿಸಿದ್ದಾರೆ. ಡಯಾಲಿಸಿಸ್ ಗೆ ಬರುವ ರೋಗಿಗಳಿಗೆ ಸಚಿವರು ಹೆಚ್ಚು ಕಾಳಜಿವಹಿಸಿ ಅವರ ಆರೋಗ್ಯಕರ ಬೆಳವಣಿಗೆಗೆ ಮುಂದಾಗಿದ್ದಾರೆ, ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ಸಚಿವರು ಹೆಚ್ಚು ಗಮನ ನೀಡಿ ಇಲ್ಲಿನ ಅನೇಕ ಮೂಲಭೂತ ಸೌಕರ್ಯಗಳನ್ನು ನೀಡುವಲ್ಲಿ ಕಾರಣರಾಗಿದ್ದಾರೆ, ಅವರ ಮಾರ್ಗದರ್ಶನದಲ್ಲಿ ಸರ್ಕಾರಿ ಆಸ್ಪತ್ರೆ ಇನ್ನೂ ಹೆಚ್ಚು ರೋಗಿಗಳಿಗೆ ಆರೋಗ್ಯ ಕಾಪಾಡುವಲ್ಲಿ ಶ್ರಮಿಸುತ್ತಿದೆ, ಎಂದು ಆಡಳಿತ ವೈಧ್ಯಾಧಿಕಾರಿಗಳಾದ ಡಾ, ಪದ್ಮಾನಂದ ಗಾಯಕವಾಡ್ ರವರು ಅಭಿನಂಧನೆಗಳನ್ನು ವ್ಯಕ್ತಪಡಿಸಿದ್ದಾರೆ,

> ತೀರಾ ಡಯಾಲಿಸಿಸ್ ಬಾದೆಯಿಂದ ನರಳುತ್ತಿರುವ ನಮಗೆ ಸಚಿವ ದರ್ಶನಾಪುರ ಸಾಹೇಬರು ನಮಗೆ ಎಲ್ಲಾ ಅನೂಕೂಲ ಮಾಡಿಕೊಟ್ಟಿದ್ದಾರೆ, ಡಯಾಲಿಸಿಸ್ ರೋಗಿಗಳಿಗೆ ಮನಸ್ಸಿಗೆ ನೆಮ್ಮದಿಗಾಗಿ ಸಚಿವರು ಟಿವಿ ನೀಡಿ ಮಾನವಿತೆಗೆ ಮರೆಗು ನೀಡಿದ್ದಾರೆ,ನೊಂದ ರೋಗಿಗಳ ಪಾಲಿಗೆ ಸಂಜೀವಿನಿಯಾಗಿದ್ದಾರೆ ಅವರ ಋಣ ಯಾವುತ್ತು ಮರೆಯಲಾಗದು,
>
> -ಭೀಮಪ್ಪ ಶಹಾಪುರ

# ಸಾಮಾಜಿಕ ಅರಣ್ಯ ಇಲಾಖೆ ಅವ್ಯವಹಾರಗಳ ತನಿಖೆಗೆ ಒತ್ತಾಯ,

ಮಲ್ಲಮ್ಮ ನುಡಿ ವಾರ್ತೆ

ಶಹಾಪುರ,ತಾಲುಕಿನ ಸಾಮಾಜಿಕ ಅರಣ್ಯ ಇಲಾಖೆಯಲ್ಲಿ ಕಳೆದ 2023-24 ಮತ್ತು 2024 -25ರಲ್ಲಿ ನರೇಗಾ ಕಾಮಗಾರಿಗಳಲ್ಲಿ ಭಾರಿ ಭ್ರಷ್ಟಚಾರನಡೆದಿದ್ದು,ಅಧಿಕಾರಿಗಳ ಗೋಲಮಾಲನಿಂದ ನರಗೇ ಖಾತ್ರಿಯ ಕೂಲಿ ಕಾರ್ಮಿಕರ ಕೂಲಿ ಹಣ ಅಧಿಕಾರಿಗಳ ಜೇಬು ಪಾಲಾಗಿದೆ,ಅರಣ್ಯ ಅಧಿಕಾರಿಗಳೇ ಈ ಅವ್ಯವಹಾರದಲ್ಲಿ ಭಾಗಿಯಾಗಿದ್ದು ಲೋಕಾಯುಕ್ತ ತನಿಖೆಯಾಗಬೇಕು ಎಂದು ಕ,ದ,ಸಂ,ಸ [ಪರಿವರ್ತನಾ ವಾದಿ] ಯಾದಗಿರಿ ಜಿಲ್ಲಾ ಸಂಚಾಲಕರಾದ ವಿಶ್ವರಾಜ ಚಲುವಾದಿ ಆಗ್ರಹಿಸಿದ್ದಾರೆ, ಅವರು ಪತ್ರಿಕೆಗೆ ಹೆಳಕೆಯೊಂದನ್ನು ನೀಡಿ,ಫೆ,12 ರಂದು ತನಿಖೆಗೆಂದು ಆಗಮಿಸಿದ್ದ ಓಂಬುಡ್ಸನ್ ಪರ್ಸನ್ ಜಿ,ಪಂ, ಯಾದಿಗಿರುವರು ಆಗಮಿಸಿ, ದೂರೂದಾರರನ್ನು ಜೀಪನಲ್ಲಿ ಕರೆತಂದು ತನಿಖೆ ಮಾಡುವ ಸ್ಥಳವನ್ನು ಬದಲಾವಣೆ ಮಾಡುವ ಉದ್ದೇಶದಿಂದ ವಡಗೇರಾ ತಾಲುಕಿನಲ್ಲಿ ತನಿಖೆಗೆ ಕೈಗೊಂಡಿದ್ದರು, ಓಂಬಡ್ಸಮನ್ ಪರ್ಸನ ರವರು ಪಕ್ಕಾ ಅರಣ್ಯ ಇಲಾಖೆ ಅಧಿಕಾರಿಗಳ ಪರವಾಗಿ ತನಿಖೆ ವರದಿ ಮಾಡಲು ಪ್ರಯತ್ನಸಿದ್ದರಿಂದ ನಡು ಮಧ್ಯದ ರಸ್ತೆಯಲ್ಲೆ ನಮ್ಮನ್ನು ಕೇಳಗಿಳಿಸಿದ್ದಾರೆ ಇದೊಂದು ಷಡ್ಯಂತ್ರದ ತನಿಖೆ ಕ್ರಮವೆಂದು ಚಲುವಾದಿ ಆರೋಪ ವ್ಯ ್ತಪಡಿಸಿದರು, ಕೂಡಲೆ ಸಾಮಾಜಿಕ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಓಂಬಡ್ಸಮನ್ ಮೇಲೆ ಕಾನೂನು ಕ್ರಮಕ್ಕೆ ಮುಂದಾಗಬೆಕು ಎಂದು ಅವರು ಪತ್ರಿಕೆ ಪ್ರಕಟಣೆ-ಯ ಮುಖಾಂತರ ಒತ್ತಾಯ ಮಾಡಿದರು,ಮುಂದಿನ ದಿನಗಳಲ್ಲಿ ಲೋಕಾಯುಕ್ತರಿಗೆ ದೂರು ನೀಡಿ ತಿವೃ ತನಿಖೆಗೆ ಮುಂದಾಗುತ್ತೇವೆ ಎಂದು ಅವರು ತಿಳಿಸಿದ್ದಾರೆ.

# ಪ್ರಭಾವಿ ವ್ಯಕ್ತಿಗಳಿಂದ ಸರ್ಕಾರಿ ಭೂಮಿ, ಗೋಮಾಳ ಒತ್ತುವರಿ ತಡೆಗೆ ಆಗ್ರಹ

ಮಲ್ಲಮ್ಮ ನುಡಿ ವಾರ್ತೆ



ಯಾದಗಿರಿ ; ತಾಲ್ಲೂಕಿನ ಕೋಟಗೇರಾ ಗ್ರಾಮದಲ್ಲಿ ಹಿಂದಿನಿಂದಲೂ3-4ಗ್ರಾಮಗಳ ರೈತರ ಜಾನುವಾರುಗಳು ಮೇಯಿಸಲು ಮೀಸಲಿಟ್ಟಿದ್ದ ಸರ್ಕಾರಿ ಭೂಮಿ ಗೋಮಾಳ ಪ್ರದೇಶವನ್ನುಕೆಲಪ್ರಭಾವಿವ್ಯಕ್ತಿಗಳು ಜೆಸಿಬಿ ಯಂತ್ರಗಳನ್ನು ಬಳಸಿ ಸಮತಟ್ಟಾಗಿ ಮಾಡುತ್ತಿದ್ದಾರೆ,

ಇದರಿಂದ ಜಾನುವಾರುಳಿಗೆ ತೊಂದರೆಯಾಗುತ್ತಿದೆ,ಕಾರಣ ಜಿಲ್ಲಾಡಳಿತ ಕೂಡಲೇ ಒತ್ತುವರಿಯನ್ನು ತಡೆಯಬೇಕು ಎಂದು ಕೋಟಗೇರಾ ಗ್ರಾಮದ ಚಂದ್ರಯ್ಯ ಗುತ್ತೇದಾರ ಜಿಲ್ಲಾಧಿಕಾರಿಗಳಿಗೆ ದೂರು ನೀಡಿ, ಆಗ್ರಹಿಸಿದ್ದಾರೆ.

ಅನಾದಿ ಕಾಲದಿಂದ ಗ್ರಾಮದ ಸರ್ವೆ ನಂ. 86ರಲ್ಲಿ 87 ಎಕರೆ ಭೂಮಿ, 2006ರಲ್ಲಿ ಸರ್ಕಾರದಿಂದ ಹಾಗೂ ಜಿಲ್ಲಾ ನ್ಯಾಯಾಲಯದಿಂದ ಗೋಮಾಳ ಪ್ರದೇಶವೆಂದು ಆದೇಶವಾಗಿದೆ, ಇದೇ ಭೂಮಿಯಲ್ಲಿ ಕೋಟಗೇರಾ, ಚಿಂತಗುಂಟಾ, ರಾಂಪೂರ, ಹೊಸಳ್ಳಿ ಗ್ರಾಮಗಳ ಸಹಸ್ರಾರು ರೈತರ ಜಾನುವಾರುಗಳು ಮೇಯುತ್ತವೆ, ಆದರೆ 15 ದಿನಗಳ ಹಿಂದೆ ಗ್ರಾಮದ ಪ್ರಭಾವಿ ವ್ಯಕ್ತಿಯೊಬ್ಬರು ಜೆಸಿಬಿ ಯಂತ್ರಗಳನ್ನು ಬಳಸಿ ಆ ಭೂಮಿಯನ್ನು ಒತ್ತುವರಿ ಮಾಡಿಕೊಂಡು, ಸಮತಟ್ಟಾಗಿ ಮಾಡಿ, ಕೃಷಿ ಬಳಕೆಗೆ ಉದ್ದೇಶಿಸಿದ್ದಾರೆ,

ಇದನ್ನು ಪ್ರಶ್ನಿಸಿದ ಗ್ರಾಮದ ರೈತಾಪಿ ವರ್ಗಕ್ಕೆ ಈ ಭೂಮಿ ಕಂದಾಯ ಭೂಮಿಯಾಗಿದೆ, ಅಕ್ರಮ-ಸಕ್ರಮಯೋಜನೆಯಡಿಯಲ್ಲಿ ನಮಗೆ ಭೂಮಿ ಮಂಜೂರಾಗಿದೆ ಎಂದು ಉಡಾಫೆ ಉತ್ತರ ನೀಡಿ ಬೆದರಿಕೆ ಹಾಕುತ್ತಿದ್ದಾರೆ ಎಂದು ಮನವಿ ಪತ್ರದಲ್ಲಿ ದೂರಿದ್ದಾರೆ, ಆ ಪ್ರದೇಶಕ್ಕೆ ಎಂದಿನಂತೆ ಗ್ರಾಮಗಳ ಜಾನುವಾರುಗಳು, ರೈತರು ಮೇಯಿಸಲು ಹೋದಾಗ ಅವರ ಮೇಲೆ ದೌರ್ಜನ್ಯವೆಸಗಿ, ಭಯ ಹುಟ್ಟಿಸುತ್ತಿದ್ದಾರೆ, ಕಾರಣ ಜಿಲ್ಲಾಧಿಕಾರಿ ಹಾಗೂ ತಹಸಿಲ್ದಾರರು ಗ್ರಾಮಕ್ಕೆ ಭೇಟಿ ನೀಡಿ, ವಾಸ್ತವಿಕತೆ ಹಾಗೂ ಕಂದಾಯ ಇಲಾಖೆಯ, ನ್ಯಾಯಾಲಯದ ಆದೇಶ ಪತ್ರಗಳನ್ನು ಪರಿಶೀಲನೆ ಮಾಡಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಂಡು ಬಡ ರೈತರು ತಮ್ಮ ಜಾನುವಾರುಗಳನ್ನು ಮೇಯಿಸಲು ಅನುಕೂಲತೆ ಮಾಡಿಕೊಡಬೇಕೆಂದು ಮನವಿ ಮಾಡಿದರು.

ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ :

# ಆಕ್ಷೇಪಣೆ ಅರ್ಜಿಗೆ ಅವಕಾಶ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಮಾರ್ಚ್ 24, ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಗೌರವಸೇವೆ ಹುದ್ದೆಗಳ ನೇಮಕಾತಿಗೆ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ ಎಂದು ಯಾದಗಿರಿ ಅಂಗನವಾಡಿ ಕಾರ್ಯಕರ್ತೆ,ಸಹಾಯಕಿಯರ ಸದಸ್ಯ ಕಾರ್ಯದರ್ಶಿಗಳು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರು ವೀರನಗೌಡ ಅವರು ತಿಳಿಸಿದ್ದಾರೆ.

ಯಾದಗಿರಿ ಜಿಲ್ಲೆಯಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ ಹಾಗೂ ಅಂಗನವಾಡಿ ಸಹಾಯಕಿ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿ, ಸ್ವೀಕೃತಗೊಂಡ ಅರ್ಜಿಗಳನ್ನು ಪರಿಶೀಲಿಸಿ, 2025ರ ಮಾರ್ಚ್ 10 ಮತ್ತು 11 ರಂದು ನಡೆದ ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಸಭೆಯ ಮೂಲಕ 4-ಅಂಗನವಾಡಿ ಕಾರ್ಯಕರ್ತೆ (ಅನುಬಂಧ-1) ಹಾಗೂ 6-ಅಂಗನವಾಡಿ ಸಹಾಯಕ (ಅನುಬಂಧ-2) ಹುದ್ದೆಗಳಿಗೆ ತಾತ್ಕಾಲಿಕವಾಗಿ ಆಯ್ಕೆಗೊಳಿಸಲಾಗಿದೆ.

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಗಂಜ್ ಏರಿಯಾ, ಶಹಾಪೂರ 585 214. ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಹಳೆ ಕೋರ್ಟ್ ಕಟ್ಟಡ, ಜೈಲ್ ಹತ್ತಿರ ಸುರಪುರ. ಮತ್ತು ಶಿಶು ಅಭಿವೃದ್ಧಿಯೋಜನಾಧಿಕಾರಿಗಳ ಕಛೇರಿ, 1ನೇ ಮಹಡಿ ಸ್ತ್ರೀ ಶಕ್ತಿ ಭವನ, ಜಿಲ್ಲಾ ಆಸ್ಪತ್ರೆ ರಸ್ತೆ, ಯಾದಗಿರಿ. ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರೂಂ ನಂ.ಸಿ-17, ಜಿಲ್ಲಾಡಳಿತ ಭವನ, ಚಿತ್ತಾಪೂರ ರಸ್ತೆ, ಯಾದಗಿರಿ ಈ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಸಂಬಂಧಿಸಿದಂತೆ 2025ರ ಏಪ್ರಿಲ್ 2ರ ಒಳಗೆ ಅರ್ಜಿದಾರರು ಸೂಕ್ತ ದಾಖಲಾತಿಗಳೊಂದಿಗೆ ಆಕ್ಷೇಪಣೆ ಸಲ್ಲಿಸಬೇಕು, ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ನಾಧಿಕಾರಿಗಳ ಕಛೇರಿ, ಗಂಜ್ ಏರಿಯಾ ಶಹಾಪೂರ ದೂರವಾಣಿ ಸಂಖ್ಯೆ 08479 243254. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಹಳೆ ಕೋರ್ಟ್ ಕಟ್ಟಡ, ಜೈಲ್ ಹತ್ತಿರ ಸುರಪುರ ದೂ.ಸಂ. 08443 256808. ಶಿಶು ಅಭಿವೃದ್ಧಿಯೋಜನಾಧಿಕಾರಿಗಳ ಕಛೇರಿ, 1ನೇ ಮಹಡಿ ಸ್ತ್ರೀ ಶಕ್ತಿ ಭವನ, ಜಿಲ್ಲಾ ಆಸ್ಪತ್ರೆ ರಸ್ತೆ, ಯಾದಗಿರಿ ದೂ.ಸಂ.08473 252265. ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರೂಂ ನಂ.ಸಿ-17, ಜಿಲ್ಲಾಡಳಿತ ಭವನ, ಚಿತ್ತಾಪೂರ ರಸ್ತೆ, ದೂ.ಸಂ.08473 253739ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಥಪೂರ್ಣವಾಗಿ ದೇವರ ದಾಸಿಮಯ್ಯ

# ಜಯಂತಿ ಆಚರಣೆಗೆ ನಿರ್ಧಾರ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಮಾ:24: ದೇವರ ದಾಸಿಮಯ್ಯ ಅವರ ಜಯಂತಿಯನ್ನು ಇದೇ ಏಪ್ರಿಲ್ 2 ರಂದು ಜಿಲ್ಲಾಡಳಿತದವತಿಯಿಂದ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ.

ಅಪರ ಜಿಲ್ಲಾಧಿಕಾರಿ ಶ್ರೀ ಶರಣಬಸಪ್ಪ ಕೋಟೆಪ್ಪಗೊಳ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ದೇವರ ದಾಸಿಮಯ್ಯ ಜಯಂತಿ ಆಚರಣೆ ಕುರಿತ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ.

ಸಭೆಯ ಅಧ್ಯಕ್ಷತೆ ವಹಿಸಿದ್ದ ಅಪರ ಜಿಲ್ಲಾಧಿಕಾರಿ ಶ್ರೀ ಶರಣಬಸಪ್ಪ ಕೋಟೆಪ್ಪಗೊಳ ಅವರು, ಜಯಂತಿಯು ಏಪ್ರಿಲ್ 2 ರಂದು ಇರುವುದರಿಂದ, ತಾಲೂಕ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು.

ಸಮಾಜದ ಮುಖಂಡರು, ಪ್ರತಿನಿಧಿಗಳು ಮೆರವಣಿಗೆ ಮಾರ್ಗದ ಬಗ್ಗೆ ಮುಂಚಿತವಾಗಿ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಗಮನಕ್ಕೆ ತರಲು ಸೂಚಿಸಲಾಯಿತು.

ಜಿಲ್ಲಾ ಮಟ್ಟದ ಮುಖ್ಯ ಸಮಾರಂಭವು ಏಪ್ರಿಲ್ 2 ರಂದು ನಗರದ ಸರ್ಕಾರಿ ಪದವಿ ಮಹಾವಿದ್ಯಾಲಯದ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಆಚರಿಸಲು ಇಂದಿನ ಸಭೆಯಲ್ಲಿ ನಿರ್ಧರಿಸಲಾಯಿತು.

ಶಿಷ್ಟಾಚಾರದಂತೆ ಅತಿಥಿ ಗಣ್ಯರನ್ನು ಆಹ್ವಾನಿಸಲು, ವೇದಿಕೆ, ಆಹ್ವಾನ ಪತ್ರಿ-ಕೆ ಸೇರಿದಂತೆ ಇನ್ನಿತರ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಅದರಂತೆ ಜಿಲ್ಲೆಯ ಎಲ್ಲ ತಾಲೂಕು ಮಟ್ಟದಲ್ಲಿ, ಈ ಜಯಂತಿಯನ್ನು ಆಚರಣೆಗೆ ಸಕಲ ಕ್ರಮಗಳನ್ನು ಕೈಗೊಳ್ಳಬೇಕು, ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಸೂಕ್ತ ಪೊಲೀಸ್ ಬಂದೋಬಸ್ತ ಮಾಡಲು ಹಾಗೂ ನುರಿತ ಉಪನ್ಯಾಸಕರನ್ನು ಜಿಲ್ಲಾಮಟ್ಟದಲ್ಲಿ ಕಾರ್ಯಕ್ರಮಕ್ಕೆ ಆಹ್ವಾನಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ, ಜಯಂತ್ಯೋತ್ಸವ ಸಮಿತಿ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಕಾರ್ಯಕ್ರಮ ಅಚ್ಚುಕಟ್ಟಾಗಿ ಆಯೋಜಿಸಬೇಕು, ಜಿಲ್ಲೆಯ ಅಧಿಕಾರಿಗಳು, ಸಿಬ್ಬಂದಿಗಳು, ಆಯಾ ಸಮಾಜದ ಮುಖಂಡರು, ಸಂಘ ಸಂಸ್ಥೆಗಳವರು ತಪ್ಪದೇ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಅವರು ಸಲಹೆ ನೀಡಿದರು.

ಸಭೆಯಲ್ಲಿ , ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರದೇವಿ ಮಠಪತಿ, ಸಮಾಜದ ಮುಖಂಡರಾದ ಬಸವರಾಜ ಹುನಗುಂದ, ವೀರ ಸಂಗಪ್ಪ ಹಾವೇರಿ, ಶಾಂತಪ್ಪ ನಿಡಗುಂದಿ, ಬಸವರಾಜ ಜಾವಗೌಡರ, ಸಂತೋಷ ಬೊಜ್ಜಿ, ಉಮೇಶ್, ತಿಪ್ಪಣ್ಣ ಚಾಮನಾಳ, ಸುಧಾರಾಣಿ, ಹಾಗೂ ಇತರರು ಉಪಸ್ಥಿತರಿದ್ದರು.

# ವೀರಶೈವ ಸಂಘಟನೆ ಬಲಪಡಿಸುವ ಅಗತ್ಯ: ಡಾ.ಬಿದರಿ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ವೀರಶೈವ ಸಮಾಜಬಂಧುಗಳಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆಗಾಗಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭೆಯು ಕೆಲಸ ಮಾಡುತ್ತಿದೆ ಇದನ್ನು ಇನ್ನಷ್ಟು ಸದೃಢ ಗೊಳಿಸಲು ಸಂಘಟನೆಯನ್ನುಬಲಪಡಿಸುವ ಅಗತ್ಯ ಇದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ರಾಜ್ಯಾಧ್ಯಕ್ಷ ಡಾ. ಶಂಕರ ಬಿದರಿ ಹೇಳಿದರು. ಭಾನುವಾರ ಪಟ್ಟಣದ ಅಡತ್ ಮರ್ಚೆಂಟ್ ಅಸೋಸಿಯೇಷನ್ ಸಭಾ ಭವನದಲ್ಲಿ ವೀರಶೈವ ಲಿಂಗಾಯತ ಮಹಾಸಭೆ ತಾಳಿಕೋಟಿ ಘಟಕ ರಚನೆಗಾಗಿ ಹಮ್ಮಿಕೊಂಡಸಮಾಜಬಾಂಧವರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ದೇಶ ಹಾಗೂ ರಾಜ್ಯದಲ್ಲಿರುವ ಸಣ್ಣ ಸಣ್ಣ ಸಮಾಜಗಳು ಸಂಘಟಿತರಾಗಿ ಹೋರಾಡಿ ತಮ್ಮ ಹಕ್ಕುಗಳನ್ನು ಸರ್ಕಾರದ ಮಟ್ಟದಲ್ಲಿ ಪಡೆದುಕೊಳ್ಳುತ್ತಿದ್ದಾರೆ ಆದರೆ ದೊಡ್ಡ ಸಂಖ್ಯೆಯಲ್ಲಿರುವ ನಮ್ಮ ಸಮಾಜವು ಬಹಳಷ್ಟು ಹಿಂದೆ ಉಳಿದಿದೆ ಇದಕ್ಕೆ ಕಾರಣ ನಮ್ಮ ಸಂಘಟನೆ ಕೊರತೆ ಆದ್ದರಿಂದ ಇಡೀ ರಾಜ್ಯದಲ್ಲಿ ಹಾಗೂ ವಿಶೇಷವಾಗಿ ಇತ್ತೀಚಿಗೆ ನೂತನವಾಗಿ ರಚನೆಗೊಂಡ ತಾಲೂಕುಗಳಲ್ಲಿ ಸಂಘಟನೆಯ ಘಟಕಗಳನ್ನು ಸ್ಥಾಪಿಸಲು ನಿರ್ಣಯ ತೆಗೆದುಕೊಂಡಿದ್ದು ಈ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತಿವೆ ಇದಕ್ಕೆ ನಿಮ್ಮೆಲ್ಲರ ಸಹಕಾರ ಇರಲಿ, ಏಪ್ರಿಲ್ ಅಂತ್ಯದೊಳಗೆ ತಾಳಿಕೋಟಿ ಘಟಕದ ರಚನೆಯನ್ನು ಮಾಡಿ ಇದಕ್ಕೆ ನಮ್ಮ ಜಿಲ್ಲಾಧ್ಯಕ್ಷರು ನಿಮಗೆ ಮಾರ್ಗದರ್ಶನ ಮಾಡುತ್ತಾರೆ ಎಂದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ವಿ.ಸಿ. ನಾಗಠಾಣ ಪ್ರಸ್ತಾವಿಕವಾಗಿ ಮಾತನಾಡಿ ಮಹಾಸಭಾದ ಸ್ಥಾಪನೆ ಉದ್ದೇಶ ಅದರ ಕಾರ್ಯವಿಧಾನ ಕುರಿತು ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವಲಿಂಗಾಯತಮಹಾಸಭಾ ರಾಜ್ಯಾಧ್ಯಕ್ಷ ಡಾ.ಶಂಕರ ಬಿದರಿ ಇವರನ್ನು ಹಲವಾರು ಸಂಘ ಸಂಸ್ಥೆಗಳ ಮುಖ್ಯಸ್ಥರು ಸನ್ಮಾನಿಸಿ ಗೌರವಿಸಿದರು. ಈ ಸಮಯದಲ್ಲಿ ವಿ.ವಿ.ಸಂಘದ ಅಧ್ಯಕ್ಷ ವೀರಪಾಕ್ಷಯ್ಯ ಹಿರೇಮಠ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಆರ್.ಎಸ್.ಪಾಟೀಲ ಕೂಚಬಾಳ, ಡಾ.ವಿ.ಎಸ್.ಕಾರ್ಚಿ, ಎಂ.ಎಸ್.ಸರಶೆಟ್ಟಿ, ಕಾಶಿನಾಥ ಮುರಾಳ, ಎಚ್.ಎಸ್.ಪಾಟೀಲ, ಕಾಶಿನಾಥ್ ಸಜ್ಜನ, ಎಂ.ಕೆ. ಪಟ್ಟಣಶೆಟ್ಟಿ, ಆರ್.ಎಲ್.ಕೊಪ್ಪದ, ಪರಶುರಾಮ್ ತಂಗಡಗಿ ಮಹದೇವಪ್ಪ ಕುಂಬಾರ, ಚಿಂತಪ್ಪ ಗೌಡ ಯಾಳಗಿ, ರಾಮನಗೌಡ ಬಾಗೇವಾಡಿ, ಬಿ.ಎಸ್. ಇಸಾಂಪೂರ, ಡಿಕೆ ಪಾಟೀಲ ಮತ್ತಿತರರು ಇದ್ದರು.

# ದೇಶಪ್ರೇಮಿ ಸಂಗಾತಿಗಳು ಭಗತ್ ಸಿಂಗ್ ರಾಜಗುರು ಸುಖದೇವ್ ಅವರ ಹುತಾತ್ಮ ದಿನ.



ಮಲ್ಲಮ್ಮ ನುಡಿ ವಾರ್ತೆ

ಶಹಾಪೂರ 1931 ಮಾರ್ಚ್ 23 ರಂದು ದೇಶದ ವಿಮೋಚನೆಗಾಗಿ ನಗುನಗುತ್ತಲೇನೇಣುಗಂಬಕ್ಕೇರಿದ ಈ ಸಂಗಾತಿಗಳ ತ್ಯಾಗ ವ್ಯರ್ಥವಾಗಲು ಬಿಡದಿರಲು ಶಪಥ ಮಾಡೋಣ. ದೇಶವನ್ನು ವಿನಾಶದ ಅಂಚಿನಲ್ಲಿ ನಿಲ್ಲಿಸಿರುವ ಆರ್ಥಿಕ–ಶೈಕ್ಷಣಿಕ ಅಸಮಾನತೆ, ನಿರುದ್ಯೋಗ, ಫ್ಯಾಸಿಸಂ, ಕರಾಳ ಕೋಮುವಾದಿ ರಾಜ–ಕಾರಣ, ಮತಾಂಧತೆ, ಜಾತಿ ತಾರತಮ್ಯ, ಲಿಂಗ ತಾರತಮ್ಯಗಳ ವಿರುದ್ಧ ಸಮಾನತೆಗಾಗಿ ಹೋರಾಟವನ್ನು ಮುಂದುವರಿಸಿ ಈ ವಿಮೋಚನಾ ಸಮರದಲ್ಲಿ ಉದುರಿದ ಕೆಂಪು ತಾರೆಗಳಿಗೆ ಲಾಲ್ ಸಲಾಂ ಹೇಳೋಣ.

# ಮಾ.25 ರಂದು ಮದ್ಯ ಮತ್ತು ಮಾದಕ ದುಷ್ಪರಿಣಾಮ ಕುರಿತು ವಿಚಾರ ಸಂಕಿರಣ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮಾ.24–ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ, ಬೆಂಗಳೂರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬಳ್ಳಾರಿ ಮತ್ತು ಶ್ರೀಮತಿ ಸರಳಾದೇವಿ ಸತೀಶ್ಚಂದ್ರ ಅಗರವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ಬಳ್ಳಾರಿ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಎ,ಬಿ,ಸಿ ಮತ್ತು ಡಿ ಘಟಕ ಇವರ ಸಂಯುಕ್ತಾಶ್ರಯದಲ್ಲಿ ಮಾ.25 ರಂದು ಬೆಳಿಗ್ಗೆ 10 ಗಂಟೆಗೆ ಶ್ರೀಮತಿ ಸರಳಾದೇವಿ ಸತೀಶ್ಚಂದ್ರ ಅಗರವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ 'ಮದ್ಯ ಮತ್ತು ಮಾದಕ ದುಷ್ಪರಿಣಾಮ ಕುರಿತು ವಿಚಾರ ಸಂಕಿರಣ' ಆಯೋಜಿಸಲಾಗಿದೆ.

ಶ್ರೀಮತಿ ಸರಳಾದೇವಿ ಸತೀಶ್ಚಂದ್ರ ಅಗರವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಪ್ರಹ್ಲಾದ ಚೌದ್ರಿ ಅವರು ಕಾರ್ಯಕ್ರಮದ ಉದ್ಘಾಟನೆ ಮತ್ತು ಅಧ್ಯಕ್ಷತೆ ವಹಿಸುವರು. ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ವೀರೇಂದ್ರಕುಮಾರ್ ಅವರು ವಿಶೇಷ ಉಪನ್ಯಾಸಕರಾಗಿ ಭಾಗವಹಿಸುವರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಬಿ.ವಿ.ತುಕಾರಾಂ ರಾವ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ರಾಷ್ಟ್ರೀಯ ಸೇವಾ ಯೋಜನೆಯ ಎ ಘಟಕದ ಕಾರ್ಯಕ್ರಮಾಧಿಕಾರಿ ಪ್ರೊ.ಬಿ.ರಾಮಸ್ವಾಮಿ, ಬಿ ಘಟಕದ ಕಾರ್ಯಕ್ರಮಾಧಿಕಾರಿ ಡಾ.ಚನ್ನಬಸವಯ್ಯ ಹೆಚ್.ಎಂ., ಸಿ ಘಟಕದ ಕಾರ್ಯಕ್ರಮಾಧಿಕಾರಿ ಪ್ರೊ.ಪ್ರವೀಣ್ ಕುಮಾರ್, ಡಿ ಘಟಕದ ಕಾರ್ಯಕ್ರಮಾಧಿಕಾರಿ ಪ್ರೊ.ನಾಜಿಯಾ ಖಾಜಿ ಸೇರಿದಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿವರ್ಗ, ವಿದ್ಯಾರ್ಥಿಗಳು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

# ಬಳ್ಳಾರಿ: 05 ಗ್ರಾಪಂ ಗೆ ಕ್ಷಯಮುಕ್ತ ಪ್ರಶಸ್ತಿ

## ಕ್ಷಯ ಮುಕ್ತ ಜಿಲ್ಲೆಯನ್ನಾಗಿಸಲು ಕೈಜೋಡಿಸಿ: ಶಾಸಕಿ ಈ.ಅನ್ನಪೂರ್ಣ




ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮಾ.24–ಬಳ್ಳಾರಿ ಜಿಲ್ಲೆಯನ್ನು ಕ್ಷಯಮುಕ್ತ ಜಿಲ್ಲೆಯನ್ನಾಗಿಸಲುಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಸಂಡೂರು ಶಾಸಕರಾದ ಈ.ಅನ್ನಪೂರ್ಣ ಅವರು ಹೇಳಿದರು.

'ವಿಶ್ವ ಕ್ಷಯರೋಗ ದಿನಾಚರಣೆ–2025'ರಅಂಗವಾಗಿ 'ಹೌದು! ನಾವು ಕ್ಷಯವನ್ನು ಕೊನೆಗೊಳಿಸಬಹುದು' ಎಂಬ ಧ್ಯೇಯವಾಕ್ಯದೊಂದಿಗೆಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಜಿಲ್ಲಾ ಕ್ಷಯ–ರೋಗ ನಿರ್ಮೂಲನಾ ಕೇಂದ್ರ ವತಿಯಿಂದ ನಗರದ ಬಿಮ್ಸ್‌ನ ವೈದ್ಯ ಭವನ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ 2024ನೇ ಸಾಲಿಗೆ ಎಸ್‌ಟಿಇಪಿ ಕಾರ್ಯಕ್ರಮದಡಿ ಉತ್ತಮ ಸೇವೆ ಸಲ್ಲಿಸಿದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಸನ್ಮಾನ ಸಮಾರಂಭ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕ್ಷಯವು ಚಿಕ್ಕ ಮಕ್ಕಳಿನಿಂದ ಹಿರಿಯ ವಯಸ್ಸಿನವರಿಗೂ ಬಾಧಿಸುವಂತಹ ರೋಗವಾಗಿದೆ. ಹೆಚ್ಚಾಗಿ ಧೂಳಿನಿಂದ ಕೂಡಿದ ಪ್ರದೇಶದಲ್ಲಿ ಕೆಲಸ ಮಾಡುವವರಿಗೆ ಮತ್ತು ರೋಗ ನಿರೋಧಕ ಶಕ್ತಿ ಕಡಿಮೆ ಇರುವವರಿಗೂ ಸಹ ಬರಬಹುದಾಗಿದೆ ಎಂದು ತಿಳಿಸಿದರು.

ಗ್ರಾಮೀಣ ಪ್ರದೇಶದಲ್ಲಿ ಜನತೆಯು ಕ್ಷಯರೋಗದ ಕುರಿತು ಹೆಚ್ಚು ಕಾಳಜಿ ತೆಗೆದುಕೊಳ್ಳದೇ ಇರುವುದು ಕಂಡುಬರುತ್ತಿದ್ದು, ಈ ದಿಶೆಯಲ್ಲಿ ಸೂಕ್ತ ಜಾಗೃತಿ ನೀಡಬೇಕು. ಜೊತೆಗೆ ಕ್ಷಯರೋಗವನ್ನು ಸಕಾಲದಲ್ಲಿ ಗುರುತಿಸುವ ಕಾರ್ಯದಲ್ಲಿ ವೈದ್ಯಾಧಿಕಾರಿಗಳು ಸೇರಿದಂತೆ ಆಶಾಕಾರ್ಯಕರ್ತೆಯರ ಪಾತ್ರ ಪ್ರಮುಖವಾಗಿದೆ. ಹಾಗಾಗಿ ಕ್ಷಯಮುಕ್ತ ಬಳ್ಳಾರಿಯನ್ನಾಗಿ ಮಾಡುವ ಪ್ರಯತ್ನವನ್ನು ನಾವೆಲ್ಲರೂ ಸೇರಿ ಮಾಡೋಣ ಎಂದು ಕರೆ ನೀಡಿದರು.

ರಾಜ್ಯ ಸರ್ಕಾರವು ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಉತ್ತಮ ಆರೋಗ್ಯ ಒದಗಿಸುವುದು ನಮ್ಮ ಸರ್ಕಾರದ ಕರ್ತವ್ಯವೂ ಆಗಿದೆ ಎಂದು ಹೇಳಿದರು.

ಬಳ್ಳಾರಿ ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್ ಅವರು ಮಾತನಾಡಿ, ಕ್ಷಯರೋಗವು ಹಿಂದಿನ ಕಾಲದಲ್ಲಿ ಸಾಕಷ್ಟು ಪರಿಣಾಮ ಬೀರಿತ್ತು. ಪ್ರಸ್ತುತದಲ್ಲಿ ಆಧುನಿಕ ತಂತ್ರಜ್ಞಾನವುಳ್ಳ ಯಂತ್ರಗಳು ಲಭ್ಯವಿದ್ದು, ಸಕಾಲದಲ್ಲಿ ಗುರುತಿಸಿ ತ್ವರಿತವಾಗಿ ಚಿಕಿತ್ಸೆ ಪಡೆಯಬಹುದಾಗಿದೆ ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೈರ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಕ್ಷಯ ಪ್ರಕರಣಗಳು ಗಣನೀಯವಾಗಿ ಇಳಿಮುಖವಾಗಿವೆ. ಸಂಪೂರ್ಣವಾಗಿ ಕಡಿಮೆ ಮಾಡಲು ಸಾರ್ವಜನಿಕರು ಆರೋಗ್ಯ ಇಲಾಖೆಗೆ ಕೈಜೋಡಿಸಬೇಕು ಎಂದು ಹೇಳಿದರು.

ಕ್ಷಯ ಲಕ್ಷಣ ಕಂಡುಬಂದಲ್ಲಿ ಕೂಡಲೇ ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿಕೊಳ್ಳಬೇಕು. ಬಳಿಕ ಶೀಘ್ರವಾಗಿ ಚಿಕಿತ್ಸೆ ಪಡೆಯಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ.ವಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಜಿಲ್ಲೆಯಲ್ಲಿ ಈಗಾಗಲೇ ಕ್ಷಯವನ್ನು ತ್ವರಿತವಾಗಿ ಪತ್ತೆಹಚ್ಚಲು ಸಿಬಿನ್ಯಾಟ್ ಯಂತ್ರಗಳನ್ನು ಬಿಮ್ಸ್, ಜಿಲ್ಲಾ ಆಸ್ಪತ್ರೆ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಹಾಗೂ ಟ್ರುನ್ಯಾಟ್ ಮಿಷನ್ ಗಳನ್ನು ಎಲ್ಲ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಅನುಷ್ಠಾನ ಮಾಡಲಾಗಿದ್ದು, ರೋಗವನ್ನು ಶೀಘ್ರವಾಗಿ ಪತ್ತೆ ಹಚ್ಚಿ ಚಿಕಿತ್ಸೆ ನೀಡಲು ಸಹಕಾರಿಯಾಗಿದ್ದು, ಚಿಕಿತ್ಸೆ ಪೂರ್ಣಗೊಂಡು ಗುಣಮುಖರಾಗುವ ಪ್ರಮಾಣ ಶೇ.85 ರಷ್ಟಿದ್ದು ರಾಜ್ಯಮಟ್ಟದಲ್ಲಿ ಗಣನೀಯ ಸಾಧನೆ ಮಾಡಿದ ಜಿಲ್ಲೆಗಳಲ್ಲಿ ಬಳ್ಳಾರಿ ಜಿಲ್ಲೆಯು ಒಂದಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲೆಯಲ್ಲಿ 2024 ಸಾಲಿಗೆ ಕ್ಷಯಮುಕ್ತ ಗ್ರಾಮ ಪಂಚಾಯತ್‌ನ ಅಧ್ಯಕ್ಷರು ಮತ್ತು ಆ ವ್ಯಾಪ್ತಿಯ ವೈದ್ಯಾಧಿಕಾರಿಗಳಿಗೆ ಸನ್ಮಾನಿಸಲಾಯಿತು.

*ಕ್ಷಯಮುಕ್ತ ಗ್ರಾಪಂ:*

ಬಳ್ಳಾರಿ ತಾಲ್ಲೂಕಿನ ಭೈರದೇವನಹಳ್ಳಿ, ರ‍್ರಗುಡಿ, ಸಂಗನಕಲ್ಲು, ಸಿರಿವಾರ ಮತ್ತು ಕರ್ಲಗುಂದಿ.

ಬಳಿಕ ಉತ್ತಮ ಸೇವೆ ಸಲ್ಲಿಸಿದ ವೈದ್ಯರು, ಕ್ಷೇತ್ರ ಸಿಬ್ಬಂದಿ ಹಾಗೂ ಖಾಸಗಿ ಆಸ್ಪತ್ರೆಯ ವೈದ್ಯರು ಹಾಗೂ ಸಂಘ ಸಂಸ್ಥೆಗಳಿಗೆ ಸನ್ಮಾನಿಸಲಾಯಿತು.

*ಗಮನಸೆಳೆದ ಜಾಗೃತಿ ಜಾಥಾ:*

ವಿಶ್ವಕ್ಷಯರೋಗ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಜನಜಾಗೃತಿ ಜಾಥಾವು ಗಮನ ಸೆಳೆಯಿತು. ವಿವಿಧ ಸಾಂಸ್ಕೃತಿ ಕಲಾತಂಡಗಳನ್ನೊಳಗೊಂಡ ಜಾಥಾದಲ್ಲಿ ಆಶಾ–ಕಾರ್ಯಕರ್ತೆಯರು, ನರ್ಸಿಂಗ್ ವಿದ್ಯಾರ್ಥಿಗಳು ಭಾಗವಹಿಸಿ ಘೋಷಣೆ ಕೂಗುವ ಮೂಲಕ ಜಾಗೃತಿ ಮೂಡಿಸಲಾಯಿತು. ಕ್ಷಯರೋಗ ಜಾಗೃತಿ ಮೂಡಿಸುವ ಮಾಹಿತಿ ಫಲಕಗಳು ರಾರಾಜಿಸಿದವು.

ಜಾಗೃತಿ ಜಾಥಾವು ನಗರದ ಕನಕದಾಸರ ವೃತ್ತದ ಕೆಎಂಎಫ್ ಮುಂಭಾಗದಿಂದ ಆರಂಭಗೊಂಡು ಇನ್‌ಫ್ಯಾಂಟರಿ ರಸ್ತೆಯ ಮೂಲಕ ಬಳ್ಳಾರಿ ವೈದ್ಯಕೀಯ ಕಾಲೇಜ್ ಮತ್ತು ಸಂಶೋಧನಾ ಕೇಂದ್ರ (ಬಿಮ್ಸ್)ದ ವೈದ್ಯೆ ಭವನದ ಸಭಾಂಗಣದವರೆಗೆ ಸಾಗಿ ಸಮಾರೋಪಗೊಂಡಿತು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಉಪಮೇಯರ್ ಡಿ.ಸುಕುಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ, ಬಿಮ್ಸ್ ನಿರ್ದೇಶಕ ಡಾ.ಗಂಗಾಧರ ಗೌಡ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಡ್ಯಾಪ್ಕೋ ಮೇಲ್ವಿಚಾರಕ ಗಿರೀಶ್ ಸೇರಿದಂತೆ ವಿವಿಧ ತಾಲ್ಲೂಕು ಆರೋಗ್ಯ ಅಧಿಕಾರಿಗಳು, ವೈದ್ಯಾಧಿಕಾರಿಗಳು, ಸಿಬ್ಬಂದಿಯವರು, ಆಶಾ ಕಾರ್ಯಕರ್ತೆಯರು, ಟಿಬಿ ವಿಭಾಗದ ಸಿಬ್ಬಂದಿ, ಟಿಬಿ ಚಾಂಪಿಯನ್ಸ್ ಹಾಗೂ ಬಿಮ್ಸ್‌ನ ತರಬೇತುದಾರ ವೈದ್ಯರು, ನರ್ಸಿಂಗ್ ವಿದ್ಯಾರ್ಥಿಗಳು, ಮತ್ತಿತರರು ಉಪಸ್ಥಿತರಿದ್ದರು.

# ರಕ್ತದಾನಿಯನ್ನ ಯಾರು ನೋಡದಿದ್ದರೂ ಸಹ, ಭಗವಂತ ಅವರನ್ನ ನೋಡುತ್ತಾನೆ : ಉಷಾದೇವಿ ಹಿರೇಮಠ




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ ಭಾರತ ರತ್ನ ಶ್ರೀ ಅಟಲ್ ಬಿಹಾರಿ ವಾಜಪೇಯಿ ಕಾನೂನು ಮಹಾವಿದ್ಯಾಲಯ ಕೊಪ್ಪಳ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕೊಪ್ಪಳ ಹಾಗೂ ನಿಮ್ಮ ಸಂಸ್ಥೆ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಯುವ ರೆಡ್ ಕ್ರಾಸ್ ಸಂಸ್ಥೆ ಇವರ ಸಂಯುಕ್ತ ಆಶ್ರಯದಲ್ಲಿ ಕಾನೂನು ಮಹಾವಿದ್ಯಾಲಯ ಕೊಪ್ಪಳದಲ್ಲಿ ಹಮ್ಮಿಕೊಳ್ಳಲಾಗಿದ್ದ ಬೃಹತ್ ರಕ್ತದಾನ ಶಿಬಿರ ಹಾಗೂ ಭಾರತ ಸ್ವತಂತ್ರ ಸಂಗ್ರಾಮದ ಕ್ರಾಂತಿಕಾರಿ ಹೋರಾಟಗಾರರಾದ ಭಗತ್ ಸಿಂಗ್ ರಾಜಗುರು ಸುಖದೇವ್ ಅವರ ಬಲಿದಾನದ ದಿನದಂದು ಗೌರಪೂರ್ವಕ ಪ್ರಣಾಮಗಳು ಕಾರ್ಯಕ್ರಮವನ್ನು ಉದ್ದೇಶಿಸಿ ಪ್ರಾಚಾರ್ಯರಾದ ಔಷಧಿ ಹಿರೇಮಠ ಮಾತನಾಡಿ ರಕ್ತದಾನವನ್ನು ಯಾರು ನೋಡದಿದ್ದರೂ ಸಹ ಭಗವಂತ ನಿಮ್ಮನ್ನು ನೋಡುತ್ತಾನೆ ಮತ್ತು ನಿಮಗೆ ಒಳ್ಳೆಯದನ್ನು ಕೂಡ ಮಾಡುತ್ತಾನೆ, ಬೇರೊಬ್ಬರಿಗೆ ರಕ್ತದಾನ ಮಾಡುವುದರಿಂದ ನಮಗೆ ಒಳ್ಳೆಯದು ಆಗುತ್ತೆ. ರಕ್ತದಾನ ಮಾಡುವುದರಿಂದ ಅನೇಕರಿಗೆ ಉಪಯೋಗವಾಗುತ್ತದೆ ಮತ್ತು ಮಹಾನ ವ್ಯಕ್ತಿಗಳಾದ ಭಗತ್ ಸಿಂಗ್ ಸುಖದೇವ ರಾಜಗುರು ಅವರು ದೇಶಕ್ಕೆ ನೀಡಿದ ಕೊಡುಗೆ ಅಪಾರ ಎಂದರು. ಪ್ರಾಸ್ತಾವಿಕವಾಗಿ ಎಸ್.ಎಂ ಬಸವರಾಜ್ ಎನ್ ಎಸ್ ಎಸ್ ಕಾರ್ಯಕ್ರಮಾಧಿಕಾರಿ ಹಾಗೂ ಉಪರಾಚಾರ್ಯರಾದ ಮಾತನಾಡಿ ದಾನ ದಾನಗಳಲ್ಲಿ ಶ್ರೇಷ್ಠವಾದ ದಾನ ರಕ್ತದಾನ, ರಕ್ತದಾನದ ಮಹತ್ವವನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾಕ್ಟರ್ ಶಿವಕುಮಾರ್ ಪಾಟೀಲ್ ಮಾತನಾಡಿ ಎರಡು ಮೂರು ಶತಮಾನಗಳ ಕಾಲ ನಮ್ಮನ್ನು ಯುರೋಪಿಯನ್ನರು ಆಳ್ವಿಕೆ ಮಾಡಿದ್ದಾರೆ ಸ್ವತಂತ್ರಕ್ಕಾಗಿ ಅನೇಕರು ಪ್ರಾಣವನ್ನು ಬಿಟ್ಟಿದ್ದಾರೆ ಬ್ರಿಟಿಷರನ್ನು ದೇಶ ಬಿಟ್ಟು ಹೋಗಲಾಡಿಸಲು ತೀವ್ರಗಾಮಿಯಾಗಿ ರಕ್ತಚಳ್ಳಿ ಹೋರಾಟ ಮಾಡಿದ್ದಾರೆ,

ಭಗತ್ ಸಿಂಗ್ ರಾಜಗುರು ಸುಖದೇವ ಅವರಂತಹ ಮಹಾನ್ ಕ್ರಾಂತಿಕಾರಿ ಮನೋಭಾವನೆಗಳನ್ನು ಪ್ರತಿಯೊಬ್ಬರು ಬೆಳೆಸಿಕೊಳ್ಳಬೇಕು ಮತ್ತು ಅವರಂತಹ ದೇಶ ಅಭಿಮಾನವನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು ಮತ್ತು ಈಗಿನ ಯುವ ಜನತೆ ರಕ್ತದಾನ ಮಾಡಬೇಕಿರುವುದು ಅಗತ್ಯವಾಗಿದೆ ಸಂವಿಧಾನ ಒಂದು ಕಾರ್ಯಕ್ರಮದಲ್ಲಿ 1 ಲಕ್ಷ ಯೂನಿಟ್ ರಕ್ತವನ್ನು ನೀಡಿದ್ದೆವು, ಸಂವಿಧಾನ ಎರಡರಲ್ಲಿ 1 ಲಕ್ಷದ 50,000 ಯೂನಿಟ್ ಕಿಂತ ಹೆಚ್ಚು

ರಕ್ತದಾನವನ್ನು ಮಾಡುವುದರ ಮೂಲಕ ಗಿನ್ನಿಸ್ ರೆಕಾರ್ಡ್ ದಾಖಲಿಸಬೇಕಿದೆ ನಮ್ಮೆಲ್ಲರ ಸಹಕಾರವು ಕೂಡ ಅತಿ ಅವಶ್ಯಕವಾಗಿದೆ, ರಕ್ತದಾನದಿಂದ ಅನೇಕ ರೀತಿಯ ಅನುಕೂಲಗಳು ಕೂಡ ನಮಗೆ ಆಗುತ್ತವೆ ಎಂದರು, ಕಾನೂನು ಮಹಾವಿದ್ಯಾಲಯದಿಂದ 18 ಜನಕ್ಕೂ ಹೆಚ್ಚು ವಿದ್ಯಾರ್ಥಿಗಳು ರಕ್ತದಾನ ಮಾಡಿದರು. ಈ ಸಂದರ್ಭದಲ್ಲಿ ಡಾ. ಕಸ್ತೂರಿ ಡಾಕ್ಟರ್ ಸುಧಾಕರ್ ಡಾಕ್ಟರ್ ಲಿಂಗರಾಜ ಡಾ. ಭಾಗ್ಯಶ್ರೀ ಮತ್ತು ದೇವೇಂದ್ರಪ್ಪ ಹಿಟ್ನಾಳ, ಕಾಲೇಜಿನ ಉಪನ್ಯಾಸಕ ವರ್ಗದವರು ಮುದ್ದು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸುಧಾ ಸಂಗಡಿಗರು ಪ್ರಾರ್ಥನೆ ಗೀತೆ ಹಾಡಿದರು ಸ್ವಾಗತ ಕಾರ್ತಿಕ್ ಕೋರಿದನು, ವಂದನಾರ್ಪಣೆಯನ್ನು ಪ್ರಗತಿ ನೆರವೇರಿಸಿದರು ಮತ್ತು ಕಾರ್ಯಕ್ರಮದ ನಿರೂಪಣೆಯನ್ನು ಅಚ್ಚುಕಟ್ಟಾಗಿ ಹುಲಿಗೆಮ್ಮ ನಡೆಸಿಕೊಟ್ಟರು.

# ಮಹನೀಯರ ಜಯಂತಿ ಅರ್ಥಪೂರ್ಣ ಆಚರಣೆ: ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮಾ.24–ಜಿಲ್ಲಾಡಳಿತದಿಂದ ದೇವರ ದಾಸಿಮಯ್ಯ ಮತ್ತು ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಅವರು ಹೇಳಿದರು.

ಸೋಮವಾರ, ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಮಹನೀಯರ ಜಯಂತಿ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.

ಏ.02 ರಂದು ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮವನ್ನು ನಗರದ ಡಾ.ರಾಜ್ ಕುಮಾರ್ ರಸ್ತೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಾಂಸ್ಕೃತಿಕ ಸಮುಚ್ಚಯ ಸಭಾಂಗಣದಲ್ಲಿ ಮತ್ತು ಏ.10 ರಂದು ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮವನ್ನು ನಗರದ ತೇರುಬೀದಿ ರಸ್ತೆಯ ಮಹಾವೀರ ಜೈನರ ದೇವಸ್ಥಾನದ ಹಾಲ್‌ನಲ್ಲಿ ಅರ್ಥಪೂರ್ಣ ಆಚರಣೆಗೆ ಕ್ರಮ ವಹಿಸಲಾಗುವುದು ಎಂದರು.

ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮ ಅಂಗವಾಗಿ ಮೆರವಣಿಗೆಯು ದೇವಸ್ಥಾನದಿಂದ ಬೆಂಗಳೂರು ರಸ್ತೆ–ಬ್ರಾಹ್ಮೀಣ್ ಸ್ಟ್ರೀಟ್–ಕಾಳಮ್ಮ ಬಜಾರ್ ನಿಂದ ಮರಳಿ ದೇವಸ್ಥಾನದ ವರೆಗೆ ನಡೆಯಲಿದ್ದು, ರಸ್ತೆ ಸಂಚಾರ ಮಾರ್ಗಕ್ಕೆ ವ್ಯವಸ್ಥೆ ಮಾಡಬೇಕು.

ಜಯಂತಿ ಆಚರಣೆ ಸಂದರ್ಭದಲ್ಲಿ ಶಿಷ್ಟಾಚಾರ ಪಾಲನೆ, ಆಹ್ವಾನ ಪತ್ರಿಕೆ, ವಿಶೇಷ ಉಪನ್ಯಾಸ, ವಚನ ಗಾಯನ ಸೇರಿದಂತೆ ಎಲ್ಲವೂ ಸರಿಯಾಗಿ ನಿರ್ವಹಿಸಬೇಕು. ಅದೇ ರೀತಿ ವೇದಿಕೆ, ಕುಡಿಯುವ ನೀರು, ಸ್ವಚ್ಛತೆ ಕಾರ್ಯ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು.

ಮಹನೀಯರ ವಿಚಾರಧಾರೆಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ನುರಿತ ಉಪನ್ಯಾಸಕರಿಂದ ವಿಶೇಷ ಉಪನ್ಯಾಸ ಆಯೋಜಿಸಲಾಗುವುದು ಎಂದರು.

ಜಯಂತಿ ಮೆರವಣಿಗೆಯಲ್ಲಿ ಸಾಂಸ್ಕೃತಿಕ ಕಲಾತಂಡಗಳನ್ನು ನಿಯೋಜಿಸಲಾಗುವುದು. ಜಯಂತಿ ಕಾರ್ಯಕ್ರಮಗಳಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ತಪ್ಪದೇ ಹಾಜರಿರಬೇಕು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಸೂಚಿಸಿದರು.

ಸಭೆಯಲ್ಲಿ ವಿವಿಧ ಸಮುದಾಯದ ಮುಖಂಡರು, ಜನಪ್ರತಿನಿಧಿಗಳು ಜಯಂತಿಗಳ ಆಚರಣೆಯ ಕುರಿತು ತಮ್ಮ ಸಲಹೆ–ಸೂಚನೆ ನೀಡಿದರು.

ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಸಮುದಾಯದ ಮುಖಂಡರು, ಜನ ಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಆಕ್ಷೇಪಣೆ ಅರ್ಜಿಗೆ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಮಾರ್ಚ್ 24, : ಪಟ್ಟಣ ಕ್ರಾಸ್‌ದಿಂದ ನಾರಾಯಣಪೂರ ಡ್ಯಾಂ ರಸ್ತೆ ಎಸ್.ಹೆಚ್155 ರಸ್ತೆಗೆ ಹೊಂದಿಕೊಂಡಿರುವ ಮರಗಳ ವಿಲೇಯ ಆಕ್ಷೇಪಣೆ ಅರ್ಜಿಗೆ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಪ್ರಾದೇಶಿಕ ಅರಣ್ಯ ವಿಭಾಗ ಉಪ ಅರಣ್ಯ ಸಂರಕ್ಷಣಾಧಿಕಾರಿ ಅವರು ತಿಳಿಸಿದ್ದಾರೆ.

2025ರ ಮಾರ್ಚ್ 27ರ ಗುರುವಾರ ರಂದು ಬೆಳಿಗ್ಗೆ 11.30 ಗಂಟೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ತಾಂತ್ರಿಕ ಸಹಾಯಕ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ಅರಣ್ಯ ಉಪ ವಿಭಾಗ, ಯಾದಗಿರಿ ಕಛೇರಿಯಲ್ಲಿ ಕರೆಯಲಾಗಿದೆ. ಸುರಪುರ ಪ್ರಾದೇಶಿಕ ಅರಣ್ಯ ವಲಯ ವ್ಯಾಪ್ತಿಯ ಪಟ್ಟಣ ಕ್ರಾಸ್‌ದಿಂದ ನಾರಾಯಣಪೂರ ಡ್ಯಾಂ ರಾಜ್ಯ ಹೆದ್ದಾರಿ ಎಸ್.ಹೆಚ್ 155ರ ರಸ್ತೆಯು ಹುಣಸಗಿ ಪಟ್ಟಣದ ಬಸವೇಶ್ವರ ವೃತ್ತದಿಂದ 1 ಕಿ.ಮೀ ರಸ್ತೆ ವ್ಯಾಪ್ತಿಯ ರಸ್ತೆ ಅಗಲೀಕರಣಕ್ಕೆ ಅಡಚಣೆಯಾಗಿರುವ ಎಡ ಮತ್ತು ಬಲಬದಿಯ ಒಟ್ಟು 70 ವಿವಿಧ ಜಾತಿಯ ಮರಗಳನ್ನು ತೆರವುಗೊಳಿಸುವ ಸಂಬಂಧ ಅಂದು ಸಾರ್ವಜನಿಕ ಅಹವಾಲು ಸಭೆಯನ್ನು ಈ ಮರಗಳ ತೆರವಿಗೆ ಸಂಬಂಧಿಸಿದಂತೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಸಭೆಗೆ ಹಾಜರಾಗಿ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಲಿಖಿತವಾಗಿ ಸಲ್ಲಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಹಿಳೆಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ಅಗತ್ಯ. ಅಶೋಕ ನಾಸಿ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.24-ಮಹಿಳೆಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ಅಗತ್ಯವಾಗಿದೆ ಎಂದು ಬೆಂಗಳೂರಿನ ಉನ್ನತಿ ಫೌಂಡೇಶನ ತರಬೇತಿದಾರ ಅಶೋಕ ನಾಸಿ ಹೇಳಿದರು.

ನಗರದ ಬಿ.ವಿ.ವಿ.ಸಂಘದ ಅಕ್ಕಮಹಾದೇವಿ ಮಹಿಳಾ ಕಲಾ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗ ಘಟಕಗಳ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಕೌಶಲ್ಯಾಭಿವೃದ್ಧಿ ತರಬೇತಿಯ ಮುಕ್ತಾಯ ಸಮಾರಂಭದಲ್ಲಿ ಅವರು ಮಾತನಾಡಿದರು.

ಬದುಕಿನಲ್ಲಿ ಏನನ್ನಾದರೂ ಹೊಸತನ ಕಲಿಯಲು ಕೌಶಲ್ಯಗಳು ಬಹು ಮುಖ್ಯ. ಅವುಗಳಲ್ಲಿ ಮೃದು ಕೌಶಲ್ಯ, ಸಂವಹನ ಕೌಶಲ್ಯ, ಪ್ರಸ್ತುತಿ ಕೌಶಲ್ಯ ಮತ್ತು ಉದ್ಯೋಗ ಕೌಶಲ್ಯಗಳನ್ನು ವಿದ್ಯಾರ್ಥಿನಿಯರು ಅಳವಡಿಸಿಕೊಳ್ಳುವದರ ಮೂಲಕ ಆತ್ಮಸ್ಥೈರ್ಯವನ್ನು ಹೆಚ್ಚಿಸಿಕೊಂಡು ಸ್ವಾವಲಂಬಿ ಜೀವನ ತಮ್ಮದಾಗಿಸಿಕೊಳ್ಳಬೇಕು ಎಂದು ನಾಶಿ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯೆ ಎಸ್.ಜೆ.ಒಡೆಯರ ಮಾತನಾಡಿ, ವ್ಯಕ್ತಿತ್ವ ವಿಕಸಿತಗೊಳಿಸಲು ಸಹಾಯಕವಾಗುವ ಎಲ್ಲ ಕೌಶಲ್ಯಗಳನ್ನು ಅರಿತುಕೊಳ್ಳಬೇಕು. ಮಾನವೀಯ ಮೌಲ್ಯಗಳನ್ನು ಉಳಿಸಿಕೊಂಡು ಸದಾ ಕ್ರಿಯಾಶೀಲರಾಗಿರಬೇಕು. ವಹಿಸಿದ ಕಾರ್ಯವನ್ನು ಮನಸಾ ಪೂರ್ವಕವಾಗಿ ಮಾಡುವುದರಿಂದ ತೃಪ್ತಿಯ ಜೊತೆಗೆ ಹೆಚ್ಚು ಯಶಸ್ಸನ್ನು ತಂದುಕೊಡುತ್ತದೆ ಎಂದರು.

ಐಕ್ಯೂಎಸಿ ಸಂಯೋಜಕ ಪಿ.ಕೆ. ಚೌಗುಲಾ ಹಾಗೂ ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗ ಘಟಕದ ಸಂಯೋಜಕಿ ಸೀಮಾ ಚಾವುಸ್ ಉಪಸ್ಥಿತರಿದ್ದರು. ಅಕ್ಷತಾ ಬುಗುಡಿ ಪ್ರಾರ್ಥಿಸಿದರು. ದಾಕ್ಷಾಯಿಣಿ ಬೊಮ್ಮಣ್ಣವರ ಸ್ವಾಗತಿಸಿದರು. ಭಾಗ್ಯ ಜೋಗಿ ವಂದಿಸಿದರು. ಮೇಘನಾ ಮಲಗಾಣ ಹಾಗೂ ಪ್ರಿಯಾ ಹಳಿಂಗಳಿ ನಿರೂಪಿಸಿದರು.

6ನೇ ಸೆಮಿಸ್ಟರ್ ಬಿಕಾಂ ವಿದ್ಯಾರ್ಥಿನಿಯರಿಗೆ ಉನ್ನತಿ ಫೌಂಡೇಶನ್ ಬೆಂಗಳೂರು ವತಿಯಿಂದ 30 ದಿನಗಳ ಪೂರ್ವ ಉದ್ಯೋಗ ತರಬೇತಿಯನ್ನು ನೀಡಿ, ವಿದ್ಯಾರ್ಥಿನಿಯರಿಗೆ ಪ್ರಮಾಣ ಪತ್ರ ಕೊಡಲಾಯಿತು.

# ಬಾಗಲಕೋಟೆ:ಆರೋಗ್ಯ ಅರಿವು ಕಾರ್ಯಕ್ರಮ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.24-ನಗರದ ಬಿ.ವ್ಹಿ.ವ್ಹಿ. ಸಂಘದ ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯದ ಆಸ್ಪತ್ರೆಯಲ್ಲಿ ಎನ್.ಎಸ್.ಎಸ್.ಘಟಕದ ಅಡಿಯಲ್ಲಿ ಬಾಯಿ ಕಾನ್ಸರ ಕುರಿತು ಆರೋಗ್ಯ ಅರಿವು ಕಾರ್ಯಕ್ರಮ ಹಾಗೂ ಉಚಿತ ದಂತ ತಪಾಸಣೆ ಶಿಬಿರ ಆಯೋಜಿಸಲಾಗಿತ್ತು.

ಪಿ.ಎಮ್.ಎನ್.ಎಮ್. ಡೆಂಟಲ್ ಕಾಲೇಜಿನ ಪ್ರಾಧ್ಯಾಪಕ ಡಾ.ಮಹೇಶ ಹಿರೇಗೌಡರ ರೋಗ ಲಕ್ಷಣ, ಪತ್ತೆ ಹಚ್ಚುವ ಕ್ರಮ, ಚಿಕಿತ್ಸಾ ಕ್ರಮ ಕುರಿತು ಉಪನ್ಯಾಸ ನೀಡಿ, ಬಾಯಿ ಕ್ಯಾನ್ಸರ್ ಉಂಟಾಗುವುದಕ್ಕೆ ಕಾರಣವಾಗುವ ಅತಿದೊಡ್ಡ ಅಪಾಯಾಂಶಗಳು ಎಂದರೆ ತಂಬಾಕು ಸೇವನೆ ಮತ್ತು ಧೂಮಪಾನವಾಗಿದೆ ಎಂದರು. ಬಾಯಿ ಕ್ಯಾನ್ಸರ ಇತ್ತಿತ್ತಲಾಗಿ ಸಾಮಾಜಿಕ ಪಿಡುಗಾಗಿ ಪರಿಣಮಿಸಿದೆ. ಈ ಹಿನ್ನೆಲೆಯಲ್ಲಿ ತಂಬಾಕು ವ್ಯಸನಗಳನ್ನು ತ್ಯಜಿಸಿ ಕುಟುಂಬಗಳನ್ನು ಸಂರಕ್ಷಿಸುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಸಮುದಾಯ ಆರೋಗ್ಯದ ಮುಖ್ಯಸ್ಥೆ ಡಾ.ಆಖಿಲಾ ಹಲ್ಲೂರ ಸ್ವಾಗತಿಸಿದರು. ವೈದ್ಯಾಧಿಕಾರಿ ಡಾ.ಮೇಘಾ ತಳವಾರ ವಂದಿಸಿದರು. ಪ್ರಾಧ್ಯಾಪಕರುಗಳಾದ ಡಾ.ರವಿ. ಎಸ್.ಕೋಟೆಣ್ಣವರ.ಡಾ.ಸುಧೀರ ಬೆಟಗೇರಿ. ಡಾ.ಅಮರೇಶ ಬಳಗಾನೂರ.ಡಾ.ವಿ.ಎಸ್.ಸಂಕೇಶ್ವರಿ ಉಪಸ್ಥಿತರಿದ್ದರು.

ಪಿ.ಎಮ್.ಎನ್.ಎಮ್ ದಂತ ಮಹಾವಿದ್ಯಾಲಯದ ವೈದ್ಯರು, ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳು ಭಾಗವಹಿಸಿ ಉಚಿತವಾಗಿ ದಂತ ತಪಾಸಣೆ ಮಾಡಿದರು.

# ಧಾರ್ಮಿಕ ಆಚರಣಾ ಪದ್ಧತಿಗಳಿಂದ ವಿಮುಖರಾಗದಿರಿ-ಪ್ರಭು ಸ್ವಾಮೀಜಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.24-ನಮ್ಮ ಪೂರ್ವಜರು ನಡೆಸಿಕೊಂಡು ಬಂದಿರುವ ಧಾರ್ಮಿಕ ಆಚರಣೆ ಪದ್ಧತಿಯಿಂದ ಇಂದು ನಾವುಗಳು ವಿಮುಖರಾಗುತ್ತಿದ್ದೇವೆ. ಮನಸ್ಸಿನ ಭಾವನೆಗಳು ಚಂಚಲತೆಯಲ್ಲಿ ಮುಳುಗಿ ಹೋಗಿವೆ. ಏಕಾಗ್ರತೆ, ದೃಢವಾಡ ಗುರಿ ಹೊಂದಲು. ನಮ್ಮೊಳಗಿನ ನೆಮ್ಮದಿ, ಸಂತೋಷಕ್ಕಾಗಿ ಸಂಸ್ಕಾರ ರೂಢಿಸಿಕೊಳ್ಳಬೇಕು ಎಂದು ಚರಂತಿಮಠದ ಪ್ರಭು ಸ್ವಾಮಿಗಳು ಹೇಳಿದರು.

ನಗರದ ಚರಂತಿಮಠದ ಶಿವಾನುಭವ ಮಂಟಪದಲ್ಲಿ ಕರ್ನಾಟಕ ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘದ ಬಾಗಲಕೋಟೆ ತಾಲೂಕಾ ಯುವ ಘಟಕ, ಮಹಿಳಾ ಘಟಕ ನೇತೃತ್ವದಲ್ಲಿ ರವಿವಾರ ಲಿಂಗದೀಕ್ಷೆ, ಲಿಂಗಪೂಜೆ ಹಾಗೂ ಮಹಿಳಾ ದಿನಾಚರಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ವಿನಯತೆ, ಸಾತ್ವಿಕ ಜೀವನ, ಸಂಸ್ಕಾರ ಬರಬೇಕು ಅಂ-ದರೆ ಹಿರಿಯರ ಪಾತ್ರ ಬಹು ಮುಖ್ಯವಾಗಿದೆ. ಬೇರೆ ಬೇರೆ ಧರ್ಮದಲ್ಲಿ ತಮ್ಮ ಮಕ್ಕಳಿಗೆ ಧಾರ್ಮಿಕ ಆಚರಣೆ, ಪೂಜೆ, ಪದ್ಧತಿ ತಿಳಿಸಿಕೊಡಲು ಬೇಸಿಗೆ ಸಂದರ್ಭದಲ್ಲಿ, ಹಬ್ಬ ಹರಿದಿನಗಳಲ್ಲಿ ತರಬೇತಿ ನೀಡಲಾಗುತ್ತದೆ. ತಿಂಗಳುಗಟ್ಟಲೆ ಶಿಬಿರ ಏರ್ಪಡಿಸಲಾಗುತ್ತದೆ ಎಂದು ಪೂಜ್ಯರು ಹೇಳಿದರು.

ಲಿಂಗಾಯತರಲ್ಲಿ ಇಂತಹ ಚಟುವಟಿಕೆಗಳು ಕ್ಷೀಣಿಸಿವೆ. ದಿನದಿಂದ ದಿನಕ್ಕೆ ಶಿಥಿಲಗೊಳ್ಳುತ್ತಿವೆ. ಸದ್ಯ ಬಾಗಲಕೋಟೆ ನಗರದಲ್ಲಿ ಏರ್ಪಡಿಸಿರುವ ಲಿಂಗದೀಕ್ಷೆ, ಲಿಂಗಪೂಜೆ ಅಗತ್ಯವಾಗಿ ಬೇಕಿದೆ. ಮುಂದಿನ ದಿನಗಳಲ್ಲಿ ಈ ರೀತಿ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯುವಂತಾಗಬೇಕು. ರಾಜ್ಯದೆಲ್ಲೆಡೆ ಪಸರಿಸುವಂತಾಗಬೇಕು ಎಂದರು.

ಇಳಕಲ್ಲ ವಿಜಯ ಮಹಾಂತ ಮಠದ ಗುರುಮಹಾಂತಸ್ವಾಮೀಜಿ, ಶಿರೂರ ಮಹಾಂತ ತೀರ್ಥದ ಬಸವಲಿಂಗಸ್ವಾಮೀಜಿ ನೇತೃತ್ವದಲ್ಲಿ 300 ಕ್ಕೂ ಹೆಚ್ಚು ಮಕ್ಕಳು, ಮಹಿಳೆಯರಿಗೆ ಪೂಜಾ ಕೈಂಕರ್ಯ, ಲಿಂಗದೀಕ್ಷೆ, ಲಿಂಗಪೂಜೆ ಬಗ್ಗೆ ಲಿಂಗಾಯತ ಪದ್ಧತಿ ಪ್ರಕಾರ ಮಾರ್ಗದರ್ಶನ ಮಾಡಲಾಯಿತು.

ಬಾಗಲಕೋಟೆ ತಾಲೂಕು ಬಣಜಿಗ ಮಹಿಳಾ ಘಟಕದ ಅಧ್ಯಕ್ಷೆ ಮೇಘಾ ಜಿಗಜಿನ್ನಿ, ನಮ್ಮ ದೇಶದಲ್ಲಿ ಮಹಿಳಾ ಕುಲಕ್ಕೆ ವಿಶೇಷ ಗೌರವ, ಸ್ಥಾನ ಮಾನವಿದೆ. ಇಂದು ಅನೇಕ ಕ್ಷೇತ್ರದಲ್ಲಿ ಮಹಿಳೆಯರು ತಮ್ಮ ಛಾಪು ಮೂಡಿಸಿದ್ದಾರೆ. ಆದರೆ ನಮ್ಮ ಸಂಸ್ಕೃತಿ, ಧಾರ್ಮಿಕ ಆಚರಣೆಯಿಂದ ದೂರ ಸರಿಯುತ್ತಿರುವುದು ನೋವು ಉಂಟು ಮಾಡಿದೆ. ಇದಕ್ಕೆ ಅವಕಾಶ ನೀಡದೇ ಲಿಂಗಪೂಜೆ ನಿತ್ಯವು ಮಾಡಬೇಕು. ಮಕ್ಕಳಿಗೆ ಅದರ ಮಹತ್ವ ತಿಳಿಸಿ ಹೇಳಬೇಕು. ವಚನಗಳ ಪಠಣ ಮಾಡುವುದನ್ನು ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಣಜಿಗ ಸಮಾಜ ಜಿಲ್ಲಾ ಘಟಕದ ಅಧ್ಯಕ್ಷ ಶರಣಪ್ಪಣ್ಣ ಗುಳೇದ, ಗೌರವಾಧ್ಯಕ್ಷೆ ಶಂಕ್ರಮ್ಮ ಮುಚ್ಚಂಡಿ ಮಾತನಾಡಿದರು. ಇದೇ ವೇಳೆ ಇತ್ತೀಚಿಗೆ ಕೇಂದ್ರ ಸರ್ಕಾರದಿಂದ ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿಗೆ ಅಧ್ಯಕ್ಷರಾಗಿ ನೇಮಕಗೊಂಡಿರುವ ನ್ಯಾಯವಾದಿ ಎಸ್.ಎಸ್.ಮಿಟ್ಟಲಕೂಡ, ಯುವ ಸಾಹಿತಿ ಜಾನವಿ ವಾಲಿ ಹಾಗೂ ಅಗ್ನಿವೀರರಾಗಿ ನೌಕಾಪಡೆಗೆ ಸೇರ್ಪಡೆಗೊಂಡಿರುವ ಸಹನಾ ಅಂಗಡಿ ಹಾಗೂ ಸಮಾಜದ ಪತ್ರಕರ್ತರನ್ನು ಸನ್ಮಾನಿಸಲಾಯಿತು.

ತಾಲೂಕ ಅಧ್ಯಕ್ಷ ಬಸವರಾಜ ಶೀಲವಂತರ, ಯುವ ಘಟಕದ ಅಧ್ಯಕ್ಷ ವಿನಯ ನಾವಲಗಿ, ಉಪಾಧ್ಯಕ್ಷ ಸಂಗಮೇಶ ಅಂಗಡಿ, ಕಾರ್ಯದರ್ಶಿ ಮಹಾಂತೇಶ ಜೋಳದ, ಮಹಿಳಾ ಘಟಕದ ಕಾರ್ಯದರ್ಶಿ ಶಿವಲೀಲಾ ಪಟ್ಟಣಶೆಟ್ಟಿ ಉಪಸ್ಥಿತರಿದ್ದರು.

ಮಹಿಳೆಯರಿಗೆ ಜಾನಪದ ಸಂಗೀತ ನೃತ್ಯ, ವಚನ ಗಾಯನ, ಮಕ್ಕಳಿಗೆ ಚಿತ್ರ ಬಿಡಿಸುವ ಸ್ಪರ್ಧೆ ಮತ್ತಿತರ ಕಾರ್ಯಕ್ರಮ ಜರುಗಿದವು. ಶಾರದಾದೇವನಗಾವಿ ಸ್ವಾಗತಿಸಿದರು, ಚೈತ್ರಾ ಕುಮಟಗಿ ಪರಿಚಯಿಸಿದರು. ಶೈಲಾ ಗೊಂಗಡಶೆಟ್ಟಿ ಮಾಡಿದರು.

# ಕುಮಾರೇಶ್ವರ ಆಸ್ಪತ್ರೆಯಲ್ಲಿ ಪ್ರೇರಣೆ ಕಚೇರಿ ಉದ್ಘಾಟನೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.24-ನಗರದ ಬಿ.ವ್ಹಿ.ವ್ಹಿ ಸಂಘದ ಎಸ್ ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದ ಹಾನಗಲ್ಲಶ್ರೀ ಕುಮಾರೇಶ್ವರ ಆಸ್ಪತ್ರೆಯ ಚಿಕ್ಕಮಕ್ಕಳ ವಿಭಾಗದಲ್ಲಿ ನೂತನವಾಗಿ ಪ್ರೇರಣೆ (ಪೀಡಿಯಾಟ್ರಿಕ್ ರಿಸಸಿಟೇಶನ್ ಎಂಡ್ ಎಮರ್ಜನ್ಸಿ ರಿಸರ್ಚ ನೆಟ್ವರ್ಕ್ ಇಂಡಿಯಾ) ಕಛೇರಿ ಹಾಗೂ ಸ್ಕಿಲ್ ಲ್ಯಾಬ್ ಅನಾವರಣ ಕಾರ್ಯಕ್ರಮ ಜರುಗಿತು.

ಪ್ರೇರಣಿ ಚೇರಪರ್ಸನ್ ಡಾ.ಜಯಶ್ರೀ ಮತ್ತು ಕೋ-ಚೇರಪರ್ಸನ್ ಡಾ.ಇಂಧುಮತಿ ಸಂತಾನಮ್ ಕಾರ್ಯಕ್ರಮ ಉದ್ಘಾಟಿಸಿದರು. ಡಾ.ಜಯಶ್ರೀ ಮಾತನಾಡಿ, ಭಾರತದ ಚಿಕ್ಕಮಕ್ಕಳ ಪುನಃಶ್ಚೇತನ ಮತ್ತು ತುರ್ತು ಸಂಶೋಧನಾ ನೆಟವರ್ಕ ಭಾರತದಲ್ಲಿ ರೂಪುಗೊಂಡ ಹೊಸ ರಾಷ್ಟ್ರೀಯ ಮಕ್ಕಳ ತುರ್ತು ವೈದ್ಯಕೀಯ (ಕಇಬ) ಸಂಶೋಧನಾ ಜಾಲವಾಗಿದೆ ಎಂದರು.

ಈ ಜಾಲವು ಭಾರತದಲ್ಲಿ ಮಕ್ಕಳ ತುರ್ತು ವೈದ್ಯಕೀಯ ಕ್ಷೇತ್ರದಲ್ಲಿ ಸಹಯೋಗ ಮತ್ತು ಸಂಶೋಧನೆಯನ್ನು ಸುಗಮಗೊಳಿಸುವ ಗುರಿಯನ್ನು ಹೊಂದಿದೆ. ಇದೊಂದು ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸುವ ಸಂಶೋಧನಾ ನೋಂದಾಯಿತ ಸಂಸ್ಥೆಯಾಗಿದ್ದು, ಅಂತರಾಷ್ಟ್ರೀಯ ಸಂಶೋಧನೆಯ ಸಂಘದ ಮಾರ್ಗದರ್ಶನದಲ್ಲಿ ಸಂಶೋಧಕ ಸಂಸ್ಥೆಗಳೊಂದಿಗೆ ಸಂಶೋಧನೆಯಲ್ಲಿ ತೊಡಗಿದೆ ಎಂದು ಡಾ.ಜಯಶ್ರೀ ಹೇಳಿದರು.

ಡಾ.ಇಂದುಮತಿ ಸಂತಾನಮ್ ಮಾತನಾಡಿ, ದೇಶದ ವಿವಿಧ ಮೆಡಿಕಲ್ ಕಾಲೇಜಿನ ಆಸ್ಪತ್ರೆಗಳಲ್ಲಿ ಚಿಕ್ಕಮಕ್ಕಳ ವಿಭಾಗದ ತಜ್ಞವೈದ್ಯರುಗಳು ಈ ಸಂಶೋಧನೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುತ್ತಿರುವುದು ನಿಜಕ್ಕೂ ಸಂತಸದ ವಿಷಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬ.ವಿ.ವಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ಮಾತನಾಡಿ, ಬಿ.ವಿ.ವಿ ಸಂಘದಡಿಯಲ್ಲಿ ಹಾನಗಲ್ಲ ಕುಮಾರೇಶ್ವರ ಆಸ್ಪತ್ರೆಯಲ್ಲಿ ಚಿಕ್ಕಮಕ್ಕಳ ಇಂತಹ ಸಂಶೋಧನಾ ನೆಟವರ್ಕ ಸ್ಥಾಪಿಸಿದ್ದು ನಿಜಕ್ಕೂ ಒಂದು ಹೊಸ ಮೈಲಿಗಲ್ಲು. ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಸಂಶೋಧನೆಗೆ ನಮ್ಮ ಆಸ್ಪತ್ರೆಯೂ ಕೈ ಜೋಡಿಸುತ್ತಿರುವುದು ತುಂಬಾ ಹೆಮ್ಮೆಯ ವಿಷಯ. ಮುಂಬರುವ ದಿನಗಳಲ್ಲಿ ಹೆಚ್ಚಿನ ಸಂಶೋಧನೆಗಳಿಗೆ ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ದೇಶದ ಪ್ರೇರಣೆ ಜಾಲ ಸ್ಥಾಪಿಸಿದ ಬಾಗಲಕೋಟೆಯ ಎಸ್.ಎನ್.ಮೆಡಿಕಲ್ ಕಾಲೇಜು, ವಿಜಯಪುರದ ಬಿ.ಎಲ್.ಡಿ.ಇ, ರಾಯಚೂರಿನ ನವೋದಯ, ಚಂಡಿಗಡದ ಪಿ.ಜಿ.ಐ ಹಾಗೂ ಚೆನ್ನೈನ ಮೆಹೆತಾ ಚಿಲ್ಡ್ರನ್ ಇನ್ಸಟ್ಯೂಟ್ ಕಾಲೇಜುಗಳ ಸಂಶೋಧನೆಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು.

ಬಿ.ವಿ.ವಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ (ಬೇವೂರ), ಎಸ್.ಎನ್.ಮೆಡಿಕಲ್ ಕಾಲೇಜಿನ ಪ್ರಾಚಾರ್ಯರಾದ ಡಾ.ಭುವನೇಶ್ವರಿ ಯಳಮಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ, ಸ್ಥಳೀಯ ಚಿಕ್ಕಮಕ್ಕಳ ವೈದ್ಯ ಡಾ.ಆರ್.ಟಿ.ಪಾಟೀಲ್, ಪ್ರಸೂತಿ ಮತ್ತು ಚಿಕ್ಕಮಕ್ಕಳ ವಿಭಾಗದ ತಜ್ಞವೈದ್ಯರೊಂದಿಗೆ ವಿವಿಧ ವಿಭಾಗಗಳ ಮುಖ್ಯಸ್ಥರು, ವೈದ್ಯ ಪ್ರಮುಖರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಚಿಕ್ಕಮಕ್ಕಳ ವಿಭಾಗದ ಮುಖ್ಯಸ್ಥ ಡಾ.ಅಶೋಕ ಬಡಕಲಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಶೋಧನೆ ಕುರಿತು ಡಾ.ರಾಘವೇಂದ್ರ ವನಕಿ ಮಾತನಾಡಿದರು. ಡಾ.ಪಲ್ಲವಿ ಚರಂತಿಮಠ ಪರಿಚಯಿಸಿದರು. ಡಾ.ರಮೇಶ ನೀಲಣ್ಣವರ ವಂದಿಸಿದರು.

## ರಾಜ್ಯಸಭಾ ಸದಸ್ಯ ಭಾಂಡಗೆ ಆರೋಪ ಶಿವಾಜಿ ಮೂರ್ತಿ ಪ್ರತಿಷ್ಠಾಪನೆಗೆ ವಿರೋಧ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.24-ಬಾಗಲಕೋಟೆ ನಗರದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಮೂರ್ತಿ ಪ್ರತಿಷ್ಠಾಪನೆ ಮಾಡಲು ಕರ್ನಾಟಕದ ಕಾಂಗ್ರೆಸ್ ಸರ್ಕಾರ ಅವಕಾಶ ನೀಡುತ್ತಿಲ್ಲ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಆರೋಪ ಮಾಡಿದ್ದಾರೆ.

ನವದೆಹಲಿಯಲ್ಲಿ ಸೋಮವಾರ ಮಾಧ್ಯಮದವರ ಜೊತೆ ಮಾತನಾಡಿ, ಎರಡು ವರ್ಷಗಳಿಂದ ಶಿವಾಜಿ ಮಹಾರಾಜರ ಮೂರ್ತಿ ಪ್ರತಿಷ್ಠಾಪನೆಗೆ ಸರಕಾರ ವಿರೋಧ ಮಾಡುತ್ತಾ ಬಂದಿದೆ ಎಂದು ಹೇಳಿದರು.

50 ಲಕ್ಷ ರೂ.ಗಳ ವೆಚ್ಚದಲ್ಲಿ ಶಿವಾಜಿ ಮಹಾರಾಜರ ಕಂಚಿನ ಪುತ್ಥಳಿ ನಿರ್ಮಿಸಲಾಗಿದ್ದು ಅದನ್ನು ಅನಾವರಣಗೊಸಲು ಸರ್ಕಾರ ಅಡಚಣೆ ಮಾಡುತ್ತಿದೆ. ಈ ಬಗ್ಗೆ ಹಲವು ಬಾರಿ ಸರ್ಕಾರ-ಕ್ಕೆ ಮನವಿ ಮಾಡಲಾಗಿದೆ. ಪ್ರತಿಭಟನೆಯನ್ನೂ ಸಹ ಮಾಡಲಾಗಿದೆ ಎಂದ ಭಾಂಡಗೆ, ಮುಸ್ಲಿಂಮರ ತುಷ್ಠೀಕರಣವೊಂದೇ ಕಾಂಗ್ರೆಸ್ಸಿಗರ ಅಜೆಂಡಾ ಆಗಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ದೇಶ ವಿಭಜನೆಗೆ ಮುಂದಾಗಿದ್ದು ಇದನ್ನು ಬಿಜೆಪಿ ತೀವ್ರವಾಗಿ ಖಂಡಿಸುತ್ತದೆ ಎಂದ ನಾರಾಯಣಸಾ ಭಾಂಡಗೆ, ಮುಸ್ಲಿಂಮರಿಗೆ ಕಾಮಗಾರಿ ಗುತ್ತಿಗೆಯಲ್ಲಿ ಶೇ.4 ರಷ್ಟು ಮೀಸಲಾತಿ ನೀಡುವುದಕ್ಕೆ ಬಿಲ್ ಪಾಸ್ ಮಾಡಿಕೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಮುಸ್ಲಿಂಮರ ಓಲೈಕೆಯಲ್ಲಿ ತೆ-ಊಡಗಿದ್ದಾರೆ ಎಂದು ದೂರಿದರು.

## 6ನೇ ತರಗತಿಗೆ ಪ್ರವೇಶಾತಿಗೆ ಅರ್ಜಿ ಅವಧಿ ಏ.10ರವರೆಗೆ ವಿಸ್ತರಣೆ

ಮಲ್ಲಮ್ಮ ನುಡಿ ವಾರ್ತೆ


ರಾಯಚೂರು ಮಾ.24-ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ 2025-26ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ವಿವಿಧ ವಸತಿ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆ ಅವಧಿಯನ್ನು ಏಪ್ರೀಲ್ 10ರವರೆಗೆ ವಿಸ್ತರಿಸಲಾಗಿದೆ.

ಜಿಲ್ಲೆಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ರಾಯಚೂರು, ಗಿಲ್ಲೇಸೂಗೂರು, ಮಾನವಿ, ಸಿಂಧನೂರು, ಲಿಂಗಸೂಗೂರು ಹಾಗೂ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಯರಮರಸ್ ಕ್ಯಾಂಪ್ ವಸತಿ ಶಾಲೆ ಮತ್ತು ಡಾ.ಎ.ಪಿ.ಜೆ, ಅಬ್ದುಲ್ ಕಲಾಂ ವಸತಿ ಶಾಲೆ ರಾಯಚೂರು ಇಲ್ಲಿ 6ನೇ ತರಗತಿಯಿಂದ 10ನೇ ತರಗತಿಯವರೆಗೆ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಲು ಅಲ್ಪಸಂಖ್ಯಾತರ ಸಮುದಾಯಕ್ಕೆ ಶೇ.75 ರಷ್ಟು ಸ್ಥಾನಗಳನ್ನು ಮತ್ತು ಶೇ.25ರಷ್ಟು ಸ್ಥಾನಗಳನ್ನು ಇತರೆ ವರ್ಗದವರಿಗೆ ಮೀಸಲಿಡಲಾಗಿದೆ.

ಅಲ್ಪಸಂಖ್ಯಾತರ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ಮಿತಿ 1,00,000 ರೂ. ಮೀತಿಯಲ್ಲಿರಬೇಕು. ಹಾಗೂ ಹಿಂದುಳಿದ ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯವು 2,50,000 ರೂ. ಮಿತಿಯೊಳಗಿರತಕ್ಕದ್ದು, ಪ್ರಸ್ತುತ ಕರ್ನಾಟಕದ ಸರ್ಕಾರದ ಅಥವಾ ಅಂಗೀಕೃತ ಶಾಲೆಗಳಲ್ಲಿ 5ನೇ ತರಗತಿಯಲ್ಲಿ ಉತ್ತೀರ್ಣರಾದ ಅರ್ಹ ವಿದ್ಯಾರ್ಥಿಗಳಿಂದ 6ನೇ ತರಗತಿ ಪ್ರವೇಶಕ್ಕಾಗಿ ಅಲ್ಪಸಂಖ್ಯಾತರ ಸಮುದಾಯದವರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬುದ್ದಿಸ್ಟ್, ಸಿಖ್ ಮತ್ತು ಪಾರ್ಸಿ ಅರ್ಹ ವಿದ್ಯಾರ್ಥಿಗಳು ಮತ್ತು ಪ್ರ.ಜಾತಿ/ಪ.ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳು ಆನ್‌ಲೈನ್ ಸೇವಾಸಿಂಧು:website:https://sevasindhuservices.karnataka.gov.in ಮೂಲಕ ಅರ್ಜಿಗಳನ್ನು ಏಪ್ರೀಲ್ 10ರ ಸಂಜೆ 5.30ಗಂಟೆಯೊಳಗಾಗಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ:ಅಲ್ಪಸಂಖ್ಯಾತರ ಸಹಾಯವಾಣಿ 8277799990, 08022535902, ರಾಯಚೂರು; 8496098631, 9731028420, 9731341815, 9686853719, 6361866571, 9108175899, 9902906266, ಮಾನವಿ, ಸಿರವಾರ: 7411771075, 886733478, ದೇವದುರ್ಗ: 9731794252, 9148233616, ಲಿಂಗಸೂಗೂರು, ಮಸ್ಕಿ, ಸಿಂಧನೂರು: 8217621732, 9740871306, 8660879712ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಮತಗಿ ಹೊಳೆ ಹುಚ್ಚೇಶ್ವರ ಶ್ರೀಗಳ ನುಡಿ ಜನರ ನೆನಪಿನಲ್ಲಿ ಉಳಿಯುವ ಸಾಧನೆಯೇ ಬದುಕು



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.24-ವ್ಯಕ್ತಿ ಜೀವಿಸುವುದು ಬೇರೆ, ಬದುಕುವುದು ಬೇರೆ. ನಿಧನದ ನಂತರವೂ ಜನರ ನೆನಪಿನಲ್ಲಿ ಉಳಿಯುವ ಸಾಧನೆಯೇ ಬದುಕು. ಬಹಳಷ್ಟು ಜನರು ಜೀವಿಸುತ್ತಾರೆ. ಕೆಲವರೇ ಬದುಕುತ್ತಾರೆ. ನಾಯನೇಗಲಿ ಅವರು ಬದುಕಿನ ಜೀವನ ನಡೆಸಿದ್ದಾರೆ ಎಂದು ಕಮತಗಿ ಕೋಟೆಕಲ್ ಹೊಳೆಹುಚ್ಚೇಶ್ವರ ಸಂಸ್ಥಾನ ಮಠದ ಹುಚ್ಚೇಶ್ವರ ಸ್ವಾಮೀಜಿ ಹೇಳಿದರು.

ವಿದ್ಯಾಗಿರಿಯ ಸಾಯಿ ಮಂದಿರ ಸಭಾಭವನದಲ್ಲಿ ನಡೆದ ಪ್ರೊ.ಆರ್.ಎಂ.ನಾಯನೇಗಲಿ ಅವರ 'ಬದುಕಿನ ಪಯಣದಲಿ ವೃತ್ತಿಯ ಸೊಗಡು' ಪುಸ್ತಕ ಬಿಡುಗಡೆ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಯೋಗ್ಯ ಶಿಕ್ಷಕರಿದ್ದರೆ ಶಿಕ್ಷಣ ಕ್ಷೇತ್ರ ಹಾಗೂ ವಿದ್ಯಾರ್ಥಿ ವೃಂದಕ್ಕೆ ಬಹುದೊಡ್ಡ ಲಾಭವಾಗುತ್ತದೆ. ನಾಯನೇಗಲಿ ಅವರು ಅದಕ್ಕೆ ಉತ್ತಮ ಉದಾಹರಣೆಯಾಗಿದ್ದಾರೆ. ಭವಿಷ್ಯದ ಸಮಾಜದ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಬಹಳ ದೊಡ್ಡದು ಎಂದರು. ಗುರು-ಶಿಷ್ಯರ ಸಂಬಂಧಕ್ಕೆ ದೊಡ್ಡ ಪರಂಪರೆಯೇ ಇದೆ. ಅದು ಎಂದೆಂದಿಗೂ ಬಿಡಿಸದ ಬಂಧವಾಗಿದೆ. ನಾಯನೇಗಲಿ ಅವರನ್ನು ನಿವೃತ್ತಿಯ 20 ವರ್ಷಗಳ ನಂತರವೂ ಶಿಷ್ಯರು ನೆನಪಿಸಿಕೊಂಡಿರುವುದೇ ಇದಕ್ಕೆ ಸಾಕ್ಷಿ ಎಂದು ಶ್ರೀಗಳು ಹೇಳಿದರು.

ಮುಖ್ಯ ಅತಿಥಿಯಾಗಿದ್ದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಜಿ.ಎನ್.ಪಾಟೀಲ ಮಾತನಾಡಿ, ನಾಯನೇಗಲಿ ಅವರು ಮಾದರಿ ಶಿಕ್ಷಕರಾಗಿದ್ದಾರೆ ಎಂದರು. ಕೃತಿ ರಚನೆಕಾರ ಪ್ರೊ.ಆರ್.ಎಂ.ನಾಯನೇಗಲಿ ಮಾತನಾಡಿ, ವೃತ್ತಿ ಯಾವುದೇ ಇರಲಿ ನಿಷ್ಠೆಯಿಂದ ಮಾಡಬೇಕು. ಆಗ ಸಲ್ಲಬೇಕಾದ ಗೌರವ ಸಲ್ಲುತ್ತದೆ. ವಿಳಂಬವಾದರೂ ಪ್ರತಿಫಲ ಸಿಕ್ಕೇ ಸಿಗುತ್ತದೆ ಎಂದರು.


ಶಿಕ್ಷಣ ಕ್ಷೇತ್ರಕ್ಕೆ ಮಠಗಳ ಕೊಡುಗೆ ದೊಡ್ಡದಾಗಿದೆ. ಅವುಗಳು ಇರದಿದ್ದರೆ ಈ ಭಾಗದ ಶಿಕ್ಷಣ ಹೇಗಿರುತ್ತಿತ್ತು ಎಂದು ಊಹಿಸುವುದೂ ಅಸಾಧ್ಯ. ಬಿವಿವಿ ಸಂಘ ಬಿಟ್ಟರೆ ಬದುಕು, ಭಾವನೆ ಇಲ್ಲ. ಅನ್ನ, ಜ್ಞಾನ ದಾಸೋಹ ನೀಡುತ್ತಿದೆ ಗುರು ಶಿಷ್ಯರ ಬಾಂಧವ್ಯ ಸ್ಮರಣೀಯ ಎಂದು ಹೇಳಿದರು.

ಚವಡಿಹಾಳದ ಬಸವೇಶ್ವರ ಗ್ರಾಮೀಣಾಭಿವೃದ್ಧಿ ಸಂಘದ ಪ್ರೊ.ಎ.ಎಸ್. ಪಾಟೀಲ ಮಾತನಾಡಿ, ವೃತ್ತಿಯಲ್ಲಿ ರಗಡಾಗಿದೆ ಎನ್ನುವವರಿಗೆ ನಾಯನೇಗಲಿ ಅವರ ಪುಸ್ತಕವು ವೃತ್ತಿಯಲ್ಲಿನ ಸೊಗಡಿನ ಮಾರ್ಗದರ್ಶಿಯಾಗಿದೆ. ಪುಸ್ತಕ ಜ್ಞಾನದ ಜತೆಗೆ ವಿದ್ಯಾರ್ಥಿಗಳಿಗೆ ಬದುಕಿನ ಜ್ಞಾನವನ್ನೂ ನೀಡಿದ್ದಾರೆ ಎಂದರು. ಸರೋಜಿನಿದೇವಿ ಇದ್ದರು.

## ಮಾ.26ರಂದು ಗ್ರಾಹಕರ ಸಂವಾದ ಸಭೆ


ರಾಯಚೂರು ಮಾ.24 (ಕರ್ನಾಟಕ ವಾರ್ತೆ): ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ-01ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಚೇರಿಯಲ್ಲಿ ಮಾ.26ರ ಬೆಳಿಗ್ಗೆ 11ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಗ್ರಾಹಕರ ಸಂವಾದ ಸಭೆ ಏರ್ಪಡಿಸಲಾಗಿದ್ದು, ವಿದ್ಯುತ್ ಗ್ರಾಹಕರು ವಿದ್ಯುತ್ ದೂರುಗಳ ಬಗ್ಗೆ ಸಭೆಗೆ ಹಾಜರಾಗಿ ದೂರಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ-01ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕರ್ನಾಟಕ ಎಂದಿಗೂ ಮರೆಯಬಾರದ ಎಲ್.ಜಿ.ಹಾವನೂರ್









ಅರಸು–ಹಾವನೂರು ಜೋಡಿ.ಕರ್ನಾಟಕದಾದ್ಯಂತ ಸುತ್ತಾಡಿ ಮೂಡಿಸಿದ ಜಾಗೃತಿಯ ಪರಿಣಾಮವಾಗಿ ಅದುವರೆಗೆ ರಾಜಕಾರಣದ ಮುಖ್ಯಧಾರೆಗೆ ಪ್ರವೇಶ ಪಡೆಯದಿದ್ದ ದೇವಾಡಿಗ,ಬಿಲ್ಲವ,ಮುಸ್ಲಿಮ್, ಮೀನುಗಾರರು,ಕ್ರಿಶ್ಚಿಯನ್,ಬ್ರಾಹ್ಮಣ,ರಜಪೂತ,ಬಲಿಜ, ಲಮಾಣಿ,ಗಾಣಿಗ,ಮಾದಿಗ,ಪತ್ತಾರ್,ಕುರುಬರು,ವಾಲ್ಮೀಕಿ,ದಲಿತರು ಹೇಳ ಹೆಸರಿಲ್ಲದ ಸಮುದಾಯಗಳ ಸುಮಾರು 60–70 ಶಾಸಕರು ವಿಧಾನಸಭೆ ಪ್ರವೇಶಿಸುವಂತೆ ಮಾಡಿದ್ದು ನಾಡಿನ ಸಾಮಾಜಿಕ ನ್ಯಾಯದ ಹಾದಿಗೆ ಹೊಸ ದಿಕ್ಕು ತೋರಿತು.

ನಾಡಿನ ಕಾನೂನು ತಜ್ಞರಲ್ಲಿ ಪ್ರಮುಖರು,ದಕ್ಷಿಣ ಆಫ್ರಿಕಾದ ಸಂವಿಧಾನ ರಚನೆ ಸಲಹಾ ಸಮಿತಿ ಸದಸ್ಯ, ಕನ್ನಡ ನಾಡಿನ ಹಿಂದುಳಿದ ವರ್ಗಗಳ ಪಾಲಿನ ಅಂಬೇಡ್ಕರ್ ಎಂದೇ ಕರೆಯಬಹುದಾದ ಎಲ್.ಜಿ.ಹಾವನೂರ್ ಅವರನ್ನು ಇಂದು ನಾಡು ಮರೆಯುತ್ತಿದೆ.

ಎಂದಿಗೂ ಮರೆಯಬಾರದ ಅವರನ್ನು ಸಮಾಜ ವಿಸ್ಮೃತಿಗೆ ಸರಿಸುತ್ತಿದೆ. ಬದುಕಿನುದ್ದಕ್ಕೂ ಎದುರಾದ ಅವಮಾನಗಳನ್ನು ಬೆಳವಣಿಗೆಯ ಮೆಟ್ಟಿಲುಗಳನ್ನಾಗಿ ಕಟ್ಟಿಕೊಳ್ಳುತ್ತ ಎತ್ತರೆತ್ತರಕ್ಕೆ ಬೆಳೆದ ಈ ಮಹಾನ್ ಚೇತನದ ಬದುಕು ಸಾಧನೆಗಳನ್ನು ಸ್ಮರಿಸುವದರೊಂದಿಗೆ, ಅವರು ಕಂಡ ಸಮ ಸಮಾಜದ ಕನಸನ್ನು ನನಸಾಗಿಸಬೇಕಾದ ಹಾದಿಯನ್ನು ನಾವು ಮತ್ತೆ ಮತ್ತೆ ಸ್ಪಷ್ಟಪಡಿಸಿಕೊಳ್ಳುವ ಅಗತ್ಯವಿದೆ.

ಈಗಿನ ಹಾವೇರಿ ಜಿಲ್ಲೆಯ ಅಗಡಿ ಗ್ರಾಮದಲ್ಲಿ ಗೂಳಪ್ಪ ಹಾಗೂ ದುರ್ಗಮ್ಮ ದಂಪತಿಗಳ ನಾಲ್ಕನೇಯ ಮಗನಾಗಿ 1927 ರ ಮಾರ್ಚ್ 25 ರಂದು ಜನಿಸಿದ ಲಕ್ಷ್ಮಣ ಜಿ.ಹಾವನೂರ್ ಅವರು, ರಾಣೆಬೆನ್ನೂರಿನ ಬೇಡರ ಓಣಿಯಲ್ಲಿ ಇತರೆ ಸಹ ಹಿಂದುಳಿದ ಸಮುದಾಯಗಳೊಂದಿಗಿನ ಸೌಹಾರ್ದ ವಾತಾವರಣ ನಡುವೆ ಬೆಳೆಯುತ್ತ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಪಡೆದರು. ಗರಡಿಮನೆಯಲ್ಲಿ ಸಾಮು ತೆಗೆಯುತ್ತ ಕಟ್ಟುಮಸ್ತಾದ ದೇಹದಾರ್ಢ್ಯದೊಂದಿಗೆ ಬೆಳೆದರು.ಶಟಲ್ ಬ್ಯಾಡ್ಮಿಂಟನ್ ಅವರ ಹವ್ಯಾಸವಾಗಿತ್ತು.

ದೇಶದ ಬಹುಸಂಖ್ಯಾತ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯದ ಮೂಲಕ ಸಮ ಸಮಾಜವನ್ನು ನಿರ್ಮಿಸಬೇಕೆಂಬ ಕನಸು ಕಂಡು ಅದನ್ನು ನನಸಾಗಿಸಲು ಶ್ರಮಿಸಿದ ಮಹಾನ್ ಚೇತನ ಎಲ್.ಜಿ.ಹಾವನೂರ ಅವರು, ಬಾಲ್ಯದಿಂದಲೂ ಬಡತನ,ಹಸಿವು,ಅವಮಾನಗಳನ್ನು ಅರಗಿಸಿಕೊಂಡವರು, ಉಂಡ ನೋವುಗಳೇ ಸಾಮಾಜಿಕ ಸ್ವಾಸ್ಥ್ಯಕ್ಕೆ ಅಗತ್ಯವಿರುವ ಮದ್ದನ್ನು ರೂಪಿಸುವ ನಿಟ್ಟಿನಲ್ಲಿ ಅವರನ್ನು ಅಣಿಗೊಳಿಸಿದವು.

ಪ್ರಾಥಮಿಕಹಾಗೂಪ್ರೌಢಶಿಕ್ಷಣವನ್ನುರಾಣೆಬೆನ್ನೂರಿನಲ್ಲಿ ಪಡೆದ ಎಲ್.ಜಿ.ಹಾವನೂರು ಅವರು ಈಗ ಶಂಕರ್ ಚಿತ್ರಮಂದಿರ ಇರುವ ಸ್ಥಳದಲ್ಲಿ ಆಗ ಇದ್ದ ತಮ್ಮ ಬಂಧು ಕನಕಪ್ಪಜ್ಜನವರ ಕಟ್ಟಿಗೆ ಅಡ್ಡೆಯ ಬೆಳಕಿನಲ್ಲಿ ಅಭ್ಯಾಸ ಮಾಡುತ್ತಿದ್ದರು.ನಂತರ ಮುಂಬಯಿನ ಜೆ ಜೆ ಸ್ಕೂಲ್ ಆಫ್ ಆರ್ಟ್ಸ್‌ನಿಂದ ಡ್ರಾಯಿಂಗ್ ಮತ್ತು ಪೇಂಟಿಂಗ್ ಪರೀಕ್ಷೆ ಉತ್ತೀರ್ಣರಾದರು.

ಧಾರವಾಡದಲ್ಲಿ ಪದವಿ ವ್ಯಾಸಂಗ ಮಾಡುವಾಗ ಹಾಸ್ಟೇಲಿನಲ್ಲಿ ಮೇಲ್ವರ್ಗಗಳಿಂದ ಅವಮಾನಿತರಾಗಿ ವಾರ್ಡನ್ ಅವರಿಂದ ಹೊರಗೆ ಹಾಕಿಸಿಕೊಂಡ ಹಾವನೂರ್ ಅವರು, ನಂತರ ಅಂಚೆ ಇಲಾಖೆಯಲ್ಲಿ ಕೆಲಸಕ್ಕೆ ಸೇರಿಕೊಳ್ಳುತ್ತಾರೆ. ಇವರಲ್ಲಿನ ಪ್ರತಿಭೆ ಗುರುತಿಸಿದ ಪೋಸ್ಟ್ ಮಾಸ್ಟರ್ ಒಬ್ಬರು ಇವರನ್ನು ಕಾನೂನು ಪದವಿ ಪಡೆಯಲು ಪ್ರೇರೇಪಿಸಿ ಬೆಳಗಾವಿಗೆ ಕಳಿಸುತ್ತಾರೆ.ಬೆಳಗಾವಿಯ ಆರ್ ಎಲ್ ಎಸ್ ಕಾನೂನು ಕಾಲೇಜಿನಿಂದ ಎಲ್ಎಲ್‌ಬಿ ಪದವಿ ಪಡೆದು ಮುಂಬಯಿನಲ್ಲಿ ವಕೀಲಿ ವೃತ್ತಿಯ ಸನ್ನದು ಪಡೆದು ರಾಣೆಬೆನ್ನೂರಿನಲ್ಲಿ ವೃತ್ತಿ ಪ್ರಾರಂಭಿಸಿದರು.ಇವರ ಶಿಕ್ಷಣಕ್ಕೆ ಅವರ ಅಣ್ಣ ಲಿಂಗಪ್ಪ ಹಾವನೂರು ಅವರ ಪ್ರೋತ್ಸಾಹವಿತ್ತು.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಜನರಿಗಿಂತಲೂ ಕಷ್ಟದ ,ಸಾಮಾಜಿಕವಾಗಿ ಅವಮಾನಿತರಾಗಿ ಬದುಕು ಸವೆಸಬೇಕಾಗಿದ್ದ ನಾಯಿಂದ(ಹಡಪದ),ಕುಂಬಾರ,ನೇಕಾರ,

ಬೆಸ್ತ,ದರ್ಜಿ,ಮಡಿವಾಳ,ಬೇಡ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡಲು 1956 ರಲ್ಲಿ ರಾಣೆಬೆನ್ನೂರಿನಲ್ಲಿ ಹಿಂದುಳಿದ ಜಾತಿಗಳ ಸಮ್ಮೇಳನ ಸಂಘಟಿಸಿದರು.

ಆರ್.ನಾಗನಗೌಡ ಸಮಿತಿಯು ನೀಡಿದ್ದ ಹಿಂದುಳಿದ ವರ್ಗಗಳ ವರದಿಯನ್ನು ಸುಪ್ರೀಂ ಕೋರ್ಟ್ ಅನೂರ್ಜಿತಗೊಳಿಸಿದಾಗ ಆಗಿನ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರು ಮೀಸಲಾತಿಗೆ ಜಾತಿ ಪರಿಗಣನೆ ಇಲ್ಲ ಎಂಬ ಆದೇಶ ಹೊರಡಿಸುತ್ತಾರೆ. ಇದನ್ನು ಪ್ರಶ್ನಿಸಿ ಎಲ್ ಜಿ ಹಾವನೂರು ದೊಡ್ಡ ಮಟ್ಟದ ಸಂವಿಧಾನಾತ್ಮಕ ಹೋರಾಟ ಪ್ರಾರಂಭಿಸುತ್ತಾರೆ.

ಹಿಂದುಳಿದವರ ಏಳಿಗೆಗಾಗಿ ತಮ್ಮ ವಿದ್ವತ್ತನ್ನೆಲ್ಲ ಧಾರೆ ಎರೆದು ಹೋರಾಡಿದರು.ದೇವರಾಜ ಅರಸು ಅವರು ಇವರಲ್ಲಿನ ಈ ಕಾಳಜಿಯನ್ನು ಕಂಡು ಅವರಲ್ಲಿ ಸೂಕ್ತ ನಾಯಕತ್ವ ಗುರುತಿಸಿದರು.1969 ರಲ್ಲಿ ಕಾಂಗ್ರೆಸ್ ವಿಭಜನೆಯಾದಾಗ ದೇವರಾಜ ಅರಸು ಅವರಿಗೆ ಪ್ರಮುಖ ಸಲಹೆಗಾರರಾಗಿ ಅಧಿಕೃತವಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿದರು. 1971 ರಲ್ಲಿ ರಾಜ್ಯ ಬುಡಕಟ್ಟು ಸಮಾವೇಶ ಆಯೋಜಿಸಿದರು.

ಬೆಂಗಳೂರಿನಲ್ಲಿ ವಕೀಲಿ ವೃತ್ತಿ ನಡೆಸುತ್ತಿದ್ದ ಎಲ್ ಜಿ ಹಾವನೂರ ಅವರ ಕಚೇರಿಯಲ್ಲಿ ಓರಿಸ್ಸಾ ಹೈಕೋರ್ಟಿನ ನಿವೃತ್ತ ಮುಖ್ಯ ನ್ಯಾಯಮೂರ್ತಿ, ಮಾಜಿ ಸಂಸದರಾದ ಎನ್.ವೈ.ಹನುಮಂತಪ್ಪ ,

ನಿವೃತ್ತ ನ್ಯಾಯಮೂರ್ತಿ ಎಸ್.ಆರ್.ನಾಯಕ್, ಹಿರಿಯ ನ್ಯಾಯವಾದಿ ಪ್ರೊ.ರವಿವರ್ಮ ಕುಮಾರ್, ಮಾಜಿ ಸಚಿವ ಎಂ.ಪಿ.ಪ್ರಕಾಶ್ ಮತ್ತಿತರರು ಹಾವನೂರ ಅವರ ಪ್ರಮುಖ ಶಿಷ್ಯ ಮತ್ತು ಆಪ್ತ ಬಳಗದಲ್ಲಿದ್ದರು.

ಅರಸು–ಹಾವನೂರು ಜೋಡಿ ಕರ್ನಾಟಕದಾದ್ಯಂತ ಸುತ್ತಾಡಿ ಮೂಡಿಸಿದ ಜಾಗೃತಿಯ ಪರಿಣಾಮವಾಗಿ ಅದುವರೆಗೆ ರಾಜಕಾರಣದ ಮುಖ್ಯಧಾರೆಗೆ ಪ್ರವೇಶ ಪಡೆಯದಿದ್ದ ದೇವಾಡಿಗ, ಬಿಲ್ಲವ, ಮುಸ್ಲಿಮ್, ಮೀನುಗಾರರು, ಕ್ರಿಶ್ಚಿಯನ್, ಬ್ರಾಹ್ಮಣ, ರಜಪೂತ, ಬಲಿಜ, ಲಮಾಣಿ, ಗಾಣಿಗ, ಮಾದಿಗ, ಪತ್ತಾರ್, ಕುರುಬರು, ವಾಲ್ಮೀಕಿ, ದಲಿತರು ಹೇಳ ಹೆಸರಿಲ್ಲದ ಸಮುದಾಯಗಳ ಸುಮಾರು 60–70 ಶಾಸಕರು ವಿಧಾನಸಭೆ ಪ್ರವೇಶಿಸುವಂತೆ ಮಾಡಿದ್ದು ನಾಡಿನ ಸಾಮಾಜಿಕ ನ್ಯಾಯದ ಹಾದಿಗೆ ಹೊಸ ದಿಕ್ಕು ತೋರಿತು. 1972 ರಲ್ಲಿ ದೇವರಾಜ ಅರಸು ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಎಲ್.ಜಿ.ಹಾವನೂರ ಅವರ ಅಧ್ಯಕ್ಷತೆಯಲ್ಲಿ ಯುವರಾಜಕಾರಣಿಗಳಾದ ಧರ್ಮಸಿಂಗ್,ವೈ.ರಾಮಚಂದ್ರ,ಕೆಎರ್ ನಾಯ್ಡು,

ಕೆ.ಎಂ.ನಾಗಣ್ಣ, ಎ.ಎಂ. ಚೆಟ್ಟಿಯವರು ಸದಸ್ಯರಾಗಿದ್ದ ಹಿಂದುಳಿದ ವರ್ಗಗಳ ಆಯೋಗ ರಚನೆಯಾಯಿತು.193 ಗ್ರಾಮಗಳು,185 ಪಟ್ಟಣ,ನಗರ ಪ್ರದೇಶಗಳಿಗೆ ಭೇಟಿ ನೀಡಿ ಸುಮಾರು 171 ಕ್ಕೂ ವಿವಿಧ ಜಾತಿಗಳ 3.5 ಲಕ್ಷಕ್ಕೂ ಹೆಚ್ಚು ಜನರನ್ನು ಮುಖಾಮುಖಿಯಾಗಿ ಭೇಟಿಯಾಗಿ ವೈಜ್ಞಾನಿಕವಾಗಿ ಮಾಹಿತಿ ಕ್ರೋಢೀಕರಿಸಿ ಸಂವಿಧಾನದ 16(4) ನೇ ವಿಧಿಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಲು ಕಾರಣವಾದ ವರದಿ ನೀಡಿದರು.

ಕರ್ನಾಟಕದ ಸಾಮಾಜಿಕ ವ್ಯವಸ್ಥೆಯಲ್ಲಿ ದೊಡ್ಡ ಸಂಚಲನವೇ ಉಂಟಾಯಿತು. ಪ್ರಬಲ ಜಾತಿಗಳು ಹಾವನೂರರ ವಿರುದ್ಧ ಹರಿಹಾಯ್ದರು.

ಹಾವನೂರರ ಮೇಲೆ ಹಲ್ಲೆ,ಕೊಲೆ ಯತ್ನಗಳು ನಡೆದವು. ವೀರಶೈವ ಮಹಾಸಭೆ ಅಧ್ಯಕ್ಷರಾಗಿದ್ದ ಜೆ.ಬಿ.ಮಲ್ಲಾರಾಧ್ಯರ ನೇತೃತ್ವದಲ್ಲಿ ಹಾವನೂರ ಅವರ ವಿರುದ್ಧ ರಾಜ್ಯದೆಲ್ಲೆಡೆ ಹೋರಾಟಗಳು ನಡೆದವು.ಹಾವನೂರ ಅವರು ಸ್ಥಾಪಿಸಿದ್ದ ಕಾನೂನು ಕಾಲೇಜಿನ ಪ್ರಾಚಾರ್ಯರಾಗಿದ್ದ ರೈತನಾಯಕ ಪ್ರೊ.ಎಂ.ಡಿ.ನಂಜುಂಡಸ್ವಾಮಿ,

ಸಾಹಿತಿ ಪಿ.ಲಂಕೇಶ್, ಪತ್ರಕರ್ತರಾದ ಎಸ್.ಜಿ.ಮೈಸೂರುಮಠ,

ಕಲ್ಲೇ ಶಿವೋತ್ತಮರಾವ್ ಮೊದಲಾದವರು ಹಾವನೂರರ ಬೆಂಬಲಕ್ಕೆ ನಿಲ್ಲುತ್ತಾರೆ.

ಸರ್ಕಾರ ಹಾವನೂರ ವರದಿ ಅಂಗೀಕರಿಸಿ ಹಿಂದುಳಿದ ಸಮುದಾಯಗಳಿಗೆ ಶೇ.20,ಹಿಂದುಳಿದ ಜಾತಿಗಳಿಗೆ ಶೇ.10,ಹಿಂದುಳಿದ ಪಂಗಡಗಳಿಗೆ ಶೇ.5 ಹಾಗೂ ವಿವಿಧ ಸಮುದಾಯಗಳ ಬಡವರ ವಿಶೇಷ ಗುಂಪಿಗೆ ಶೇ.5 ರಷ್ಟು ಮೀಸಲಾತಿಯನ್ನು ಪ್ರಾರಂಭದಲ್ಲಿ ಶಿಕ್ಷಣಕ್ಕೆ ನೀಡಿ,ನಂತರ ಸರ್ಕಾರಿ ಉದ್ಯೋಗಕ್ಕೂ ಮೀಸಲಾತಿ ವಿಸ್ತರಿಸಲಾಯಿತು.

ಈ ವರದಿಯಿಂದ ಪ್ರೇರಿತರಾಗಿ ಭಾರತದಾದ್ಯಂತ 1978 ರಲ್ಲಿ ಬಿ.ಪಿ.ಮಂಡಲ್ ವರದಿ ರೂಪುಗೊಂಡಿತು.

1976 ರಲ್ಲಿ ರಾಜ್ಯಸಭಾ ಸದಸ್ಯರನ್ನಾಗಿ ಹಾವನೂರು ಅವರನ್ನು ದೇವರಾಜ ಅರಸು ನೇಮಿಸುತ್ತಾರೆ.ನಂತರ 1978 ರಲ್ಲಿ ಮತ್ತೊಮ್ಮೆ ಸರ್ಕಾರ ಅಧಿಕಾರಕ್ಕೆ ಬಂದಾಗ ಹಾವನೂರ ಅವರಿಂದ ರಾಜ್ಯಸಭೆ ಸದಸ್ಯತ್ವಕ್ಕೆ ರಾಜೀನಾಮೆ ಕೊಡಿಸಿ ವಿಧಾನಪರಿಷತ್ ಸದಸ್ಯತ್ವ ನೀಡಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಮಂತ್ರಿಯನ್ನಾಗಿ ನೇಮಿಸುತ್ತಾರೆ.

ಹಿಂದುಳಿದವರು,ಪರಿಶಿಷ್ಟರ ಏಳಿಗೆಗೆ ಹಲವು ಐತಿಹಾಸಿಕ ಕ್ರಮಗಳನ್ನು ಅನುಷ್ಠಾನ ಮಾಡಿದರು.ಶೈಕ್ಷಣಿಕ ಅಭಿವೃದ್ಧಿಗಾಗಿ ಆಶ್ರಮ ಶಾಲೆಗಳು,ಹಿಂದುಳಿದ ಜಾತಿಗಳ ವಿದ್ಯಾರ್ಥಿಗಳಿಗೆ ಉಚಿತ ಊಟ,ವಸತಿ ಸೌಕರ್ಯದ ಹಾಸ್ಟೇಲುಗಳನ್ನು ಸ್ಥಾಪಿಸುವ ಕ್ರಾಂತಿಕಾರಿ ಹೆಜ್ಜೆಯನ್ನು ಇರಿಸಿದ್ದು ರಾಜ್ಯದ ಇಂದಿನ ಸಾಮಾಜಿಕ ಸಮಾನತೆಗೆ ಹಾಕಿದ ಭದ್ರ ಬುನಾದಿಯಾಗಿದೆ.

**ಅರಸು ನಿಷ್ಠೆ ಮೆರೆದ ಹಾವನೂರು ಸಿಎಂ ಹುದ್ದೆಯ ಆಹ್ವಾನದ ನಿರಾಕರಣೆ**

ಕಾಂಗ್ರೆಸ್ ವಿಭಜನೆಗೊಂಡು ಅರಸು ಹಿಂದಿದ್ದ ಅನೇಕ ಶಾಸಕರು ಹೊಸ ಮುಖ್ಯಮಂತ್ರಿ ಆರ್. ಗುಂಡೂರಾಯರ ಹಿಂದೆ ಹೋದಾಗ ,ಎಲ್.ಜಿ.ಹಾವನೂರ ಅಚಲವಾಗಿ ಅರಸು ಅವರೊಂದಿಗೆ ನಿಲ್ಲುತ್ತಾರೆ.

ಆಗ ಪ್ರಧಾನಿ ಇಂದಿರಾ ಗಾಂಧಿಯವರು ಖುದ್ದು ಫೋನ್ ಮಾಡಿ ಪಕ್ಷಕ್ಕೆ ಆಹ್ವಾನಿಸುತ್ತಾರೆ.ಪಕ್ಷದ ಅಧ್ಯಕ್ಷ ಸ್ಥಾನ ,ಬೇಕಿದ್ದರೆ ಮುಖ್ಯಮಂತ್ರಿಯನ್ನಾಗಿ ಮಾಡುವುದಾಗಿ ಹೇಳಿದಾಗ ಹಾವನೂರು ಅವರು ನಯವಾಗಿ ತಿರಸ್ಕರಿಸಿ ಬೇಕಾದರೆ

ರಾಜಕೀಯ ಬಿಟ್ಟು ಅರಸು ಅವರೊಂದಿಗೆ ಇರುತ್ತೇನೆ. ಅರಸು ಅವರನ್ನು ಬಿಟ್ಟು ರಾಜಕೀಯ ಮಾಡಲಾರೆ ಎಂದು ಹೇಳುತ್ತಾರೆ.ಈ ಘಟನೆಗೆ ,ಸಂಭಾಷಣೆಗೆ ಸಾಕ್ಷಿಯಾಗಿರುವ ಪ್ರೊ.ರವಿವರ್ಮ ಕುಮಾರ್ ಅವರು ಅನೇಕ ಕಡೆ ಈ ನೆನಪನ್ನು ದಾಖಲಿಸಿದ್ದಾರೆ.

ನ್ಯಾಯಮೂರ್ತಿ ದೇಸಾಯಿಯವರು ಇ.ಎಸ್. ವೆಂಕಟ ರಾಮಯ್ಯನವರೊಂದಿಗೆ ಖಾಸಗಿಯಾಗಿ ಮಾತನಾಡುತ್ತ,"ಹಾವನೂರ ಅವರಂತಹ ಕಾನೂನು ಪಂಡಿತರು ,ಹಿಂದುಳಿದ ವರ್ಗಗಳಿಗಾಗಿ ಅವರು ಮಾಡಿದ ಹೋರಾಟ,ತ್ಯಾಗ ಬೇರೆ ಯಾವ ದೇಶದಲ್ಲಿಯಾದರೂ ಆಗಿದ್ದರೆ ಪ್ರತಿಯೊಂದು ಊರುಗಳಲ್ಲಿಯೂ ಅವರ ಅಮೃತಶಿಲೆಯ ಪ್ರತಿಮೆ ಎದ್ದು ನಿಲ್ಲುತ್ತಿದ್ದವು" ಎಂದು ಹೇಳಿದ್ದನ್ನು ಸಮಕಾಲೀನರು ದಾಖಲಿಸಿದ್ದಾರೆ. ನ್ಯಾ. ದೇಸಾಯಿಯವರ ಮಾತುಗಳೇ ಸಾಕು ನಮ್ಮ ಸಮಾಜ,ಹಾವನೂರರ ಪ್ರಯತ್ನದಿಂದ ಮುಂದೆ ಬರಲು ಸಾಧ್ಯವಾದ ಹಿಂದುಳಿದ ವರ್ಗಗಳ ಸಮುದಾಯಗಳೂ ಕೂಡ

ಎಲ್.ಜಿ.ಹಾವನೂರು ಎಂಬ ಮಹಾನ್ ನೇತಾರನನ್ನು ಮರೆತಿವೆ.ಹುಟ್ಟು ಹಬ್ಬದ ನೆಪದಲ್ಲಾದರೂ ಕೂಡ ಆ ಚೇತನ ಸ್ಮರಿಸಿ , ಅವರ ಮಾರ್ಗವನ್ನು ಗಟ್ಟಿಗೊಳಿಸುವ ಸಾಮಾಜಿಕ ನ್ಯಾಯಕ್ಕೆ ಅರ್ಥ ಬರುವಂತೆ ಮಾಡಿದ ಮಹನೀಯರನ್ನು ಗೌರವಿಸುವ ಕಾರ್ಯಗಳು ಆಗಬೇಕಾಗಿದೆ.



ಮಂಜುನಾಥ ಡಿ.ಡೊಳ್ಳಿನ, ಬೆಂಗಳೂರು
(ಲೇಖಕರು ಕರ್ನಾಟಕಸರ್ಕಾರದ ವಾರ್ತಾ ಮತ್ತು ಸಾರ್ವಜನಿಕಸಂಪರ್ಕ ಇಲಾಖೆಯಲ್ಲಿಜಂಟಿ ನಿರ್ದೇಶಕರಾಗಿ ಸೇವೆಸಲ್ಲಿಸುತ್ತಿದ್ದಾರೆ.
ಅವರ ಸಂಪರ್ಕ ದೂರವಾಣಿ:9480654365)



ಬೀದರ:ಬ್ರಿಮ್ಸ್ ಮೆಡಿಕಲ್ ಕಾಲೇಜ ಸೆಮಿನಾರ್ ಹಾಲ್‌ನಲ್ಲಿ ನಡೆದ ವಿಶ್ವ ಕ್ಷಯರೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಡಾಕುಳಗಿ ಗ್ರಾಮ ಪಂಚಾಯತ ಪಿಡಿಓ ರಾಜಶೇಖರ ಬುಳ್ಳಾ ಅವರಿಗೆ ಡಾಕುಳಗಿ ಕ್ಷಯ ಮುಕ್ತ ಗ್ರಾಮ ಪಂಚಾಯತ ಎಂದು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು. ಜಿ.ಪಂ.ಸಿಇಓ ಡಾ.ಗಿರೀಶ ಬದೋಲೆ,ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಧ್ಯಾನೇಶ್ವರ ನೀರಗುಡೆ ಹಾಗೂ ಇತರರು ಉಪಸ್ಥಿತರಿದ್ದರು.

# ಮಟ್ಕಾ ಜೂಜಾಟ: ಇಬ್ಬರ ಬಂಧನ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ;ಮಾ.24: ಪಟ್ಟಣದ ಪಾಪವ್ವ ನಗರದಲ್ಲಿ ಈಚೆಗೆ ಮಟ್ಕಾಜೂಜಾಟದಲ್ಲಿತೊಡಗಿದ್ದ ಮೂವರು ಆರೋಪಿಗಳಲ್ಲಿ ಶಾಮ,ಬಸವರಾಜನನ್ನುನಗರ ಪೊಲೀಸ್ ಠಾಣೆ ಪೊಲೀಸರು ಬಂಧಿಸಿ ಅವರಿಂದ ಒಟ್ಟು 7850 ರೂಪಾಯಿ ನಗದು, 12 ಮಟಕಾ ಚೀಟಿ, 8 ಸಾವಿರ ರೂಪಾಯಿ ಒಟ್ಟು ಮೌಲ್ಯದ ಎರಡು ಮೊಬೈಲ್ ಗಳನ್ನು ವಶಪಡಿಸಿಕೊಂಡಿದ್ದಾರೆ.

ನಾಮದೇವ ಸ್ಥಳದಿಂದ ಓಡಿ ಹೋಗಿರುತ್ತಾನೆ. ಈ ಸಂಬಂಧ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸತ್ಕರ್ಮಗಳಿಂದ ಪುಣ್ಯ ಪ್ರಾಪ್ತಿ:ಪ್ರದೀಪ ಗುರೂಜಿ

ಮಲ್ಲಮ್ಮನುಡಿ ವಾರ್ತೆ

ಬಾಗಲಕೋಟೆ,ಮಾ.24– ಮನುಷ್ಯ ದುಷ್ಟರ ಸಂಗ ಮಾಡಿದುಷ್ಕರ್ಮಿಯಾಗದೇ ಸಜ್ಜನರ ಸಂಗ ಮಾಡಿ ಸತ್ಕರ್ಮಗಳಿಂದ ಪುಣ್ಯ ಪ್ರಾಪ್ತಿ ಮಾಡಿಕೊಳ್ಳಬೇಕು ಎಂದು ಆಧ್ಯಾತ್ಮಿಕ ಚಿಂತಕ ಪ್ರದೀಪಗುರೂಜಿಹೇಳಿದರು.

ತಾಲೂಕಿನ ಬೆನಕಟ್ಟಿ ಗ್ರಾಮದಲ್ಲಿ ಸ್ಥಳೀಯ ಹೇಮ ವೇಮನ ಸದ್ಬೋಧನ ಪೀಠ ನೀಲಪ್ಪ ಬಾಳಕ್ಕನವರ ನಿವಾಸದಲ್ಲಿ ಹಮ್ಮಿಕೊಂಡಿದ್ದ ಮನೆ ಮನದಲ್ಲಿ ಮಹಾಯೋಗಿ ವೇಮನರ 178 ನೆಯ ಮಾಸಿಕ ತತ್ವ ಚಿಂತನ ಕಾರ್ಯಕ್ರಮದಲ್ಲಿವೇಮನರ ವಚನ ಕುರಿತು ಸದ್ಬೋಧನೆ ನೀಡಿದರು.



ಮಹಾನುಭಾವರು, ಶರಣರು, ಸಂತರು, ಯೋಗಿಗಳು ತಮ್ಮ ಅಂತರಂಗದ ಚಕ್ಷುವಿನಿಂದ ಪರಮಾತ್ಮನನ್ನು ಕಂಡವರು. ಹಾಗೆಯೇ ಮನುಷ್ಯ ತನ್ನ ಮನಸ್ಸನ್ನು ಸ್ವಚ್ಛವಾಗಿರಿಸಿಕೊಂಡು ನೀತಿವಂತನಾಗಿ ಬಾಳಿ ಪರೋಪಕಾರದ ಕಾರ್ಯಗಳನ್ನು ಗೈದು ಪುಣ್ಯ ಪ್ರಾಪ್ತಿ ಮಾಡಿಕೊಳ್ಳಬೇಕು ಎಂದ ಗುರೂಜಿ, ದುಷ್ಟರ ಸಂಗ ಮಾಡಿದುಷ್ಕರ್ಮಿಯಾಗದೇ ಸಜ್ಜನರ ಸಂಗದಿಂದ ಸತ್ಕರ್ಮಿಯಾಗಿ ಬಾಳಬೇಕು ಎಂದು ಹೇಳಿದರು.

ಅತಿಥಿಯಾಗಿದ್ದ ನಿವೃತ್ತ ಶಿಕ್ಷಕ ಡಿ.ಪಿ.ಅಮಲಝರಿ, ಬದುಕಿನ ಅರ್ಥ ತಿಳಿದುಕೊಂಡವನಲ್ಲಿ ನೀತಿವಂತಿಕೆ ಇರುತ್ತದೆ. ಆ ದಿಸೆಯಲ್ಲಿ ಮನುಷ್ಯ ಸತ್ಸಂಗ, ಸತ್ಕಾರ್ಯಗಳಲ್ಲಿ ಪಾಲ್ಗೊಂಡುಪುನೀತನಾಗಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶಿಕ್ಷಕ ಸಂಜಯ ನಡುವಿನಮನಿ, ವ್ಯಕ್ತಿ ಎಷ್ಟು ದಿನ ಬದುಕಿದ ಎನ್ನುವುದು ಮುಖ್ಯವಲ್ಲ, ಯಾವ ರೀತಿ ಬದುಕಿದ ಅನ್ನುವುದು ಮುಖ್ಯ. ಹೇಮರಡ್ಡಿ ಮಲ್ಲಮ್ಮ ಹಾಗೂ ಮಹಾಯೋಗಿ ವೇಮನರ ಬದುಕು, ಅವರು ನೀಡಿದ ಸಂದೇಶಗಳು ಎಲ್ಲರ ಬಾಳಿಗೂ ಬೆಳಕಾಗಿವೆ ಎಂದು ಹೇಳಿದರು.

ಹೇಮರಡ್ಡಿ ಮಲ್ಲಮ್ಮ ದೇವಸ್ಥಾನ ಸಮಿತಿ ಅಧ್ಯಕ್ಷ ಪಂಡಿತ ಮಾಚಾ ಅಧ್ಯಕ್ಷತೆ ವಹಿಸಿದ್ದರು. ವೆಂಕಟೇಶ ಕೇರಿ, ಶಂಕರ ಯಡಹಳ್ಳಿ, ಹನಮಂತ ಬಾಳಕ್ಕನವರ, ಆರ್.ಎಚ್.ಕುಲಕರ್ಣಿ, ರವಿ ಬಾಳಕ್ಕನವರ, ಬಸವರಾಜ ರಡ್ಡೇರ, ಸದ್ಬೋಧನ ಪೀಠದ ಟಿ.ಎಚ್.ಸನ್ನಪ್ಪನವರ, ಮಾಲತೇಶ ಅಮಾತೆಪ್ಪನವರ ಇದ್ದರು.ಹೇಮರಡ್ಡಿಮಲ್ಲಮ್ಮ ಭಜನಾ ಸಂಘದವರು ವೇಮನ ವಚನ ಪಠಣ ಮಾಡಿದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330. Editor: Ramesh Reddy, Office Ph. No: +91 9449732000.